ಗುರುವಾರ, ಡಿಸೆಂಬರ್ 28, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 358 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಭಾರತೀಯ ವಿಮಾನನಿಲ್ದಾಣಗಳ ಪ್ರಾಧಿಕಾರದಲ್ಲಿ 119 ಹುದ್ದೆಗಳು ಖಾಲಿ ಇದ್ದು, ಅರ್ಜಿ ಆಹ್ವಾನಿಸಲಾಗಿದೆ

2023 ಮರೆಯುವ ಮುನ್ನ... 9

ನೆದರ್ಲೆಂಡ್ಸ್ ತಲುಪಿದ ಬಾಳೆಹಣ್ಣು 10
ಲೋಪ ಆಗದಂತೆ ಎಚ್ಚರವಹಿಸಿ: ರಾಜನಾಥ್ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,038 ▲	21,654 ▲	₹64,980 (ಬೆಂಗಳೂರು) ▲	₹76,400 (ಬೆಂಗಳೂರು) ▼	83.34 ▼

ರಾಜ್ಯ ಸರ್ಕಾರಕ್ಕೆ ಹೈಕೋರ್ಟ್‌ನ ಏಕಸದಸ್ಯ ಪೀಠದ ಕಟ್ಟುನಿಟ್ಟಿನ ಆದೇಶ

‘ಗುಜರಿ’ ಬಸ್‌ಗೆ ಬ್ರೇಕ್

85 2023ರಲ್ಲಿ ಗುಜರಿಗೆ ಹಾಕಿರುವ ಕೆಎಸ್‌ಆರ್‌ಟಿಸಿ ಬಸ್‌ಗಳು

ಸಂಸ್ಥೆ ಮತ್ತು ಚಾಲನೆಯಲ್ಲಿರುವ ಬಸ್‌ಗಳು

ಕೆಎಸ್‌ಆರ್‌ಟಿಸಿ	ಬಿಎಂಟಿಸಿ	ಎನ್‌ಡಬ್ಲ್ಯುಕೆಆರ್‌ಟಿಸಿ	ಕೆಕೆಆರ್‌ಟಿಸಿ	ಒಟ್ಟು
7,546	5,588	4,579	4,304	22,017

• ಬಿ.ಎಸ್.ಷಣ್ಮುಖಪ್ಪ

ಬೆಂಗಳೂರು: ‘ನಿಗದಿತ ಕಿಲೋ ಮೀಟರ್‌ಗಳಷ್ಟು ಸಂಚರಿಸಿದ ಬಳಿಕ ಸಾಮರ್ಥ್ಯ ಕಳೆದುಕೊಂಡ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಕೆಎಸ್‌ಆರ್‌ಟಿಸಿ) ಬಸ್‌ಗಳನ್ನು ಗುಜರಿಗೆ ಹಾಕಬೇಕು. ಗುಜರಿಗೆ ಹಾಕಿದ ಬಸ್‌ಗಳನ್ನು ಪುನಃ ನಗರ, ಹಳ್ಳಿಗಳ ಮಾರ್ಗ ಅಥವಾ ಮತ್ತಾವುದೇ ಮಾರ್ಗ-ಗಳಲ್ಲಿನ ಸಂಚಾರಕ್ಕೆ ಬಳಸಲು ಅನುಮತಿ ನೀಡಬಾರದು’ ಎಂದು ಹೈಕೋರ್ಟ್, ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ.

ಆಯಸ್ಸು ಮುಗಿದು ಗುಜರಿ ಸೇರಬೇಕಾಗಿದ್ದ ಕೆಎಸ್‌ಆರ್‌ಟಿಸಿ ಬಸ್ ಅನ್ನು ರಸ್ತೆಗಿಳಿಸಿ ಅಪಘಾತ ಉಂಟು ಮಾಡಿ ಇಬ್ಬರು ವಿದ್ಯಾರ್ಥಿಗಳ ಸಾವಿಗೆ ಕಾರಣವಾಗಿದ್ದ ಪ್ರಕರಣವೊಂದರಲ್ಲಿ ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಮಹತ್ವದ ತೀರ್ಪು ಪ್ರಕಟಿಸಿದೆ.

‘ಬಸ್‌ಗಳು ಸಂಚಾರಕ್ಕೆ ಅರ್ಹವಾಗಿರುವ ಬಗ್ಗೆ ಪ್ರತಿ ವರ್ಷವೂ ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಯಿಂದ (ಆರ್‌ಟಿಒ) ಸುಸ್ಥಿತಿ ದೃಢೀಕರಣ ಪತ್ರ (ಎಫ್‌ಸಿ) ಪಡೆಯಬೇಕು. ಆರ್‌ಟಿಒ ವತಿಯಿಂದ ದೃಢೀಕರಣ ಪತ್ರ ಪಡೆದ ಬಸ್‌ಗಳಿಗೆ ಮಾತ್ರವೇ ರಸ್ತೆಯಲ್ಲಿ ಸಂಚರಿಸಲು ಅನುಮತಿ ನೀಡಬೇಕು. ಕಾಲಕಾಲಕ್ಕೆ ಬಸ್‌ಗಳ ಪರಿಶೀಲನೆ ನಡೆಸಿ ದುರಸ್ತಿ ಮಾಡಬೇಕು’ ಎಂಬುದೂ ಸೇರಿದಂತೆ ನ್ಯಾಯಪೀಠ ವಿವಿಧ ನಿರ್ದೇಶನಗಳನ್ನು ನೀಡಿದೆ.

ಸಂಗ್ರಹ ಚಿತ್ರ — ಪ್ರಜಾವಾಣಿ ಚಿತ್ರ

ಗುಜರಿಗೆ ಹಾಕುವ ಬಸ್‌ಗಳ ಸಂಚಾರದ ಮಿತಿ

ಬಸ್‌ಗಳ ವಿಧ	ಎಷ್ಟು ಕಿ.ಮೀ ಸಂಚಾರ
ಸಾಮಾನ್ಯ ಬಸ್‌ಗಳು	11 ಲಕ್ಷ ಕಿ.ಮೀ.
ಮರ್ಸಿಡಿಸ್ ಬೆಂಜ್ ಬಸ್‌ಗಳು	13 ಲಕ್ಷ ಕಿ.ಮೀ.
ವೊಲ್ವೊ ಬಸ್‌ಗಳು	15 ಲಕ್ಷ ಕಿ.ಮೀ.

‘ಅಪಘಾತಕ್ಕೆ ಕಾರಣವಾದ ಬಸ್, ಅಪಘಾತಕ್ಕೂ ಮುನ್ನವೇ 10 ಲಕ್ಷ ಕಿಲೋ ಮೀಟರ್‌ಗಳಷ್ಟು ಸಂಚರಿಸಿತ್ತು. ಅದರ ಎಂಜಿನ್ ಸ್ಟಾರ್ಟ್ ಆಗುತ್ತಿರಲಿಲ್ಲ. ಹಾರನ್ ಇರಲಿಲ್ಲ ಎಂಬುದು ನಿಜಕ್ಕೂ ಚಿಂತಾಜನಕ ವಿಚಾರ’ ಎಂಬ ಅಂಶವನ್ನು ತೀರ್ಪಿನಲ್ಲಿ ಉಲ್ಲೇಖಿಸಿರುವ ನ್ಯಾಯಪೀಠ, ‘ಬಸ್‌ಗಳನ್ನು ಸುಸ್ಥಿತಿಯಲ್ಲಿ ಇಡುವುದು ಕೆಎಸ್‌ಆರ್‌ಟಿಸಿಯ ಆದ್ಯ ಕರ್ತವ್ಯ. ಇಂತಹ ಬಸ್‌ಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಾರಿಗೆ ಸೌಲಭ್ಯಗಳನ್ನು ಇನ್ನಷ್ಟು ಉತ್ತಮ-ಗೊಳಿಸಬೇಕಿದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ತೀರ್ಪಿನಲ್ಲಿ ವಿವರಿಸಲಾದ ನಿರ್ದೇಶನಗಳು ಕಟ್ಟುನಿಟ್ಟಾಗಿ ಜಾರಿಗೊಳ್ಳುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರು ಸೂಕ್ತ ಕ್ರಮ ಕೈಗೊಳ್ಳುವಂತೆ ನ್ಯಾಯಪೀಠ ಆದೇಶಿಸಿದೆ.

4ನೇ ಪುಟ ನೋಡಿ

ಚಾಲಕನ ಸಮರ್ಥನೆ

‘ಅಪಘಾತಕ್ಕೆ ಕಾರಣವಾದ ಬಸ್‌ನಲ್ಲಿ ಹಲವು ತಾಂತ್ರಿಕ ದೋಷಗಳಿವೆ. ಇದನ್ನು ಸಂಚಾರಕ್ಕೆ ತೆಗೆದುಕೊಂಡು ಹೋಗುವುದಿಲ್ಲ ಎಂದು ಕೆಎಸ್‌ಆರ್‌ಟಿಸಿ ಸಂಚಾರ ನಿಯಂತ್ರಕರಿಗೆ ನಾನು ತಿಳಿಸಿದ್ದೆ. ಆದರೂ, ನಿಯಂತ್ರಕರು, ಪ್ರಯಾಣಿಕರು ಕಾಯುತ್ತಿದ್ದಾರೆ. ಇದನ್ನೇ ತೆಗೆದುಕೊಂಡು ಹೋಗಬೇಕು. ನೀವು ನನ್ನ ಮಾತು ಕೇಳದೇ ಹೋದರೆ ಮೇಲಧಿಕಾರಿಗಳಿಗೆ ದೂರು ನೀಡುತ್ತೇನೆ ಎಂದು ಬೆದರಿಕೆ ಹಾಕಿದ್ದರು. ಅನಿವಾರ್ಯವಾಗಿ ಬಸ್ ತೆಗೆದುಕೊಂಡು ಹೋದೆ. ಮೊದಲಿಗೆ ಬಸ್ ಸ್ಟಾರ್ಟ್ ಆಗಲೇ ಇಲ್ಲ. ಪ್ರಯಾಣಿಕರಿಂದ ತಳ್ಳಿಸಿಕೊಂಡು ಬಸ್ ಸ್ಟಾರ್ಟ್ ಮಾಡಲಾಯಿತು. ಬಸ್‌ಗೆ ಹಾರನ್ ಕೂಡಾ ಇರಲಿಲ್ಲ. ಈ ದೋಷಗಳಿಂದಲೇ ಅಪಘಾತ ಉಂಟಾಗಿತ್ತು. ಆದ್ದರಿಂದ, ವಿಚಾರಣಾ ನ್ಯಾಯಾಲಯಗಳು ವಿಧಿಸಿರುವ ಶಿಕ್ಷೆಯನ್ನು ರದ್ದುಪಡಿಸಬೇಕು’ ಎಂದು ಅಪಘಾತಗೊಂಡ ಬಸ್ ಚಾಲಕ ಸತೀಶ್ ಅರ್ಜಿಯಲ್ಲಿ ಕೋರಿದ್ದರು.

ಬೆಳಕಿನ ಚಿತ್ತಾರ... ಅಯೋಧ್ಯೆಯ ಸರಯೂ ನದಿ ದಡದ ದೇವಾಲಯವೊಂದು ಬುಧವಾರ ‘ಧ್ವನಿ ಮತ್ತು ಬೆಳಕು’ ಪ್ರದರ್ಶನದ ವೇಳೆ ಬಣ್ಣದ ದೀಪಗಳಿಂದ ಕಂಗೊಳಿಸಿತು –ಎಎಫ್‌ಪಿ ಚಿತ್ರ

ಸಾಲದ ಆ್ಯಪ್‌ಗಳ ಜಾಹೀರಾತಿಗೆ ನಿರ್ಬಂಧ

ನವದೆಹಲಿ (ಪಿಟಿಐ): ಜನರಿಗೆ ಸಾಲದ ಆಮಿಷವೊಡ್ಡಿ ಹಣ ವಂಚಿಸುವ ಆ್ಯಪ್‌ಗಳ ಜಾಹೀರಾತುಗಳನ್ನು ಪ್ರಸಾರ ಮಾಡಬಾರದು ಎಂದು ಸಾಮಾಜಿಕ ಜಾಲತಾಣಗಳು ಹಾಗೂ ಡಿಜಿಟಲ್ ಸೇವಾ ತಾಣಗಳಿಗೆ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯ ಸೂಚಿಸಿದೆ.

‘ಇಂಟರ್‌ನೆಟ್ ಸೇವೆ ಬಳಸಿಕೊಂಡು ಈ ಆ್ಯಪ್‌ಗಳು ಜನರನ್ನು ದಾರಿತಪ್ಪಿಸುವ ಜೊತೆಗೆ ಶೋಷಿಸುತ್ತಿವೆ. ಸಚಿವಾಲಯವು ಇಂತಹ ಆ್ಯಪ್‌ಗಳ ವಿರುದ್ಧ ಕ್ರಮಕ್ಕೆ ಮುಂದಾಗಿದೆ. ಹಾಗಾಗಿ, ಇವುಗಳು ನೀಡುವ ಜಾಹೀರಾತುಗಳ ಪ್ರಸಾರಕ್ಕೆ ನಿರ್ಬಂಧ ಹೇರಲಾಗಿದೆ’ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆಯ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ತಿಳಿಸಿದ್ದಾರೆ.

ಕಾಂಗ್ರೆಸ್ ಜತೆ ಬಸನಗೌಡ ಶಾಮೀಲು: ಪದಾಧಿಕಾರಿಗಳ ಕಿಡಿ

ಯತ್ನಾಳ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬಸನಗೌಡ ಪಾಟೀಲ

ಬೆಂಗಳೂರು: ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಕುಟುಂಬದ ವಿರುದ್ಧ ಬಂಡಾಯ ಸಾರಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಕ್ರಮ ಜರುಗಿಸುವಂತೆ ಬಿಜೆಪಿ ರಾಜ್ಯ ಘಟಕದ ನೂತನ ಪದಾಧಿಕಾರಿಗಳು ಮೊದಲ ಸಭೆಯಲ್ಲೇ ಆಗ್ರಹಿಸಿದ್ದಾರೆ.

ಪಕ್ಷದ ರಾಜ್ಯ ಘಟಕದ ನೂತನ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಬುಧವಾರ ನಡೆದ ಪದಾಧಿಕಾರಿಗಳ ಸಭೆಯಲ್ಲಿ ಯತ್ನಾಳ ವರ್ತನೆ ಕುರಿತು ಹಲವು ಪದಾಧಿಕಾರಿಗಳು ಆಕ್ಷೇಪ ಎತ್ತಿದ್ದಾರೆ. ಅವರ ವಿರುದ್ಧ ಕ್ರಮ ಜರುಗಿಸಲು ಬಿಜೆಪಿ ವರಿಷ್ಠರಿಗೆ ಪತ್ರ ಬರೆಯುವಂತೆ ವಿಜಯೇಂದ್ರ ಅವರನ್ನು ಒತ್ತಾಯಿಸಿದ್ದಾರೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ವಿಜಯೇಂದ್ರ ಹಾಗೂ ವಿಧಾನಸಭೆ ವಿರೋಧ ಪಕ್ಷದ ನಾಯಕರನ್ನಾಗಿ ಆರ್. ಅಶೋಕ ಅವರನ್ನು ನೇಮಿಸಿದ ಬಳಿಕ ಯತ್ನಾಳ ವಾಗ್ದಾಳಿ ತೀವ್ರಗೊಳಿಸಿದ್ದಾರೆ. ‘ಕೋವಿಡ್ ಅವಧಿಯಲ್ಲಿ ಯಡಿಯೂರಪ್ಪ ₹40,000 ಕೋಟಿಯಷ್ಟು ಭ್ರಷ್ಟಾಚಾರ ನಡೆಸಿರುವ ದಾಖಲೆಗಳಿವೆ’ ಎಂದು ಮಂಗಳವಾರವಷ್ಟೆ ಹೇಳಿಕೆ ನೀಡಿದ್ದರು.

‘ಯತ್ನಾಳ ಅವರ ನಡವಳಿಕೆ ಕುರಿತು ಬುಧವಾರದ ಸಭೆಯಲ್ಲಿ ಪ್ರಸ್ತಾಪಿಸಿದ ಹಲವು ಪದಾಧಿಕಾರಿಗಳು, ಕ್ರಮಕ್ಕೆ ಶಿಫಾರಸು ಮಾಡುವಂತೆ ಆಗ್ರಹಿಸಿದರು. ಪಕ್ಷ ವಿರೋಧಿ ಹೇಳಿಕೆ ನೀಡುತ್ತಿರುವುದರಿಂದ ಸಂಘಟನೆ ಕೆಲಸ ಮಾಡಲು ಕಷ್ಟವಾಗುತ್ತದೆ. ಈ ರೀತಿಯ ನಡವಳಿಕೆಗೆ ಕಡಿವಾಣ ಹಾಕದಿದ್ದರೆ ಪಕ್ಷಕ್ಕೆ ಹಿನ್ನಡೆಯಾಗುತ್ತದೆ. ಪಕ್ಷದ ವರಿಷ್ಠರಿಗೆ ನೀವು ಪತ್ರ ಬರೆಯಿರಿ, ನಾವೆಲ್ಲರೂ ಸಹಿ ಮಾಡುತ್ತೇವೆ ಎಂಬುದಾಗಿ ಬಹುತೇಕ ಪದಾಧಿಕಾರಿಗಳು ವಿಜಯೇಂದ್ರ ಅವರನ್ನು ಒತ್ತಾಯಿಸಿದರು’ ಎಂದು ಮೂಲಗಳು ತಿಳಿಸಿವೆ.

10ನೇ ಪುಟ ನೋಡಿ

‘ಒಳಗಿರುವವರೇ ಕುಲಗೆಡಿಸುತ್ತಾರೆ’

ಸದಾನಂದ ಗೌಡ

‘ಪಕ್ಷದ ಒಳಗಿರುವವರೇ ರಾಜ್ಯದಲ್ಲಿ ಬಿಜೆಪಿಯನ್ನು ಕುಲಗೆಡಿಸುತ್ತಾರೆ. ಹಿಂದೆ ಯಾವತ್ತೂ ಈ ರೀತಿಯ ಬೆಳವಣಿಗೆ ನಡೆದಿರಲಿಲ್ಲ. ಈ ಬಗ್ಗೆ ಪಕ್ಷದ ಕೇಂದ್ರ ನಾಯಕರು ಮಾತನಾಡದೇ ಇರುವುದು ದುರ್ದೈವದ ಸಂಗತಿ’ ಎಂದು ಸಂಸದ ಡಿ.ವಿ. ಸದಾನಂದ ಗೌಡ ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಪಕ್ಷದ ಬಗ್ಗೆ ಬಾಯಿಗೆ ಬಂದಂತೆ ಮಾತನಾಡುವವರಿಗೆ ಬೀಗ ಹಾಕುವ ಕೆಲಸ ಆಗಬೇಕಿದೆ. ಕಾರ್ಯಕರ್ತರು ನಮ್ಮನ್ನು ಪ್ರಶ್ನಿಸುವ ಪರಿಸ್ಥಿತಿ ಉದ್ಭವಿಸಿದೆ. ಅದಕ್ಕೆ ಕಡಿವಾಣ ಹಾಕಬೇಕಿದೆ’ ಎಂದು ಹೇಳಿದರು.

‘ಬಿಜೆಪಿ ರಾಜ್ಯ ಘಟಕದ ಪದಾಧಿಕಾರಿಗಳ ನೇಮಕ ಕುರಿತು ಮಾಧ್ಯಮಗಳ ಮೂಲಕ ತಿಳಿಯಬೇಕಾಗಿ ಬಂದಿದ್ದು ಬೇಸರ ಮೂಡಿಸಿದೆ. ಪದಾಧಿಕಾರಿಗಳ ನೇಮಕದ ವಿಚಾರ ನಿಮಗೆ ಗೊತ್ತಿ-ರಲಿಲ್ಲವೆ ಎಂದು ಕಡಬದಲ್ಲಿ ಕಾರ್ಯಕರ್ತರು ನನ್ನನ್ನು ಪ್ರಶ್ನಿಸಿದರು. ಅದಕ್ಕೆ ಏನು ಉತ್ತರ ಕೊಡಲಿ’ ಎಂದು ಕೇಳಿದರು.

ಒಳ ಪುಟಗಳು

ಇಂಗ್ಲಿಷ್ ನಾಮಫಲಕಗಳ ಧ್ವಂಸ, ಮಸಿ 4
‘ಇಂಡಿಯಾ’ದ ಪ್ರಧಾನಿ ಅಭ್ಯರ್ಥಿ ಬಿಂಬಿಸುವ ಅಗತ್ಯವಿಲ್ಲ 11

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೊಬ್ಬರಿ ಎಂಎಸ್‌ಪಿ ₹250 ಏರಿಸಿದ ಕೇಂದ್ರ

ನವದೆಹಲಿ (ಪಿಟಿಐ): ದರ ಕುಸಿತದಿಂದ ಕಂಗಾಲಾಗಿರುವ ಕೊಬ್ಬರಿ ಬೆಳೆಗಾರರಿಗೆ ಅನುಕೂಲ ಕಲ್ಪಿಸಲು ಕೇಂದ್ರ ಸರ್ಕಾರವು, ಬುಧವಾರ 2024ರ ಋತುವಿಗೆ ಕೊಬ್ಬರಿಯ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಹೆಚ್ಚಿಸಿದೆ.

ಒಂದು ಕ್ವಿಂಟಲ್ ಉಂಡೆ ಕೊಬ್ಬರಿಗೆ ₹250 ಹಾಗೂ ಹೋಳಾದ (ಮಿಲ್ಲಿಂಗ್) ಕೊಬ್ಬರಿಗೆ ₹300 ಹೆಚ್ಚಿಸಿದೆ. ಒಂದು ಕ್ವಿಂಟಲ್ ಉಂಡೆ ಕೊಬ್ಬರಿಗೆ ₹12 ಸಾವಿರ ಹಾಗೂ ಹೋಳಾದ ಕೊಬ್ಬರಿಗೆ ₹11,160 ಬೆಂಬಲ ಬೆಲೆ ನಿಗದಿ ಪಡಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಸಭೆಯು ಈ ನಿರ್ಧಾರ ಕೈಗೊಂಡಿದೆ. ಕಳೆದ ಒಂದು ದಶಕದಿಂದಲೂ ಕೊಬ್ಬರಿಯ ಕನಿಷ್ಠ ಬೆಂಬಲ ಬೆಲೆಯನ್ನು ಹೆಚ್ಚಿಸಲಾಗುತ್ತಿದೆ. 2014–15ರಲ್ಲಿ ಹೋಳು ಕೊಬ್ಬರಿಗೆ ಎಂಎಸ್‌ಪಿ ₹5,250 ಇತ್ತು. ಉಂಡೆ ಕೊಬ್ಬರಿಗೆ ₹5,550 ಇತ್ತು. 2024–25ನೇ ವರ್ಷದಲ್ಲಿ ಎಂಎಸ್‌ಪಿಯನ್ನು ಹೋಳು ಕೊಬ್ಬರಿಗೆ ₹11,160 ಮತ್ತು ಉಂಡೆ ಕೊಬ್ಬರಿಗೆ ₹12,000ಕ್ಕೆ ಏರಿಕೆ ಮಾಡಲಾಗಿದೆ ಎಂದು ಸರ್ಕಾರ ಹೇಳಿದೆ.

1.33 ಲಕ್ಷ ಟನ್ ಖರೀದಿ: 2023ರ ಋತುವಿನಲ್ಲಿ ಕೇಂದ್ರ ಸರ್ಕಾರವು ಬೆಂಬಲ ಬೆಲೆ ಯೋಜನೆಯಡಿ 90 ಸಾವಿರ ರೈತರಿಂದ 1.33 ಲಕ್ಷ ಟನ್ ಕೊಬ್ಬರಿ ಖರೀದಿಸಿದೆ. ಇದಕ್ಕಾಗಿ ₹1,493 ಕೋಟಿ ವ್ಯಯಿಸಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಖರೀದಿಯು ಶೇ 227ರಷ್ಟು ಹೆಚ್ಚಳವಾಗಿದೆ ಎಂದು ವಿವರಿಸಿದೆ. ರಾಷ್ಟ್ರೀಯ ಸಹಕಾರ ಗ್ರಾಹಕರ ಮಹಾಮಂಡಳ (ಎನ್‌ಸಿಸಿಎಫ್) ಮತ್ತು ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಮಹಾ ಮಂಡಳ (ನಾಫೆಡ್) ಕೊಬ್ಬರಿ ಖರೀದಿಸುವ ನೋಡಲ್ ಏಜೆನ್ಸಿಗಳಾಗಿವೆ. ಬೆಲೆ ಪ್ರೋತ್ಸಾಹ ಯೋಜನೆಯಡಿ ಕೊಬ್ಬರಿ, ಸಿಪ್ಪೆ ಸುಲಿದ ತೆಂಗಿನ ಕಾಯಿಯನ್ನು ಖರೀದಿಸುತ್ತವೆ.

ಹೋಳಾದ ಕೊಬ್ಬರಿಯು ಹೆಚ್ಚಾಗಿ ತೈಲ ಉತ್ಪಾದನೆಗೆ ಬಳಕೆಯಾಗುತ್ತದೆ. ಕೇರಳ ಮತ್ತು ತಮಿಳುನಾಡಿನಲ್ಲಿ ಕೊಬ್ಬರಿ ಉತ್ಪಾದನೆ ಹೆಚ್ಚಿದೆ. ಕರ್ನಾಟಕದಲ್ಲಿ ಹೆಚ್ಚಾಗಿ ಉಂಡೆ ಕೊಬ್ಬರಿ ಉತ್ಪಾದನೆಯಾಗುತ್ತದೆ.

ಜಾಗತಿಕ ಮಟ್ಟದಲ್ಲಿ ಕೊಬ್ಬರಿ ಬೆಲೆ ಕುಸಿದಿದೆ. ಉತ್ಪಾದನಾ ವೆಚ್ಚದ ಶೇ 50ರಷ್ಟು ಹೆಚ್ಚು ಕನಿಷ್ಠ ಬೆಂಬಲ ಬೆಲೆಯನ್ನು ನೀಡಲು ಸರ್ಕಾರ ಮುಂದಾಗಿದೆ

ಅನುರಾಗ್ ಠಾಕೂರ್, ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ

‘ಎಂ.ಫಿಲ್ ಮಾನ್ಯತೆ ಪಡೆದ ಪದವಿಯಲ್ಲ’

ನವದೆಹಲಿ (ಪಿಟಿಐ): ‘ಎಂ.ಫಿಲ್ ಮಾನ್ಯತೆ ಪಡೆದ ಪದವಿಯಲ್ಲ, ಇಂತಹ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬೇಡಿ’ ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ವಿದ್ಯಾರ್ಥಿಗಳಿಗೆ ಸೂಚಿಸಿದೆ. ಅಲ್ಲದೆ ಎಂ.ಫಿಲ್ ಕೋರ್ಸ್‌ಗಳನ್ನು ನಡೆಸುತ್ತಿರುವ ವಿಶ್ವವಿದ್ಯಾನಿಲಯಗಳಿಗೂ ಎಚ್ಚರಿಕೆ ನೀಡಿದೆ.

ಕೆಲವು ವಿಶ್ವವಿದ್ಯಾನಿಲಯ-ಗಳು ಎಂ.ಫಿಲ್ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಿರುವುದನ್ನು ಗಮನಿಸಿರುವ ಯುಜಿಸಿ, 2023–24ನೇ ಶೈಕ್ಷಣಿಕ ವರ್ಷದಲ್ಲಿ ಎಂ.ಫಿಲ್ ಪ್ರವೇಶಾತಿ ನಿಲ್ಲಿಸಲು ಶೀಘ್ರವೇ ಕ್ರಮ ಕೈಗೊಳ್ಳಬೇಕು ಎಂದು ವಿಶ್ವವಿದ್ಯಾಲಯಗಳಿಗೆ ಸೂಚಿಸಿದೆ.

‘ಉನ್ನತ ಶಿಕ್ಷಣ ಸಂಸ್ಥೆಗಳು ಎಂ.ಫಿಲ್ ಕೋರ್ಸ್‌ಗಳನ್ನು ನಡೆಸುವಂತಿಲ್ಲ ಎಂದು 2022ರ ಯುಜಿಸಿ ನಿಯಮಾವಳಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ’ ಎಂದು ಯುಜಿಸಿ ಕಾರ್ಯದರ್ಶಿ ಮನೀಷ್ ಜೋಶಿ ತಿಳಿಸಿದ್ದಾರೆ.

ಎಂ.ಫಿಲ್ ಕೋರ್ಸ್ ಅನ್ನು ನವೆಂಬರ್ 2022ರಲ್ಲಿಯೇ ಯುಜಿಸಿ ಕೈಬಿಟ್ಟಿದೆ.

ಮಣಿಪುರದ ಇಂಫಾಲ್‌ನಿಂದ ಮುಂಬೈವರೆಗೆ ರಾಹುಲ್ ಸಂಚಾರ

ಜ. 14ರಿಂದ ‘ಭಾರತ್ ನ್ಯಾಯ ಯಾತ್ರೆ’

ಪ್ರಜಾವಾಣಿ ವಾರ್ತೆ

ರಾಹುಲ್ ಗಾಂಧಿ

ನವದೆಹಲಿ: ದಕ್ಷಿಣ ಭಾರತದ ತುದಿಯಾದ ಕನ್ಯಾ-ಕುಮಾರಿಯಿಂದ ಕಾಶ್ಮೀರದವರೆಗೆ ಐದು ತಿಂಗಳು ನಡೆದ ‘ಭಾರತ್ ಜೋಡೊ ಯಾತ್ರೆ’ ಬಳಿಕ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 2024ರ ಜ. 14ರಿಂದ ‘ಭಾರತ್ ನ್ಯಾಯ ಯಾತ್ರೆ’ ಕೈಗೊಳ್ಳಲಿದ್ದಾರೆ.

ಜನಾಂಗೀಯ ಹಿಂಸಾಚಾರದಿಂದ ನಲುಗಿರುವ ಮಣಿಪುರದ ಇಂಫಾಲ್‌ನಿಂದ ಮುಂಬೈವರೆಗಿನ ಈ ಯಾತ್ರೆಯು 66 ದಿನ ನಡೆಯಲಿದೆ. ಲೋಕಸಭೆ ಚುನಾವಣೆ ಮುನ್ನ ಕೈಗೊಳ್ಳಲಿರುವ ಯಾತ್ರೆಯಲ್ಲಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ನ್ಯಾಯಕ್ಕೆ ಸಂಬಂಧಿಸಿದ ವಿಷಯಗಳು ಪ್ರಮುಖವಾಗಿ ಪ್ರಸ್ತಾಪವಾಗಲಿವೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಯಾತ್ರೆಗೆ ಹಸಿರು ನಿಶಾನೆ ತೋರುವರು. ಮಾರ್ಚ್ 20ರಂದು ಯಾತ್ರೆ ಕೊನೆಗೊಳ್ಳಲಿದೆ.

ರಾಹುಲ್ ಅವರ ಈ ಎರಡನೇ ಯಾತ್ರೆಯು ಪೂರ್ವದಿಂದ ಪಶ್ಚಿಮದ-ವರೆಗೆ 14 ರಾಜ್ಯಗಳ 85 ಜಿಲ್ಲೆಗಳಲ್ಲಿ 6,200 ಕಿ.ಮೀ ಕ್ರಮಿಸಲಿದೆ. ಯಾತ್ರೆಯು ಹೈಬ್ರಿಡ್ ಮಾದರಿಯಲ್ಲಿ ಇರಲಿದ್ದು ಬಸ್ ಸಂಚಾರ ಮತ್ತು ಪಾದಯಾತ್ರೆ ಎರಡನ್ನೂ ಒಳಗೊಂಡಿರಲಿದೆ.

‘ನ್ಯಾಯಕ್ಕಾಗಿ ಯಾತ್ರೆ’ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ನ್ಯಾಯವನ್ನು ಖಾತರಿಪಡಿಸುವ ಉದ್ದೇಶ ಹೊಂದಿದೆ

ಜೈರಾಮ್ ರಮೇಶ್, ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಪರ್ಕ)

ಇದು ಕೇವಲ ಘೋಷಣೆ ಅಷ್ಟೆ. ಇದರಿಂದ ಜನರನ್ನು ಮೂರ್ಖರನ್ನಾಗಿ ಮಾಡಲು ಆಗುವುದಿಲ್ಲ. ಮೋದಿ ಅವರು ಈಗಾಗಲೇ ನ್ಯಾಯವನ್ನು ಖಚಿತಪಡಿಸಿದ್ದಾರೆ

ಮೀನಾಕ್ಷಿ ಲೇಖಿ ವಿದೇಶಾಂಗ ವ್ಯವಹಾರಗಳ ಖಾತೆಯ ರಾಜ್ಯ ಸಚಿವೆ

ವೈಶಿಷ್ಟ್ಯ

- ಬಸ್ ಪಯಣ ಮತ್ತು ಕಾಲ್ನಡಿಗೆಯ ಹೈಬ್ರಿಡ್ ಮಾದರಿ ಅಳವಡಿಸಿಕೊಳ್ಳಲಾಗಿದೆ; ರಾಹುಲ್ ಅವರು ಹೆಚ್ಚಾಗಿ ಬಸ್ಸಿನಲ್ಲೇ ಪಯಣಿಸುವರು. ಸ್ವಲ್ಪ ದೂರ ‘ಪಾದಯಾತ್ರೆ’ಯಲ್ಲೂ ಭಾಗವಹಿಸುವರು.
- ಯಾತ್ರೆಯು ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸ-ಗಢವನ್ನು ಹಾದು ಹೋಗಲಿದೆ. ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ಇಲ್ಲಿ ಕಾಂಗ್ರೆಸ್ ಸೋತಿತ್ತು.
- ‘ಭಾರತ್ ನ್ಯಾಯ ಯಾತ್ರೆ’ಯು 14 ರಾಜ್ಯಗಳ 85 ಜಿಲ್ಲೆಗಳಲ್ಲಿ 6,200 ಕಿ.ಮೀ ಸಂಚರಿಸಲಿದೆ, ಮಾರ್ಚ್ 20ರಂದು ಯಾತ್ರೆ ಪೂರ್ಣಗೊಳ್ಳಲಿದೆ.

ಯಾತ್ರೆಯು ಮಣಿಪುರ, ನಾಗಾಲ್ಯಾಂಡ್, ಅಸ್ಸಾಂ, ಮೇಘಾಲಯ, ಪಶ್ಚಿಮ ಬಂಗಾಳ, ಬಿಹಾರ, ಜಾರ್ಖಂಡ್, ಒಡಿಶಾ, ಛತ್ತೀಸಗಢ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ರಾಜಸ್ಥಾನ, ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ ಸಂಚರಿಸಲಿದೆ.

ಕಳೆದ ವರ್ಷದ ಸೆ. 7ರಿಂದ ಈ ವರ್ಷದ ಜ. 20ರವರೆಗೆ ಕನ್ಯಾಕುಮಾರಿಯಿಂದ ಶ್ರೀನಗರದವರೆಗೆ ನಡೆದ ‘ಭಾರತ್ ಜೋಡೊ ಯಾತ್ರೆ’ಯು 14 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಂಚರಿಸಿತ್ತು.

ಯುವಜನರೊಂದಿಗೆ ಸಂವಾದ: ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರು ಪಕ್ಷದ ಹೊಸ ಕಾರ್ಯಕ್ರಮವನ್ನು ಪ್ರಕಟಿಸಿದರು. ನಿರುದ್ಯೋಗ, ಬೆಲೆ ಏರಿಕೆಯಿಂದ ಜನರಿಗೆ ಆಗಿರುವ ತೊಂದರೆಗಳ ಬಗ್ಗೆ ಯಾತ್ರೆ ಒತ್ತು ನೀಡಲಿದೆ. ಯುವ ಜನರು, ಮಹಿಳೆಯರು ಮತ್ತು ದುರ್ಬಲ ವರ್ಗಗಳ ಜನರೊಂದಿಗೆ ಸಂವಾದವನ್ನು ಒಳಗೊಂಡಿರುತ್ತದೆ ಎಂದರು.

11ನೇ ಪುಟ ನೋಡಿ

MedPlus

50–80%* ರಿಯಾಯತಿ ದರದಲ್ಲಿ
ಮೆಡ್‌ಪ್ಲಸ್ ಬ್ರಾಂಡ್ ಔಷಧಿಗಳು
ಸುಮಾರು 9.5 ಲಕ್ಷಕ್ಕೂ ಅಧಿಕ ಗ್ರಾಹಕರು,
ಔಷಧಿಗಳ ಖರೀದಿಯಲ್ಲಿ ಸುಮಾರು 74.5 ಕೋಟಿಗೂ ಅಧಿಕ ಉಳಿತಾಯ ಮಾಡಿದ್ದಾರೆ!
ಇನ್ನು ನೀವು ಯಾವಾಗ ಉಳಿತಾಯ ಆರಂಭಿಸುವಿರಿ?

ನಮ್ಮ ವೈದ್ಯರು ಬರೆದು ಕೊಡುವ ಔಷಧಿಗಳೂ ದೊರೆಯುತ್ತವೆಯೆ?	ಹೌದು, ಮೆಡ್‌ಪ್ಲಸ್‌ನಲ್ಲಿ, ನಿಮಗೆ ಬರೆದುಕೊಡಲಾಗಿರುವ ಔಷಧಿಗಳ 80% ರಷ್ಟು ಔಷಧಿಗಳು ದೊರೆಯುತ್ತವೆ. ಈ ಔಷಧಿಗಳ ಶ್ರೇಣಿಯಲ್ಲಿ ಅಧಿಕ ರಕ್ತದೊತ್ತಡ, ಮಧುಮೇಹ, ಥೈರಾಯ್ಡ್, ಕೊಲೆಸ್ಟರಾಲ್, ಹೃದಯ ಕಾಯಿಲೆ ಮುಂತಾದ ಔಷಧಿಗಳ ಜೊತೆಗೆ ನೋವು, ಶೀತ, ಜ್ವರ, ಅಲರ್ಜಿ ಮತ್ತು ಸೋಂಕುಗಳ ಔಷಧಿ ಕೂಡ ಲಭ್ಯವಿರುತ್ತವೆ.
ಈ ಔಷಧಿಗಳ ಗುಣಮಟ್ಟ ಹೇಗಿರುತ್ತದೆ? ನಮ್ಮ ವೈದ್ಯರು ಶಿಫಾರಸ್ಸು ಮಾಡಿರುವ ಔಷಧಿಯಷ್ಟೆ ಗುಣಮಟ್ಟದ್ದಾಗಿರುತ್ತದೆಯೆ?	ದೇಶದ ಅತ್ಯುತ್ತಮ ಬ್ರಾಂಡ್‌ಗಳ ಔಷಧಿಗಳನ್ನು ಉತ್ಪಾದಿಸುವ ಸೌಲಭ್ಯಗಳಲ್ಲಿಯೇ# ಮೆಡ್‌ಪ್ಲಸ್ ಬ್ರಾಂಡ್‌ನ ಔಷಧಿಗಳನ್ನು ಉತ್ಪಾದಿಸಲಾಗುತ್ತದೆ. ಈ ಔಷಧಿಗಳನ್ನು ಮಾರುಕಟ್ಟೆಯಲ್ಲಿ ಲಭ್ಯವಿರುವ ಉತ್ತಮ ಔಷಧಿಗಳ ಮಾನದಂಡಗಳಿಗೆ ಅನುಗುಣವಾಗಿಯೇ ಮತ್ತು ಅವುಗಳಷ್ಟೆ ಉತ್ತಮವಾಗಿ ತಯಾರಿಸಲಾಗುತ್ತದೆ. #ಇದನ್ನು ನೀವು ಔಷಧಿಗಳ ಸ್ಟ್ರಿಪ್‌ನ ಮೇಲೆ ಉಲ್ಲೇಖಿಸಲಾಗಿರುವ ಉತ್ಪಾದಕರ ಹೆಸರನ್ನು ಪರಿಶೀಲಿಸುವ ಮೂಲಕ ತಿಳಿಯಬಹುದು.
ಗುಣಮಟ್ಟ ಒಂದೇ ಆಗಿದ್ದರೆ, 50–80% ರಿಯಾಯತಿ ದರದಲ್ಲಿ ನೀಡುವುದು ಹೇಗೆ ಸಾಧ್ಯ?	ಮಾರುಕಟ್ಟೆ ಖರ್ಚು ಹಾಗೂ ವಿತರಣಾ ವೆಚ್ಚದ ಕಾರಣಗಳಿಂದಾಗಿ ನೀವು ನಿಯಮಿತವಾಗಿ ಖರೀದಿಸುವ ಔಷಧಿಗಳು ದುಬಾರಿ ಎನಿಸುತ್ತವೆ. ಆದರೆ, ಮೆಡ್‌ಪ್ಲಸ್‌ನಲ್ಲಿ ಆ ರೀತಿಯ ಯಾವುದೇ ಹೆಚ್ಚುವರಿ ಮಾರುಕಟ್ಟೆ ಮತ್ತು ವಿತರಣಾ ವೆಚ್ಚಗಳಿರುವುದಿಲ್ಲ. ಹೀಗಾಗಿ 50–80% ರಿಯಾಯತಿ ದರದಲ್ಲಿ ಔಷಧಿಗಳನ್ನು ನೀಡಲು ಸಾಧ್ಯವಾಗುತ್ತದೆ.
ಇದು, ತಮ್ಮ ಸ್ವಂತ ಬ್ರಾಂಡ್‌ನ ಔಷಧಗಳನ್ನು ಮಾರಾಟ ಮಾಡುವುದಕ್ಕೆ ಫಾರ್ಮಸಿ ಕಂಪನಿಗಳು ಕಂಡುಕೊಂಡ ಸಹಜ ಪದ್ಧತಿಯೆ?	ಹೌದು, ವಿಶ್ವದಾದ್ಯಂತ ವಿಶೇಷವಾಗಿ ಯುಎಸ್ ರಾಷ್ಟ್ರಗಳಲ್ಲಿ ವಾಲ್‌ಗ್ರೀನ್ಸ್ ಮತ್ತು ಸಿವಿಎಸ್ ಎಂಬ ಫಾರ್ಮಸಿ ಸರಣಿಗಳು ತಮ್ಮದೇ ಸ್ವಂತ ಬ್ರಾಂಡ್‌ನ ಔಷಧಿಗಳನ್ನು ಮಾರಾಟ ಮಾಡುತ್ತವೆ. ಔಷಧಿಯೊಂದರ ಪೇಟೆಂಟ್ ಪೂರ್ಣಗೊಂಡ ಬಳಿಕ, ಇಂತಹ ಕಂಪನಿಗಳು ತಮ್ಮದೇ ಬ್ರಾಂಡ್‌ನಲ್ಲಿ ಅವುಗಳನ್ನು ಮಾರಾಟ ಮಾಡುತ್ತವೆ. ಹಿಂದಿನ ದಿನಗಳಲ್ಲಿ, ಭಾರತದಲ್ಲಿ, ಯಾವುದೇ ಕಂಪನಿಯು ತನ್ನ ಸ್ವಂತದ ಬ್ರಾಂಡ್‌ಗಳನ್ನು ತಯಾರಿಸುವಷ್ಟು, ಸಂಯುಕ್ತ ರಾಷ್ಟ್ರ ಮಾದರಿಯ ಗಾತ್ರ ಮತ್ತು ಪರಿಮಾಣ ಹೊಂದಿರಲಿಲ್ಲ. ಇದೀಗ, 4000 ಮಳಿಗೆಗಳನ್ನು ಮತ್ತು 4500 ಕೋಟಿಗೂ ಅಧಿಕ ವಹಿವಾಟು ಗಾತ್ರ ಮತ್ತು ಪರಿಮಾಣ ಹೊಂದಿರುವ ಮೆಡ್‌ಪ್ಲಸ್‌ಗೆ, ತನ್ನ ಸ್ವಂತ ಬ್ರಾಂಡ್ ತಯಾರಿಸುವ ಅವಕಾಶ ಲಭಿಸಿದೆ.

ನೀವು ಮೆಡ್‌ಪ್ಲಸ್‌ಗೆ ಭೇಟಿ ನೀಡಿದಾಗ, ಪರ್ಯಾಯ ಔಷಧಿಗಳನ್ನು ಕೇಳಿ ಪಡೆಯಿರಿ ಮತ್ತು ಸಾಕಷ್ಟು ಉಳಿತಾಯ ಮಾಡಿರಿ!
ಇಂದೇ ನಿಮ್ಮ ಸಮೀಪದ ಸ್ಟೋರ್‌ಗೆ ಭೇಟಿ ಕೊಡಿ ಅಥವಾ ಕರೆ ಮಾಡಿ 040–6700 6732
ವಾರ್ಷಿಕ ರೂ. 50/– ಚಂದಾದಾರಿಕೆ ಕೊಡುಗೆ ಸೀಮಿತ ಅವಧಿಗೆ ಮಾತ್ರ (ಸಾಮಾನ್ಯ ದರ ವಾರ್ಷಿಕ ರೂ.499/–)
*ಷ&ನಿ ಅನ್ವಯ ಡಿಪಿಸಿಒ ಉತ್ಪನ್ನಗಳ ಮೇಲಿನ ರಿಯಾಯತಿ ಭಿನ್ನವಾಗಿರುತ್ತದೆ.

ವರ್ಷಾಂತ್ಯದಲ್ಲಿ ‘ಸುವರ್ಣ’ ಸಂಭ್ರಮ

• ಖಲೀಲಅಹ್ಮದ ಶೇಖ

ಬೆಂಗಳೂರು: ವಿಧಾನಸಭೆ ಚುನಾವಣೆಯಿಂದಾಗಿ ವರ್ಷದ ಮೊದಲಾರ್ಧ ಸಾಂಸ್ಕೃತಿಕ ಚಟುವಟಿಕೆಗಳು ಸ್ತಬ್ಧವಾಗಿದ್ದರೆ, ವರ್ಷಾಂತ್ಯದಲ್ಲಿ ‘ಕರ್ನಾಟಕ’ ನಾಮಕರಣದ ಸುವರ್ಣ ವರ್ಷಾಚರಣೆ ಪ್ರಯುಕ್ತ ವಿವಿಧ ಸಮ್ಮೇಳನ, ಸಮಾರಂಭಗಳು ನಡೆದವು. ಈ ವರ್ಷವೂ ‘ಏರ್ ಶೋ’ ಹಾಗೂ ತಂತ್ರಜ್ಞಾನ ಶೃಂಗದಂತಹ ಕಾರ್ಯಕ್ರಮಗಳು ಇಡೀ ದೇಶದ ಗಮನ ಸೆಳೆಯುವಲ್ಲಿ ಯಶಸ್ವಿಯಾದವು.

ಸುವರ್ಣ ಸಂಭ್ರಮದ ಪ್ರಯುಕ್ತ 2023ರ ನ.1ರಿಂದ 2024ರ ನ.1ರವರೆಗೆ ವಿವಿಧ ಕಾರ್ಯಕ್ರಮಗಳನ್ನು ನಡೆಸುವುದಾಗಿ ಸರ್ಕಾರ ಘೋಷಿಸಿದೆ. ಇದರಿಂದಾಗಿ ಮುಂದಿನ ವರ್ಷವೂ ಸಾಂಸ್ಕೃತಿಕ ಕಲಾ ವೈಭವ ನಗರದಲ್ಲಿ ತೆರೆದುಕೊಳ್ಳುವ ಸಾಧ್ಯತೆಯಿದೆ. ಈ ಸಂದರ್ಭದಲ್ಲಿ 2023ರಲ್ಲಿ ನಗರದಲ್ಲಿ ನಡೆದ ಸಾಹಿತ್ಯ, ಸಂಸ್ಕೃತಿ, ಕೃಷಿ–ತೋಟಗಾರಿಕೆ, ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಗಳ ಪ್ರಮುಖ ಮೇಳ–ಸಮ್ಮೇಳನಗಳ ಹಿನ್ನೋಟ ಇಲ್ಲಿದೆ



ಯಲಹಂಕ ವಾಯುನೆಲೆಯಲ್ಲಿ ನಡೆದ ‘ಏರ್ ಶೋ’

- **ಜ.19ರಿಂದ ಜ.29:** ತೋಟಗಾರಿಕೆ ಇಲಾಖೆಯು ಇದೇ ಮೊದಲ ಬಾರಿಗೆ ಮೈಸೂರು ಉದ್ಯಾನ ಕಲಾ ಸಂಘವನ್ನು ಹೊರಗಿಟ್ಟು ಲಾಲ್‌ಬಾಗ್‌ನಲ್ಲಿ ಗಣರಾಜ್ಯೋತ್ಸವ ಪ್ರಯುಕ್ತ ಫಲಪುಷ್ಪ ಪ್ರದರ್ಶನ ನಡೆಸಿತು. ‘ಬೆಂಗಳೂರು ನಗರ ಇತಿಹಾಸ’ ವಿಷಯಾಧಾರಿತ ಫಲಪುಷ್ಪ ಪ್ರದರ್ಶನದಲ್ಲಿ ಲಕ್ಷಾಂತರ ಜನ ಪಾಲ್ಗೊಂಡಿದ್ದರು.
- **ಜ.20ರಿಂದ ಜ.22:** ಸಿರಿಧಾನ್ಯ ಮತ್ತು ಸಾವಯವ ಅಂತರ-ರಾಷ್ಟ್ರೀಯ ವಾಣಿಜ್ಯ ಮೇಳ ನಗರದ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ನಡೆಯಿತು. ಸಾವಯವ ಮತ್ತು ಸಿರಿಧಾನ್ಯಗಳ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಒದಗಿಸಲು ಮತ್ತು ರೈತರು, ಖರೀದಿದಾರರು, ಮಾರಾಟಗಾರರು ಹಾಗೂ ರಫ್ತುದಾರರಿಗೆ ಸಂಪರ್ಕ ಕಲ್ಪಿಸುವ ಅವಕಾಶಗಳನ್ನು ಒದಗಿಸುವ ಉದ್ದೇಶದಿಂದ ಈ ಮೇಳ ಆಯೋಜಿಸಲಾಗಿತ್ತು.
- **ಫೆ.13ರಿಂದ ಫೆ.17:** ನಗರದ ಯಲಹಂಕ ವಾಯುನೆಲೆಯ ಒಟ್ಟು 35 ಸಾವಿರ ಚದರ ಮೀಟರ್ ಪ್ರದೇಶದಲ್ಲಿ ‘ಏರೋ ಇಂಡಿಯಾ–2023’ (ಏರ್ ಶೋ) ನಡೆಯಿತು. 32 ದೇಶಗಳ ರಕ್ಷಣಾ ಸಚಿವರು, ಜಾಗತಿಕ ಮತ್ತು ಭಾರತದ 73 ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ಸಿಇಒ) ಭಾಗವಹಿಸಿದ್ದ-ರು. ಇದರಲ್ಲಿ ಇದೇ ಮೊದಲ ಬಾರಿ 98 ದೇಶಗಳ 811 ಪ್ರದರ್ಶಕರು ಪಾಲ್ಗೊಂಡಿದ್ದರು.
- **ಫೆ.22ರಿಂದ ಫೆ.25:** ಹೆಸರಘಟ್ಟದಲ್ಲಿರುವ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯಲ್ಲಿ (ಐಐಎಚ್‌ಆರ್) ‘ಸ್ವಾವಲಂಬನೆಗಾಗಿ ನವೀನ ತೋಟಗಾರಿಕೆ’ ಎಂಬ ವಿಷಯದಡಿ ರಾಷ್ಟ್ರೀಯ ತೋಟಗಾರಿಕೆ ಮೇಳ ನಡೆಯಿತು. ಇದರಲ್ಲಿ 120ಕ್ಕೂ ಹೆಚ್ಚು ಬೆಳೆಗಳ ಪ್ರಾತ್ಯಕ್ಷಿಕೆ ಮತ್ತು 58 ಹೊಸ ತಂತ್ರಜ್ಞಾನಗಳನ್ನು ರೈತರಿಗೆ ಪರಿಚಯಿಸಲಾಯಿತು.
- **ಮಾ.11 ಮತ್ತು ಮಾ.12:** ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಈಶಾನ್ಯ ಬೆಂಗಳೂರಿನಲ್ಲಿ (ಅಂಬೇಡ್ಕರ್ ಭವನ) 16ನೇ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಲೇಖಕಿ ಎಚ್‌.ಎಸ್‌. ಶ್ರೀಮತಿ ಸಮ್ಮೇಳನಾಧ್ಯಕ್ಷತೆ ವಹಿಸಿದ್ದರು.
- **ಮಾ.25 ಮತ್ತು ಮಾ.26:** ಬೆಂಗಳೂರಿನ ಸಂಸ್ಕೃತಿ, ಕಲೆ ಹಾಗೂ ಪರಂಪರೆಯನ್ನು ಇಲ್ಲಿ ನೆಲೆಸಿರುವವರಿಗೆ ಪರಿಚಯಿಸುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಬ್ಬನ್ ಉದ್ಯಾನ ಹಾಗೂ ವಿಧಾನಸೌಧದ ಆವರಣದಲ್ಲಿ ಬೆಂಗಳೂರು ಹಬ್ಬ ನಡೆಯಿತು.
- **ಆ.4ರಿಂದ ಆ.15:** ಸ್ವಾತಂತ್ರ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ವತಿಯಿಂದ ಲಾಲ್‌ಬಾಗ್‌ನಲ್ಲಿ ‘ಕರ್ನಾಟಕದ ಶಕ್ತಿ ಕೇಂದ್ರ ವಿಧಾನಸೌಧದ ನಿರ್ಮಾತೃ ಕೆಂಗಲ್ ಹನುಮಂತಯ್ಯ’ ಅವರ ವಿಷಯಾಧಾರಿತ 214ನೇ ಫಲಪುಷ್ಪ ಪ್ರದರ್ಶನ ನಡೆಯಿತು. ಫಲಪುಷ್ಪ ಪ್ರದರ್ಶನದಲ್ಲಿ ಲಕ್ಷಾಂತರ ಮಂದಿ ಭಾಗವಹಿಸಿದ್ದರು.
- **ಸೆ.25ರಿಂದ ಸೆ.28:** ಕಾಫಿ ಬೆಳೆಗಾರರು ಹಾಗೂ ಉದ್ಯಮಿಗಳಿಗೆ ಹೊಸ ಅವಕಾಶ ಸೃಷ್ಟಿ ಹಾಗೂ ಮಾರುಕಟ್ಟೆ ವಿಸ್ತರಣೆಯ ಆಶಯದೊಂದಿಗೆ ರಾಜಧಾನಿಯಲ್ಲಿ 5ನೇ ವಿಶ್ವ ಕಾಫಿ ಸಮ್ಮೇಳನ ನಡೆಯಿತು. 80ಕ್ಕೂ ಹೆಚ್ಚು ದೇಶಗಳ 2 ಸಾವಿರ ಪ್ರತಿನಿಧಿಗಳು ಭಾಗಿಯಾಗಿದ್ದರು.
- **ನ.1:** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವಿವಿಧ ಕ್ಷೇತ್ರಗಳ 68 ಸಾಧಕರಿಗೆ ಜೆ.ಸಿ. ರಸ್ತೆಯ ರವೀಂದ್ರ ಕಲಾಕ್ಷೇತ್ರ-ದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಯಿತು.
- **ನ.17ರಿಂದ ನ.20:** ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ‘ಆಹಾರ, ಆರೋಗ್ಯ, ಆದಾಯಕ್ಕಾಗಿ ಸಿರಿಧಾನ್ಯಗಳು’ ಎಂಬ ಘೋಷವಾಕ್ಯದಡಿ ಆಯೋಜಿಸಿದ್ದ ಕೃಷಿ ಮೇಳದಲ್ಲಿ ಲಕ್ಷಾಂತರ ಮಂದಿ ಭಾಗವಹಿಸಿದ್ದರು.
- **ನ.29ರಿಂದ ಡಿ.1:** ರಾಜ್ಯ ಸರ್ಕಾರದಿಂದ ಬೆಂಗಳೂರು ಅರಮನೆಯಲ್ಲಿ ಬೆಂಗಳೂರು ತಂತ್ರಜ್ಞಾನ ಶೃಂಗ ನಡೆಯಿತು. 30ಕ್ಕೂ ಅಧಿಕ ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು. 350ಕ್ಕೂ ಅಧಿಕ ನವೋದ್ಯಮಗಳಿಂದ ಪ್ರದರ್ಶನ ನಡೆಯಿತು. 50 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದರು.
- **ಡಿ.2 ಮತ್ತು ಡಿ.3:** ದಿ ಲಲಿತ್ ಅಶೋಕ್ ಹೋಟೆಲ್‌ನಲ್ಲಿ ಬೆಂಗಳೂರು ಸಾಹಿತ್ಯ ಉತ್ಸವ ನಡೆಯಿತು. 7 ವೇದಿಕೆಗಳಲ್ಲಿ ನಡೆದ ಉತ್ಸವದಲ್ಲಿ 250ಕ್ಕೂ ಅಧಿಕ ಲೇಖಕರು, ಬರಹಗಾರರು, ಸಾಹಿತಿಗಳು ಭಾಗವಹಿಸಿದ್ದರು.
- **ಡಿ.9 ಮತ್ತು ಡಿ.10:** ಬಿಎಲ್‌ಆರ್ ಹಬ್ಬದ ಭಾಗವಾಗಿ ಚರ್ಚ್‌ಸ್ಟ್ರೀಟ್, ಯಲಹಂಕ, ವೈಟ್‌ಫೀಲ್ಡ್, ಸರ್ಜಾಪುರ, ಮಲ್ಲೇಶ್ವರ, ಜಯನಗರದಲ್ಲಿ ‘ಓಪನ್ ಸ್ಟ್ರೀಟ್’ ಉತ್ಸವ ನಡೆಸಲಾಯಿತು.
- **ಡಿ.10 ಮತ್ತು ಡಿ.11:** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ‘ನಮ್ಮ ಜಾತ್ರೆ’ ನಡೆಸಲಾಯಿತು. ವಿವಿಧ ಜಾನಪದ ಕಲಾ ತಂಡಗಳಿಂದ ವಿಧಾನಸೌಧದಿಂದ ರವೀಂದ್ರ ಕಲಾಕ್ಷೇತ್ರದವರೆಗೆ ಮೆರವಣಿಗೆ ನಡೆಯಿತು.
- **ಡಿ.11:** ಬಸವನಗುಡಿಯಲ್ಲಿ ಪಾರಂಪರಿಕ ಕಡಲೆಕಾಯಿ ಪರಿಷೆ ನಡೆಯಿತು. ದೊಡ್ಡ ಬಸವನಿಗೆ ವಿಶೇಷ ಅಲಂಕಾರದ ಜೊತೆಗೆ, ಕಡಲೆಕಾಯಿ ಅಭಿಷೇಕ, ತುಲಾಭಾರ ನಡೆಸಲಾಯಿತು.

ಸ್ವಾತಂತ್ರ್ಯೋತ್ಸವ ಪ್ರಯುಕ್ತ ಲಾಲ್‌ಬಾಗ್‌ನಲ್ಲಿ ನಡೆದ ಫಲಪುಷ್ಪ ಪ್ರದರ್ಶನ

ಬಿಬಿಎಂಪಿ ನೌಕರರ ಸಹಕಾರ ಸಂಘದ ಅಧ್ಯಕ್ಷರಾಗಿ ಅಮೃತ್ ರಾಜ್ ಆಯ್ಕೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಸಹಕಾರ ಸಂಘದ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಎ.ಅಮೃತ್ ರಾಜ್, ಉಪಾಧ್ಯಕ್ಷರಾಗಿ ಕೆ.ಜಿ. ರವಿ ಅವಿರೋಧವಾಗಿ ಆಯ್ಕೆಯಾದರು.

ಚುನಾವಣೆ ಅಧಿಕಾರಿ ಮಾನಸ ಕೃಷ್ಣಪ್ಪ ಅವರ ಸಮ್ಮುಖದಲ್ಲಿ ಬುಧವಾರ ಸಹಕಾರ ಸಂಘದ ಕಚೇರಿಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು.

ಮುಂದಿನ 5 ವರ್ಷದ ಅವಧಿಗೆ ನಿರ್ದೇಶಕರ ಸ್ಥಾನಗಳಿಗೆ ನಡೆದಿದ್ದ ಚುನಾವಣೆಯಲ್ಲಿ ಎ. ಅಮೃತ್ ರಾಜ್, ಕೆ.ಜಿ.ರವಿ ತಂಡದವರು 13 ಸ್ಥಾನಗಳಲ್ಲಿ ಗೆದ್ದಿದ್ದರು. ನಿರ್ದೇಶಕರಾದ ಗಂಗಾಧರ್ ಲಾಲಿ, ವಿನಯ್ ಕುಮಾರ್ ಕೆ.ಎನ್, ಮಹೇಶ್. ಎಂ, ಹರೀಶ್ ಕುಮಾರ್ ಎನ್, ಎಲ್.ಆರ್. ಮಂಜುನಾಥ್, ಮುನಿರಾಜು, ಮಂಜುನಾಥ್ ಜಿ, ರಾಜಶೇಖರ್ ಡಿ, ಆರ್.ಪಿ. ವಾಣಿ, ಅಕ್ಕಮಹಾದೇವಿ, ಮಹಾದೇವಿ ಎಸ್.ಜಿ. ಭಾಗವಹಿಸಿದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಸಹಕಾರ ಸಂಘದ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಆಯ್ಕೆಯಾದ ಎ. ಅಮೃತ್ ರಾಜ್ ಅವರನ್ನು ನಿರ್ದೇಶಕರು ಅಭಿನಂದಿಸಿದರು

ಅಪಘಾತ: 7 ಸಾವು

ಗುನಾ (ಮಧ್ಯಪ್ರದೇಶ) (ಪಿಟಿಐ): ‘ಮಧ್ಯಪ್ರದೇಶದ ಗುನಾ ಜಿಲ್ಲೆಯಲ್ಲಿ ಬುಧವಾರ ರಾತ್ರಿ ಖಾಸಗಿ ಬಸ್ಸೊಂದು ಟ್ರಕ್‌ಗೆ ಡಿಕ್ಕಿ ಹೊಡೆದಿದ್ದರಿಂದ ಬೆಂಕಿ ಹೊತ್ತಿಕೊಂಡು ಉರಿದಿದ್ದರಿಂದ ಕನಿಷ್ಠ ಏಳು ಮಂದಿ ಪ್ರಯಾಣಿಕರು ಮೃತಪ-ಟ್ಟಿದ್ದಾರೆ’ ಎಂದು ಇಲ್ಲಿನ ತಹಶೀಲ್ದಾರ್ ಜಿ.ಎಸ್. ಬೈರ್ವಾ ತಿಳಿಸಿದ್ದಾರೆ.

‘ಬಸ್‌ನಲ್ಲಿದ್ದ ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಗುನಾ– ಆರೋನ್ ರಸ್ತೆಯಲ್ಲಿ ಅಪಘಾತ ಸಂಭವಿಸಿದೆ’ ಎಂದು ಹೇಳಿದ್ದಾರೆ.

ನಮೂನೆ–12
{ನಿಯಮ 14(3)ಅನ್ನು ನೋಡಿ}
ಚುನಾವಣಾ ನೋಟೀಸು

ಶ್ರೀ ವಿನಾಯಕ ಕ್ರೆಡಿಟ್ ಕೋ–ಆಪರೇಟೀವ್ ಸೊಸೈಟಿ ಲಿ.,
ನಂ–14, 3ನೇ ಮುಖ್ಯ ರಸ್ತೆ, ರಾಜಾಮಹಲ್ ಗುಟ್ಟಹಳ್ಳಿ ಬೆಂಗಳೂರು–560 003,

ಈ ಸಹಕಾರ ಸಂಘದ ಆಡಳಿತ ಮಂಡಲಿ ನಿರ್ದೇಶಕರ ಸ್ಥಾನಗಳಿಗೆ, ಸಾಮಾನ್ಯ ಚುನಾವಣೆಯನ್ನು, ಚುನಾವಣಾ ದಿನಾಂಕದಿಂದ ಮುಂದಿನ ಐದು ವರ್ಷಗಳ ಅವಧಿಗೆ, ನಡೆಸಲಾಗುವುದೆಂದು ನೋಟೀಸು ನೀಡಲಾಗಿದೆ.

ಚುನಾವಣಾ ದಿನಾಂಕ: 13.01.2024 ಶನಿವಾರದಂದು ಮತದಾನದ ಸಮಯ: ಬೆಳಿಗ್ಗೆ 09 ಗಂಟೆಯಿಂದ ಮಧ್ಯಾಹ್ನ 4 ಗಂಟೆಯವರೆಗೆ
ಸ್ಥಳ: ಶ್ರೀ ಆಂಜನೇಯ ಸ್ವಾಮಿ ದೇವಾಲಯ ಟ್ರಸ್ಟ್ (ರಿ), “ಕಲ್ಯಾಣ ಮಂಟಪ” ವೆಂಕಟಸ್ವಾಮಿರಾಜು ರಸ್ತೆ, ಶ್ರೀ ಆಂಜನೇಯ ಸ್ವಾಮಿ ದೇವಾಲಯ ವೃತ್ತ, ರಾಜಾಮಹಲ್ ಗುಟ್ಟಹಳ್ಳಿ, ಬೆಂಗಳೂರು–560 020

ಸಂಘದ ಉಪವಿಧಿ ಸಂಖ್ಯೆ: 53 ರಂತೆ ಚುನಾಯಿತವಾಗಬೇಕಾದ ಸ್ಥಾನಗಳು	
ಸಾಮಾನ್ಯ ಸ್ಥಾನ	09
ಪರಿಶಿಷ್ಟ ಜಾತಿ ಮೀಸಲು ಸ್ಥಾನ	01
ಪರಿಶಿಷ್ಟ ಪಂಗಡ ಮೀಸಲು ಸ್ಥಾನ	01
ಹಿಂದುಳಿದ ಪ್ರವರ್ಗ–ಎ, ಮೀಸಲು ಸ್ಥಾನ	01
ಹಿಂದುಳಿದ ಪ್ರವರ್ಗ–ಬಿ ಮೀಸಲು ಸ್ಥಾನ	01
ಮಹಿಳಾ ಮೀಸಲು ಸ್ಥಾನ	02
ಒಟ್ಟು	15

ಚುನಾವಣಾ ವೇಳಾಪಟ್ಟಿಯು ಈ ಕೆಳಗಿನಂತೆ ಇರುತ್ತದೆ

ಎ	ಆಕಾಂಕ್ಷೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಸಲು ಪ್ರಾರಂಭದ ದಿನಾಂಕ	ದಿನಾಂಕ:30.12.2023 ಶನಿವಾರ ಬೆಳಿಗ್ಗೆ 11:00 ಗಂಟೆಯಿಂದ ಸಹಾಯಕ ರಿಟರ್ನಿಂಗ್ ಅಧಿಕಾರಿಯಿಂದ ಅಥವಾ ರಿಟರ್ನಿಂಗ್ ಅಧಿಕಾರಿಯಿಂದ ನೇಮಿಸಲ್ಪಟ್ಟಿರುವ ಅಧಿಕಾರಿಯಿಂದ ಸಂಘದ ರಿಜಿಸ್ಟರ್ ಕಛೇರಿಯಲ್ಲಿ
ಬಿ	ಆಕಾಂಕ್ಷೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಪಡೆಯಲು ಕೊನೆಯ ದಿನಾಂಕ (ನಿಯಮ 14ಎ)	ದಿನಾಂಕ:05.01.2024 ಶುಕ್ರವಾರ ಬೆಳಿಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯವರೆಗೆ ಸಹಾಯಕ ರಿಟರ್ನಿಂಗ್ ಅಧಿಕಾರಿಯಿಂದ ಅಥವಾ ರಿಟರ್ನಿಂಗ್ ಅಧಿಕಾರಿಯಿಂದ ನೇಮಿಸಲ್ಪಟ್ಟಿರುವ ಅಧಿಕಾರಿ ಸಂಘದ ರಿಜಿಸ್ಟರ್ಡ್ ಕಛೇರಿಯಲ್ಲಿ
ಸಿ.	ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ (ನಿಯಮ 14ಬಿ)	ದಿನಾಂಕ:06.01.2024 ಶನಿವಾರ ಮಧ್ಯಾಹ್ನ 12:30 ಗಂಟೆಗೆ (ಸಂಘದ ಕಛೇರಿಯಲ್ಲಿ)
ಡಿ	ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ{ನಿಯಮ 14ಬಿ(4)}	ದಿನಾಂಕ:06.01.2024 ಶನಿವಾರ ನಾಮಪತ್ರಗಳ ಪರಿಶೀಲನೆಯ ನಂತರ (ಸಂಘದ ಕಛೇರಿಯಲ್ಲಿ)
ಇ	ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಂದ ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನ (ನಿಯಮ 14ಸಿ)	ದಿನಾಂಕ:07.01.2024 ಭಾನುವಾರ ಮಧ್ಯಾಹ್ನ 3:00 ಗಂಟೆಯ ಒಳಗೆ
ಎಫ್	ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ(ನಿಯಮ 14ಡಿ)	ದಿನಾಂಕ: 07–01–2024 ಭಾನುವಾರ ಮಧ್ಯಾಹ್ನ 3.00 ಗಂಟೆಯ ನಂತರ (ಸಂಘದ ಕಛೇರಿಯಲ್ಲಿ)
ಜಿ.	ರಿಟರ್ನಿಂಗ್ ಅಧಿಕಾರಿಯಿಂದ ಅಭ್ಯರ್ಥಿಗಳು ಆಪೇಕ್ಷಿಸಿದಲ್ಲಿ ಚಿಹ್ನೆಗಳ ಹಂಚಿಕೆ (ನಿಯಮ 14ಇ)	ದಿನಾಂಕ: 07.01.2024 ಭಾನುವಾರ ಮಧ್ಯಾಹ್ನ 3.00 ಗಂಟೆಯ ಅನಂತರ (ಕ್ರಮಬದ್ಧ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆಯ ನಂತರ) ಸಂಘದ ಕಛೇರಿಯಲ್ಲಿ
ಹೆಚ್	ಚಿಹ್ನೆಯ ಸಹಿತ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ (ನಿಯಮ 14ಡಿ ಮತ್ತು 14ಇ)	ದಿನಾಂಕ: 09.01.2024 ಮಂಗಳವಾರ ಮಧ್ಯಾಹ್ನ 3.00 ಗಂಟೆಯ ನಂತರ (ಸಂಘದ ಕಛೇರಿಯಲ್ಲಿ)
ಐ	ಮತದಾನದ ದಿನಾಂಕ ಮತ್ತು ಸಮಯ	ದಿನಾಂಕ: 13.01.2024 ಶನಿವಾರ ವಿಳಾಸ: ಶ್ರೀ ಆಂಜನೇಯ ಸ್ವಾಮಿ ದೇವಾಲಯ ಟ್ರಸ್ಟ್ (ರಿ), ಕಲ್ಯಾಣ ಮಂಟಪ ವೆಂಕಟಸ್ವಾಮಿರಾಜು ರಸ್ತೆ, ಶ್ರೀ ಆಂಜನೇಯ ಸ್ವಾಮಿ ದೇವಾಲಯ ವೃತ್ತ, ರಾಜಾಮಹಲ್ ಗುಟ್ಟಹಳ್ಳಿ, ಬೆಂಗಳೂರು–560020. ಇಲ್ಲಿ ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 4.00 ಗಂಟೆಯವರೆಗೆ
ಜೆ	ಮತ ಏಣಿಕೆ ದಿನ ಮತ್ತು ದಿನಾಂಕ	ದಿನಾಂಕ: 13.01.2024 ಶನಿವಾರ ಮತದಾನದ ಅವಧಿ ಮುಗಿದ ತಕ್ಷಣ
ಕೆ	ರಿಟರ್ನಿಂಗ್ ಅಧಿಕಾರಿಯಿಂದ ಫಲಿತಾಂಶ ಘೋಷಣೆ	ದಿನಾಂಕ: 13.01.2024 ಶನಿವಾರ

ಸಹಿ/–
(ಬಿ.ಕೆ.ಸಲೀಂ)
ರಿಟರ್ನಿಂಗ್‌ಅಧಿಕಾರಿ,
ಶ್ರೀ ವಿನಾಯಕ ಕ್ರೆಡಿಟ್ ಕೋ–ಆಪರೇಟೀವ್ ಸೊಸೈಟಿ ಲಿ.,
ನಂ–14, 3ನೇ ಮುಖ್ಯರಸ್ತೆ, ರಾಜಾಮಹಲ್ ಗುಟ್ಟಹಳ್ಳಿ ಬೆಂಗಳೂರು–560003
ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು,
3ನೇ ವಲಯ, ಬೆಂಗಳೂರು ನಗರ ಜಿಲ್ಲೆ

ಸ್ಥಳ: ಬೆಂಗಳೂರು
ದಿನಾಂಕ: 27.12.2023

ನೈಋತ್ಯ ರೈಲ್ವೆ
ಹರಾಜು ಕಾರ್ಯಕ್ರಮ ಸೂಚನೆ ಸಂ.: S/XIII/04/2023-24

ನೈಋತ್ಯ ರೈಲ್ವೆಯ ಹುಬ್ಬಳ್ಳಿ, ಮೈಸೂರು ಮತ್ತು ಬೆಂಗಳೂರು ವಿಭಾಗಗಳಲ್ಲಿ ಹಾಗೂ ಜನರಲ್ ಉಗ್ರಾಣ ಡಿಪೋ/ಹುಬ್ಬಳ್ಳಿ ಮತ್ತು ಮೆಕ್ಯಾನಿಕಲ್ ಜನರಲ್ ಉಗ್ರಾಣಗಳ ಡಿಪೋ/ಅಶೋಕಪುರಂ ಡಿಪೋಗಳ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುವಂತೆ ಆನ್‌ಲೈನ್, ಸರ್ವಿಸಬಲ್ ಲೋಕೋಮೋಟಿವ್‌ಗಳು ಮತ್ತು ಡಿಪೋ ಸ್ಕ್ರಾಪ್‌ಗಳ ಮಾರಾಟಕ್ಕಾಗಿ ಜನವರಿ, ಫೆಬ್ರವರಿ ಮತ್ತು ಮಾರ್ಚ್ 2024 ರ ತಿಂಗಳುಗಳಲ್ಲಿ ಇ–ಹರಾಜಿನ ವೇಳಾಪಟ್ಟಿಯನ್ನು ಕೆಳಗೆ ನೀಡಲಾಗಿದೆ.

ಹರಾಜಿನ ಮಾದರಿ	ಸ್ಥಳ	ಜನವರಿ – 2024			ಫೆಬ್ರವರಿ – 2024			ಮಾರ್ಚ್ – 2024		
ಇ–ಹರಾಜು	ಜನರಲ್ ಉಗ್ರಾಣ ಡಿಪೋ/ಹುಬ್ಬಳ್ಳಿ	2ನೇ	12ನೇ	24ನೇ	2ನೇ	13ನೇ	21ನೇ	4ನೇ	12ನೇ	20ನೇ
	ಮೆಕ್ಯಾನಿಕಲ್ ಜನರಲ್ ಉಗ್ರಾಣ ಡಿಪೋ, ಅಶೋಕಪುರಂ (ಮೈಸೂರು)	8ನೇ	17ನೇ	29ನೇ	8ನೇ	16ನೇ	26ನೇ	6ನೇ	14ನೇ	22ನೇ
	ಹುಬ್ಬಳ್ಳಿ ವಿಭಾಗ	9ನೇ	22ನೇ	30ನೇ	9ನೇ	19ನೇ	27ನೇ	7ನೇ	15ನೇ	26ನೇ
	ಬೆಂಗಳೂರು ವಿಭಾಗ	11ನೇ	23ನೇ	31ನೇ	12ನೇ	21ನೇ	29ನೇ	11ನೇ	19ನೇ	28ನೇ
	ಮೈಸೂರು ವಿಭಾಗ	4ನೇ	16ನೇ	25ನೇ	5ನೇ	14ನೇ	22ನೇ	5ನೇ	13ನೇ	21ನೇ

ಸರ್ವೀಸ್ ಮಾಡಲು ಯೋಗ್ಯವಾದ ಇಂಜಿನ್‌ಗಳ ಮಾರಾಟ: ಕೆಳಗಿನ ಏಳು (7) ನಂ. ನಾಶಗೊಳಿಸಲಾದ, ಹೆಚ್ಚುವರಿ, ಕಡಿಮೆ ವಯಸ್ಸಿನ ಮತ್ತು ಸರ್ವೀಸ್ ಮಾಡಬಹುದಾದ ಲೋಕೋಮೋಟಿವ್‌ಗಳು ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು/ಬೆಂಗಳೂರು ಇವರ ನೇತೃತ್ವದಲ್ಲಿ ಇ–ಹರಾಜಿನಲ್ಲಿವೆ, ಅಂದರೆ ಡಬ್ಲ್ಯೂಡಿಜಿ3ಎ–13037, 13038, 13054 (ಇ–ಹರಾಜಿನ ಪಟ್ಟಿಯಲ್ಲಿ ಮೂರು ಲೋಕೋಗಳು ಲಭ್ಯವಿದೆ) & ಡಬ್ಲ್ಯೂಡಿಜಿ3ಎ–13031, 13056, ಡಬ್ಲ್ಯೂಡಿಎಂ3ಎ–14082 & 14084 (ಈ ನಾಲ್ಕು ಲೋಕೋಗಳು ನಂತರದ ಇ–ಹರಾಜುಗಳ ಭಾಗವಾಗಿರುತ್ತವೆ).
ಮೇಲೆ ತಿಳಿಸಿರುವ ಇ–ಹರಾಜಿನಲ್ಲಿ ಸಕ್ರಿಯವಾಗಿ ಭಾಗವಹಿಸಲು ನಿಮ್ಮನ್ನು ವಿನಂತಿಸಲಾಗಿದೆ. ವಿವರಗಳಿಗಾಗಿ ದಯವಿಟ್ಟು ಉಪ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು/ಜನರಲ್ ಸ್ಟೋರ್‌ಗಳ ಡಿಪೋ/ಹುಬ್ಬಳ್ಳಿ (0836–2363466 / 9731668760), ಉಪ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು/ಮೆಕ್ಯಾನಿಕಲ್ ಜನರಲ್ ಉಗ್ರಾಣಗಳ ಡಿಪೋ / ಅಶೋಕ ಪುರಮ್ (0821–2480171/9731665756), ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು/ಹುಬ್ಬಳ್ಳಿ (0836–2363497 / 9731668750), ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು/ಬೆಂಗಳೂರು (080–22873081/9731666750), ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು/ಮೈಸೂರು (0821–2420817/ 9731667750).
ಲೋಕೋಗಳಿಗಾಗಿ ವರಿಷ್ಠ ವಿಭಾಗೀಯ ಮೆಕ್ಯಾನಿಕಲ್ ಇಂಜಿನಿಯರ್/ಡೀಸೆಲ್ ಲೋಕೋ ಶೆಡ್/ ಕೃಷ್ಣರಾಜಪುರಂ & ಎಸ್‌ಎಸ್‌ಇ / ಡೀಸೆಲ್ ಲೋಕೋ ಶೆಡ್/ ಕೃಷ್ಣರಾಜಪುರಂ – 9731666482 ಇವರನ್ನು ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
PUB/585/AAD/PRB/SWR/2023-24 ಉಪ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು/ಸಿಎನ್/ಪ್ರಕ/ಹುಬ್ಬಳ್ಳಿ
South Western Railway - SWR | SWRRLY | SWRRLY

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ A Government of India Undertaking
ಸಿಂಡಿಕೇಟ್ Syndicate
ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310038

ಗುತ್ತಿಗೆಯ ಮೇಲೆ ಸ್ಥಳಾವಕಾಶ ಬೇಕಾಗಿದೆ

ಕೆಳಕಂಡ ಸ್ಥಳಗಳಲ್ಲಿ ಹಾಲಿ ಇರುವ ಶಾಖೆಗಳನ್ನು ಸ್ಥಳಾಂತರಿಸುವುದಕ್ಕಾಗಿ, **ಮುಖ್ಯ ರಸ್ತೆಯಲ್ಲಿ** ಆದ್ಯತೆಯಾಗಿ **ನೆಲಮಹಡಿಯಲ್ಲಿ** ಸ್ವತಂತ್ರ ಪ್ರವೇಶ, ಉತ್ತಮ ಮುಂಭಾಗ, ಪಾರ್ಕಿಂಗ್ ಸ್ಥಳವಿರುವ, ಆರ್‌ಬಿಐ ನಿರ್ದಿಷ್ಟತೆಗೆ ಅನುಸಾರವಾಗಿ ಸ್ಟ್ರಾಂಗ್ ರೂಮ್‌ನ್ನು ನಿರ್ಮಿಸಲು ಸಿದ್ಧವಿರುವ ಮತ್ತು ಅಗತ್ಯವಾದ ವಿದ್ಯುತ್ ಲೋಡ್‌ನೊಂದಿಗೆ ಬಳಕೆಗೆ ಸಿದ್ಧವಿರುವ ವಾಣಿಜ್ಯ ಸ್ಥಳವನ್ನು ಹೊಂದಿದ ಮಾಲೀಕರಿಂದ **ಎರಡು–ಬಿಡ್ ವ್ಯವಸ್ಥೆಯ ಅಡಿಯಲ್ಲಿ** ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಸ್ಥಳ	ಜಿಲ್ಲೆಯ ಹೆಸರು	ಜನ ಸಮುದಾಯ	ಅಂದಾಜು ಕಾರ್ಪೆಟ್ ಸ್ಥಳ ಚ.ಅಡಿಗಳಲ್ಲಿ
ಕಾಡುಗೋಡಿ	ಬೆಂಗಳೂರು	ಮಹಾನಗರ	2500
ನೀಲಸಂದ್ರ	ಬೆಂಗಳೂರು	ಮಹಾನಗರ	2500
ಕತ್ರಿಗುಪ್ಪೆ	ಬೆಂಗಳೂರು ದಕ್ಷಿಣ	ಮಹಾನಗರ	2500
ದೊಡ್ಡಬಳ್ಳಾಪುರ	ಬೆಂಗಳೂರು ಗ್ರಾಮೀಣ	ಅರೆನಗರ	2000
ಶಿವಗಂಗ	ಬೆಂಗಳೂರು ಗ್ರಾಮೀಣ	ಗ್ರಾಮೀಣ	1500
ಪಾಲನಜೋಗಿಹಳ್ಳಿ	ಬೆಂಗಳೂರು ಗ್ರಾಮೀಣ	ಗ್ರಾಮೀಣ	1500

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ **http://www.canarabank.com** ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ **Announcement → Tenders** ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : **17–01–2024 ರಂದು ಸಂಜೆ 3.00 ಗಂಟೆಯವರೆಗೆ.** ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು. “ಮಧ್ಯವರ್ತಿಗಳಿಗೆ ಅವಕಾಶವಿಲ್ಲ”

ಸ್ಥಳ : ಬೆಂಗಳೂರು
ದಿನಾಂಕ : 27–12–2023
ಸಹಿ/–
ಸಹಾಯಕ ಮಹಾ ಪ್ರಬಂಧಕರು

ಪ್ರಜಾವಾಣಿ
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

Thanksgiving
NEVER FAIL NOVENA
MY THE IMMACULATE HEART OF MARY AND THE SACRED HEART OF JESUS BE PRAISED, ADORED AND GLORIFIED THROUGHOUT THE WORLD NOW AND FOREVER. MOST SACRED HEART OF JESUS,. PRAY FOR ME. ST THERESA OF THE CHILD JESUS, PRAY FOR ME. ST JUDE PATRON OF HOPELESS CASES, PRAY FOR ME, AND GRANT THIS FAVOR I ASK FOR. THANK YOU FOR THE FAVOURS RECEIVED
- GEETHA

ಪುರಸಭಾ ಕಾರ್ಯಾಲಯ, ಶ್ರೀನಿವಾಸಪುರ
ದೂರವಾಣಿ ಸಂಖ್ಯೆ:08157–245160 Email: itstaff_ulb_srinivasapura@yahoo.co.in
ನಂ: ಪುಸಶ್ರೀ/ಘವನಿ/ಸಿಆರ್/08/2023–24 ದಿನಾಂಕ: 26–12–2023

ಕೊಟೇಷನ್ ಪ್ರಕಟಣೆ

ಶ್ರೀನಿವಾಸಪುರ ಪುರಸಭೆ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್–1.0 ಯೋಜನೆಯಡಿಯಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಅವಶ್ಯಕವಿರುವ ಈ ಕೆಳಕಂಡ ವಾಹನ ಯಂತ್ರೋಪಕರಣಗಳನ್ನು ಸರಬರಾಜು ಮಾಡುವ ಕೆಲಸಕ್ಕೆ ದರಪಟ್ಟಿ ಅನುಮೋದನೆಗಾಗಿ ಅರ್ಹ ಸಂಸ್ಥೆಗಳಿಂದ ಮುಚ್ಚಿದ ಲಕೋಟೆಯಲ್ಲಿ ದಿನಾಂಕ: 02–01–2024ರಂದು ಅಪರಾಹ್ನ 4.30 ಗಂಟೆಯೊಳಗೆ ತಲಪುವಂತೆ ಕೊಟೇಷನ್ ದರಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ವಾಹನ ಯಂತ್ರೋಪಕರಣದ ವಿವರ	ಮೊತ್ತ ರೂ. ಲಕ್ಷಗಳಲ್ಲಿ	ಅನುದಾನದ ವಿವರ
1.	ಶ್ರೀನಿವಾಸಪುರ ಪುರಸಭೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತುಗಳನ್ನು ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಸಾಗಿಸಲು 01 ಸಂಖ್ಯೆ ಎಲೆಕ್ಟ್ರಿಕ್ ಕಾಂಪ್ಯಾಕ್ಟರ್ ವಾಹನ ಸರಬರಾಜು ಮಾಡುವ ಕೆಲಸ.	70.00	ಸ್ವಚ್ಛ ಭಾರತ್ ಮಿಷನ್–1.0

ಷರತ್ತುಗಳು: 1. ಕೊಟೇಷನ್ ದರಗಳು GST ಮತ್ತು ಸಾರಿಗೆ ವೆಚ್ಚ, RTO Registration, ವಾಹನದ ವಿಮೆ ಇತ್ಯಾದಿ ವೆಚ್ಚಗಳನ್ನು ಒಳಗೊಂಡಿರತಕ್ಕದ್ದು. 2) ವಾಹನ ಯಂತ್ರೋಪಕರಣಗಳನ್ನು ಶ್ರೀನಿವಾಸಪುರ ಪುರಸಭೆಗೆ ಸರಬರಾಜು ಮಾಡತಕ್ಕದ್ದು. 3) ಯಾವುದೇ ಕೊಟೇಷನ್‌ಗಳನ್ನು ಕಾರಣಕೊಡದೆಯೇ ಅಂಗೀಕರಿಸುವ/ತಿರಸ್ಕರಿಸುವ ಹಕ್ಕು ಪುರಸಭೆಗೆ ಇರುತ್ತದೆ. 4) ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಪುರಸಭೆಯ ಆರೋಗ್ಯ ಶಾಖೆಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಶ್ರೀನಿವಾಸಪುರ
ಸಹಿ/–ಮುಖ್ಯಾಧಿಕಾರಿ, ಪುರಸಭೆ, ಶ್ರೀನಿವಾಸಪುರ

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

MATRIMONIAL
Grooms Wanted
Christian
PARENTS OF 29 yrs god fearing, post grad, working for Mnc, bangalore based, looking for suitable groom, email-annemelda22@gmail.com

PUBLIC NOTICE
PUBLIC NOTICE
NOTICE is here by given to large General Public that, the Shares Certificate Folio No AR070173 Numbers of Shares 200 of GUJARAT AMBUJA EXPORTS LTD, and the Shares Certificate Folio No 0143811, Number of shares 100 of I. G. PETRO CHEMICALS LIMITED, standing in the name' of Mr Anil Sipani, have been reported lost/stolen and that an application for issue of Duplicate Share Certificate in respect thereof made. To whom objection if any, against issuance of duplicate share certificate should be made within 14 Days from the date of publication of this Notice.

ಸಾರ್ವಜನಿಕ ಪ್ರಕಟಣೆ
Form No. URC-2
ಫಾರ್ಮ್ ಸಂಖ್ಯೆ URC-2
ಅಧ್ಯಾಯ XXI ನ ಭಾಗ I ರ ಅಡಿಯಲ್ಲಿ ನೋಂದಣಿ ಕುರಿತು ಸೂಚನೆ ನೀಡುವ ಜಾಹೀರಾತು [ಕಂಪನಿಗಳ ಕಾಯಿದೆ, 2013 ರ ವಿಭಾಗ 374(b) ಮತ್ತು ನೋಂದಾಯಿಸಲು ಅಧಿಕಾರ ಹೊಂದಿರುವ ಕಂಪನಿಗಳ ನಿಯಮ 4(1) ಪ್ರಕಾರ), ನಿಯಮಗಳು, 2014]
1. ಕಂಪನಿಗಳ ಕಾಯಿದೆ, 2013 ರ ವಿಭಾಗ 366 ರ ಉಪ–ವಿಭಾಗ (2) ರ ಅನುಸಾರವಾಗಿ, ಟ್ರಸ್ಟ್ ಆದ **LGS ರಿಸರ್ಚ್ ಫೌಂಡೇಶನ್**, ಅನ್ನು ಕಂಪನಿಗಳ ಕಾಯಿದೆ 2013 ರ XXI ಅಧ್ಯಾಯದ ಭಾಗ I ರ ಅಡಿಯಲ್ಲಿ, ಖಾತರಿಯಿಂದ ಸೀಮಿತವಾದ ಕಂಪನಿಯಾಗಿ ನೊಂದಾಯಿಸಲು – ಕೇಂದ್ರೀಯ ನೋಂದಣಿ ಕೇಂದ್ರ (CRC), IMT ಮಾನೇಸರ್, ಜಿಲ್ಲೆ ಗುರ್ಗಾಂವ್ (ಹರಿಯಾಣ) ನಲ್ಲಿ ರಿಜಿಸ್ಟ್ರಾರ್‌ಗೆ ಅರ್ಜಿಯನ್ನು ಸಲ್ಲಿಸಿರುವ ಪ್ರಸ್ತಾವನೆ ಕುರಿತು ಸೂಚನೆ ನೀಡಿದ್ದೇವೆ.
2. ಕಂಪನಿಯ ಪ್ರಮುಖ ಉದ್ದೇಶಗಳು ಈ ಕೆಳಗಿನಂತಿವೆ: ಭಾರತೀಯ ಸಮಾಜದಲ್ಲಿನ ಯಾವುದೇ ಪ್ರಕ್ರಿಯೆ ಮತ್ತು/ ಅಥವಾ ವ್ಯವಸ್ಥೆಗೆ ಇಂಜಿನಿಯರಿಂಗ್ ಪರಿಹಾರವನ್ನು ಸಂಶೋಧನೆ ಮಾಡಲು, ತಯಾರಿಸಲು, ಪ್ರಯೋಗಿಸಲು ಮತ್ತು/ ಅಥವಾ ಅಳವಡಿಸುತ್ತಾ ಮಾನವ ಒಳಗೊಳ್ಳುವಿಕೆಯನ್ನು ಕಡಿಮೆ ಮಾಡುತ್ತಾ ಮತ್ತು ಉತ್ಪಾದಕತೆ, ದಕ್ಷತೆ, ಆರ್ಥಿಕತೆ, ಸ್ಕೇಲೆಬಿಲಿಟಿ, ಉಪಯುಕ್ತತೆ, ಅಳವಡಿಕೆಯ ವರ್ಧನೆಗೆ ಕಾರಣವಾಗುವ ಯಾಂತ್ರೀಕೃತತೆಯನ್ನು ಹೆಚ್ಚಿಸುತ್ತದೆ. ಮತ್ತು ಭಾರತೀಯ ಸಮಾಜದ ಸಮಸ್ಯೆಗಳನ್ನು ಪರಿಹರಿಸುವ ಮೂಲಕ ಭಾರತೀಯ ನಾಗರಿಕರಿಗೆ ಅನುಕೂಲವಾಗುವಂತೆ ವ್ಯವಸ್ಥೆಯ ಪ್ರವೇಶಿಸುವಿಕೆ.
3. ಪ್ರಸ್ತಾವಿತ ಕಂಪನಿಯ ಕರಡು ಜ್ಞಾಪಕ ಪತ್ರ ಮತ್ತು ಸಂಘದ ಲೇಖನಗಳ ಪ್ರತಿಯನ್ನು ನಂ.126, 1ನೇ ಮಹಡಿ, ಆದ್ರಿ, 7ನೇ ಕ್ರಾಸ್, 2ನೇ ಮುಖ್ಯ, ಹೊಯ್ಸಳನಗರ, ಸುಂಕದಕಟ್ಟೆ, ಬೆಂಗಳೂರು – 560091 ಕಚೇರಿಯಲ್ಲಿ ಪರಿಶೀಲಿಸಬಹುದು.
4. ಈ ಅರ್ಜಿಯನ್ನು ಆಕ್ಷೇಪಿಸುವ ಯಾವುದೇ ವ್ಯಕ್ತಿಯು ತಮ್ಮ ಆಕ್ಷೇಪಣೆಯನ್ನು ಕೇಂದ್ರೀಯ ನೋಂದಣಿ ಕೇಂದ್ರ (ಸಿಆರ್‌ಸಿ), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ.6,7,8 ಸೆಕ್ಟರ್ 5, IMT ಮಾನೇಸರ್, ಜಿಲ್ಲೆ ಗುರ್ಗಾಂವ್ (ಹರಿಯಾಣ), ಪಿನ್‌ಕೋಡ್–122052 ನಲ್ಲಿರುವ ರಿಜಿಸ್ಟ್ರಾರ್‌ಗೆ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ **ಇಪ್ಪತ್ತೊಂದು ದಿನಗಳಲ್ಲಿ** ಲಿಖಿತವಾಗಿ ಸಲ್ಲಿಸಿ ಕಂಪನಿಗೆ ಅದರ ನೋಂದಾಯಿತ ಕಚೇರಿಯಲ್ಲಿ ಪ್ರತಿಯೊಂದಿಗೆ ತಿಳಿಸಬಹುದು ಎಂದು ಸೂಚನೆ ನೀಡಲಾಗಿದೆ.
ದಿನಾಂಕ: 28.12.2023
ಹರ್ಷ ಎಸ್
ನಂ.126, ಆದ್ರಿ, 7ನೇ ಕ್ರಾಸ್, 2ನೇ ಮುಖ್ಯ, ಹೊಯ್ಸಳನಗರ, ಸುಂಕದಕಟ್ಟೆ, ಬೆಂಗಳೂರು–560091, ದೂರವಾಣಿ: 9742942597

PERSONAL
Change of Name
CHANGE OF NAME
I, **KENKARE NARAYANA RAO VENKATESHA MURTHY** Residing at C-10, IWST Campus, Malleshwaram 18th Cross, P.O. Malleshwaram, Bengaluru-560003 have changed my name to **K.N. VENKATESH MURTHY** vide affidavit dated 26.12.2023 before Notary Kundan Babu M, Bengaluru. Henceforth I shall be known as **K.N. VENKATESH MURTHY** only.

I, SHIVARAJU, Residing at Kattigehalli, Yadiyuru Hobli, Tumkur-572130 have changed my name as SHIVARAJ, vide affidavit dated 27/12/2023 before Notary Kodi Nagappaya, Bengaluru

EDUCATION
To Place your Classified Ads Contact:
9845114560

EDUCATIONAL
Training
NURSERY TEACHERS TRAINING Course at JNANABHARATHI,with in Class Training 6 Months/1 year (offline/online),100% Job Assurance. Call:6363032729

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ನೀವು
ತಯಾರಿ ಆರಂಭಿಸುವವರೆಗೆ
ಇದು ಕೇವಲ ಕನಸಾಗಿರುತ್ತದೆ.
Aakash
NEET, JEE / KCET, FOUNDATION (CLASS 8-10)
ಆಕಾಶ್ ತರಗತಿ ಕಾರ್ಯಕ್ರಮದ ತಾರೆಯರು
AIR 2 Vatsa NEET (UG) 2022 AIIMS Delhi
AIR 1 Mrinal NEET (UG) 2021 AIIMS Delhi
AIR 3 Kaustav NEET (UG) 2023 AIIMS Delhi
ALL INDIA RANK (Female) 1 Tanishka JEE (Adv.) 2022 IIT Bombay
AIR 3 Snikitha Tummala NEET (UG) 2020 AIIMS Delhi
AIR 1 Tanmay NEET (UG) 2021 AIIMS Delhi
AIR 27 Aditya JEE (Adv.) 2023 IIT Bombay
AIR 1 Karthika NEET (UG) 2021 AIIMS Delhi
AIR 1 Chirag JEE (Adv.) 2020 MIT
AIR 2 Akanksha Singh NEET (UG) 2020 AIIMS Delhi
HAT-TRICK OF EXCELLENCE BY AAKASHIANS IN KARNATAKA
NEET (UG) State Toppers
2023 Dhruv Advani
2022 Hrishikesh NG
2021 Jashan Chhabra
KCET (Engg.) State Toppers
2023 Vignesh N
2022 Apoorv Tandon
2021 Meghan H K
and many more...
Though every care has been taken to publish the result, yet Aakash Educational Services Ltd. shall not be responsible for inadvertent error, if any.
ಈಗ ಆಕಾಶ್‌ನೊಂದಿಗೆ ಪ್ರಾರಂಭಿಸಿ.
ಪ್ರವೇಶ ತೆರೆಯಲಾಗಿದೆ. ಇಂದು ಉಚಿತ ಆನ್‌ಲೈನ್ ತ್ವರಿತ ಪ್ರವೇಶ ಮತ್ತು ವಿದ್ಯಾರ್ಥಿವೇತನ ಪರೀಕ್ಷೆಯನ್ನು(iACST) ತೆಗೆದುಕೊಳ್ಳಿ
Get Upto 90%* ಒಟ್ಟು ವಿದ್ಯಾರ್ಥಿವೇತನ
T & C apply*
ತ್ವರೆ ಮಾಡಿ! ತರಗತಿಯ ಕೋರ್ಸ್‌ಗಳಲ್ಲಿ ಅರ್ಲಿ ಬರ್ಡ್ ರಿಯಾಯಿತಿ 31ನೇ ಡಿಸೆಂಬರ್ 2023 ಕ್ಕೆ ಕೊನೆಗೊಳ್ಳುತ್ತದೆ
Scan to enroll
1,22,000 + Aakashians qualified NEET & JEE in 2023
35 + years of excellence
300 + branches across India
5000 + expert faculty
NEET-2024ರ ಸ್ಕಾಲರ್ ಮತ್ತು ಕ್ರ್ಯಾಶ್ ಕೋರ್ಸ್‌ಗೆ ಸಹ ಪ್ರವೇಶಗಳು ಪ್ರಾರಂಭವಾಗಿದೆ..
ಅರ್ಲಿ ಬರ್ಡ್ ಪ್ರಯೋಜನಗಳಿಗಾಗಿ ಈಗಲೇ ಅರ್ಜಿ ಸಲ್ಲಿಸಿ*.
View Results & Prospectus
ನಮ್ಮ ಹತ್ತಿರದ ಶಾಖೆಗೆ ಕರೆ ಮಾಡಿ
Bengaluru
Banaswadi: 9311476789
Bannerghatta Road: 8800013043
Hebbal: 8800013045
HSR Layout: 8800013044
Indiranagar: 8800013046
Jayanagar: 8800013047
Rajajinagar: 8800013048
Rajarajeswarinagar: 7836999994
Seegehalli: 8800902396
T Dasarahalli: 8800878217
Whitefield: 8800013049
Mysuru
Kuvempunagar: 8800013052
Suburban Branch: 7428899148
Ballari: 8800898251
Belagavi: 8800012965
Davanagere: 8800898210
Dharwad: 8800909381
Hassan: 8800897304
Hubballi: 8800013051
Kalaburagi: 8800901459
Mangaluru: 8800012964
Shivamogga: 8800898692
Udupi: 8800898735
SCAN FOR NEAREST BRANCH
Download Aakash App
GET IT ON Google Play
Download on the App Store
CALL (TOLL-FREE) 1800-102-2727
VISIT aakash.ac.in
Aakash BYJU'S

ಬೆಂಗಳೂರು: ಕರ್ನಾಟಕ ರಕ್ಷಣಾ ವೇದಿಕೆಯಿಂದ ಕನ್ನಡ ನಾಮಫಲಕ ಜಾಗೃತಿಗಾಗಿ ಬೃಹತ್ ಆಂದೋಲನ

ಇಂಗ್ಲಿಷ್ ನಾಮಫಲಕಗಳ ಧ್ವಂಸ, ಮಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಮಫಲಕಗಳಲ್ಲಿ ಕಡ್ಡಾಯವಾಗಿ ಕನ್ನಡ ಬಳಸುವ ವಿಚಾರಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಕ್ಷಣಾ ವೇದಿಕೆ ಬುಧವಾರ ನಡೆಸಿದ ಜಾಗೃತಿ ಮೆರವಣಿಗೆ ಕೆಲವು ಕಡೆಗಳಲ್ಲಿ ಅಹಿತಕರ ಘಟನೆಗೆ ಕಾರಣವಾಯಿತು. ಏರ್‌ಪೋರ್ಟ್ ರಸ್ತೆಯಲ್ಲಿ ಇಂಗ್ಲಿಷ್ ಫಲಗಳನ್ನು ಕಿತ್ತು ಹಾಕಿದರೆ, ಎಂ.ಜಿ. ರಸ್ತೆ ಸುತ್ತಮುತ್ತ ಕನ್ನಡೇತರ ನಾಮಫಲಕಗಳಿಗೆ ಮಸಿ ಬಳಿಯಲಾಯಿತು.

ಕರವೇ ರಾಜ್ಯ ಘಟಕದ ಅಧ್ಯಕ್ಷ ಟಿ.ಎ. ನಾರಾಯಣಗೌಡ ನೇತೃತ್ವದಲ್ಲಿ ಸಾದಹಳ್ಳಿ ಗೇಟ್ ಬಳಿಯಿಂದ ಜಾಗೃತಿ ಮೆರವಣಿಗೆ ಆರಂಭಗೊಂಡಿತು. ಪೊಲೀಸರು ಬ್ಯಾರಿಕೇಡ್ ಹಾಕಿ ತಡೆಯಲು ಪ್ರಯತ್ನಿಸಿದರು. ಆಗ ಕರವೇ ಕಾರ್ಯಕರ್ತರು ಮತ್ತು ಪೊಲೀಸರ ನಡುವೆ ತಿಕ್ಕಾಟ ನಡೆಯಿತು. ಬ್ರಿಗೇಡ್ ರಸ್ತೆಯಲ್ಲಿ ಲಾಠಿ ಬೀಸಿದ ಪೊಲೀಸರು ಕಾರ್ಯಕರ್ತರನ್ನು ಚದುರಿಸಿದರು.

ಸಾದಹಳ್ಳಿಯ ಬ್ಲೂಮ್ ಹೋಟೆಲ್ ಸೇರಿದಂತೆ ಹಲವು ಹೋಟೆಲ್, ಅಂಗಡಿಗಳ ಲೈಟಿಂಗ್ ಬೋರ್ಡ್ ಒಡೆದು ಹಾಕಿದರು. ಕನ್ನಡ ಇಲ್ಲದ ಹೋರ್ಡಿಂಗ್‌ಗಳನ್ನು ಹರಿದು ಹಾನಿ ಮಾಡಿದರು. ಚಿಕ್ಕಜಾಲ ಸೇರಿ ಹಲವು ಪ್ರದೇಶಗಳಲ್ಲಿ ಫಲಕಗಳನ್ನು ಕಿತ್ತು ಹಾಕಲಾಯಿತು.

ಕರ್ನಾಟಕ ರಕ್ಷಣಾ ವೇದಿಕೆಯ ಬೆಂಗಳೂರು ನಗರ ಘಟಕದ ನೇತೃತ್ವದಲ್ಲಿ ನಗರದ ಒಳಗೆ ಮೆರವಣಿಗೆಗಳಾದವು. ರಾಜಾಜಿನಗರ, ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಕೆ.ಆರ್.ಪುರ, ವಿಜಯನಗರ, ಮೈಸೂರು ರಸ್ತೆ, ಚಿಕ್ಕಪೇಟೆ, ಗಾಂಧಿನಗರ ಸೇರಿದಂತೆ ವಿವಿಧ ಭಾಗಗಳಲ್ಲಿ ಕಾರ್ಯಕರ್ತರು ಆಂದೋಲನ ನಡೆಸಿದರು. ಹಲವು ನಾಮಫಲಗಳನ್ನು ಕಿತ್ತು ಹಾಕಿದರು. ಕೀಳಲು ಸಾಧ್ಯವಾಗದ ಫಲಕಗಳಿಗೆ ಮಸಿ ಬಳಿದರು.

ಪೊಲೀಸರು ಮತ್ತು ಕರವೇ ಕಾರ್ಯಕರ್ತರ ನಡುವೆ ಹಲವು ಕಡೆ ಮಾತಿನ ಚಕಮಕಿಗಳು ನಡೆದವು. ಪ್ರತಿಭಟನಕಾರರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು. ಹಲವು ಕಡೆಗಳಲ್ಲಿ ಏಕಕಾಲಕ್ಕೆ ಆಂದೋಲನ ಆರಂಭವಾಗಿದ್ದರಿಂದ ಸುಗಮ ಸಂಚಾರಕ್ಕೆ ಅಡ್ಡಿ ಉಂಟಾಯಿತು.

ಸ್ಪಷ್ಟ ಸಂದೇಶ: 'ಕನ್ನಡ ನಾಮಫಲಕ ಜಾಗೃತಿ ಆಂದೋಲನ ಅಭೂತಪೂರ್ವ ಯಶಸ್ಸು ಕಂಡಿದೆ. ರಾಜ್ಯದ ಮೂಲೆ ಮೂಲೆಯಿಂದ ಬಂದ ಕಾರ್ಯಕರ್ತರು ಕನ್ನಡೇತರ ಸಾವಿರಾರು ನಾಮಫಲಕಗಳನ್ನು ಕಿತ್ತು ಹಾಕಿದ್ದಾರೆ. ಕನ್ನಡವನ್ನು, ಕನ್ನಡಿಗರನ್ನು ತಿರಸ್ಕಾರದಿಂದ ನೋಡುತ್ತಿದ್ದವರಿಗೆ ಕರ್ನಾಟಕ ರಕ್ಷಣಾ ವೇದಿಕೆ ಸ್ಪಷ್ಟ ಸಂದೇಶ ನೀಡಿದೆ. ಕನ್ನಡಿಗರ ತಾಳ್ಮೆಯನ್ನು ಕೆಣಕಿದರೆ ಏನಾಗುತ್ತದೆ ಎಂಬುದಕ್ಕೆ ಇವತ್ತಿನ ಪ್ರತಿಭಟನೆ ಉದಾಹರಣೆ' ಎಂದು ವೇದಿಕೆಯ ಟಿ.ಎ. ನಾರಾಯಣಗೌಡ ತಿಳಿಸಿದ್ದಾರೆ.

ಠಾಣೆಯಲ್ಲಿ ಕೂರಿಸಿದ ಪೊಲೀಸರು: ಕರ್ನಾಟಕ ರಕ್ಷಣಾ ವೇದಿಕೆಯ ಸದಸ್ಯರನ್ನು ಪೊಲೀಸರು ಠಾಣೆಗಳಲ್ಲಿ ಕೂಡಿಟ್ಟಿದ್ದೂ ರಾತ್ರಿಯಾದರೂ ಬಿಟ್ಟಿಲ್ಲ ಎಂದು ಸದಸ್ಯರು ಠಾಣೆಯಲ್ಲಿಯೇ ಪ್ರತಿಭಟನೆ ನಡೆಸಿದರು.

1. ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ. ನಾರಾಯಣ ಗೌಡ ನೇತೃತ್ವದಲ್ಲಿ ಬುಧವಾರ ನಗರದ ಏರ್‌ಪೋರ್ಟ್ ರಸ್ತೆಯ ಸಾದಹಳ್ಳಿ ಗೇಟ್‌ನಿಂದ ಕನ್ನಡ ಜಾಗೃತಿ ಮೆರವಣಿಗೆ ನಡೆಯಿತು
2. ಇಂಗ್ಲಿಷ್ ನಾಮಫಲಕದ ಬೋರ್ಡ್ ಕೀಳುತ್ತಿರುವ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು

–ಪ್ರಜಾವಾಣಿ ಚಿತ್ರಗಳು

ಫಲಕ ಬದಲಾವಣೆಗೆ ಸಮಯ ಕೊಡಿ: ಎಫ್‌ಕೆಸಿಸಿಐ

ವಾಣಿಜ್ಯ ಸಂಸ್ಥೆಗಳಿಗೆ ಶೇ 60ರಷ್ಟು ಕನ್ನಡ ನಾಮಫಲಕ ಅಳವಡಿಸುವ ಬಿಬಿಎಂಪಿ ನಿರ್ದೇಶನದ ಪಾಲನೆಗೆ ಸಮಯ ನೀಡುವಂತೆ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಕೋರಿದೆ.

ಕಡ್ಡಾಯ ಕನ್ನಡ ನಾಮಫಲಕಗಳನ್ನು ಅಳವಡಿಸುವುದಕ್ಕೆ ಫೆ.28ರವರೆಗೆ ಗಡುವು ಇದೆ. ಹಾಗಾಗಿ, ಯಾವುದೇ ಕ್ರಮ ತೆಗೆದುಕೊಳ್ಳಬಾರದು. ವ್ಯಾಪಾರ ಮತ್ತು ವಾಣಿಜ್ಯ ಸಂಸ್ಥೆಗಳಿಗೆ ಕಿರುಕುಳ ನೀಡಲು ಕಾನೂನು ಬಳಕೆ ಮಾಡದಂತೆ ನೋಡಿಕೊಳ್ಳಬೇಕು ಎಂದು ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್‌ಚಂದ್ರ ಲಹೋಟಿ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಎಫ್‌ಕೆಸಿಸಿಐ ಹಾಗೂ ಸದಸ್ಯ ಸಂಸ್ಥೆಗಳು ಯಾವಾಗಲೂ ಸರ್ಕಾರದ ನಿಯಮಗಳನ್ನು ಅನುಸರಿಸುತ್ತಾ ಬಂದಿದೆ. ಆದೇಶ, ಸೂಚನೆಗಳನ್ನು ಪಾಲಿಸುವಂತೆ ಸದಸ್ಯರಿಗೆ ಸೂಚನೆ ನೀಡುತ್ತದೆ ಎಂದು ಹೇಳಿದ್ದಾರೆ.

ಐದು ಎಫ್‌ಐಆರ್, 500ಕ್ಕೂ ಹೆಚ್ಚು ಕಾರ್ಯಕರ್ತರ ವಶ

ಕರ್ನಾಟಕ ರಕ್ಷಣಾ ವೇದಿಕೆಯ ಜಾಗೃತಿ ಮೆರವಣಿಗೆ ವೇಳೆ ಕೆಲವು ಪ್ರದೇಶದಲ್ಲಿ ಅಹಿತಕರ ಘಟನೆಗಳು ನಡೆದಿದ್ದು, ಈ ಸಂಬಂಧ ಐದು ಎಫ್‌ಐಆರ್‌ಗಳು ದಾಖಲಾಗಿವೆ.

ಆಗ್ನೇಯ, ಪಶ್ಚಿಮ, ಕೇಂದ್ರ ವಿಭಾಗದಲ್ಲಿ ತಲಾ ಒಂದೊಂದು ಹಾಗೂ ಈಶಾನ್ಯ ವಿಭಾಗದಲ್ಲಿ ಎರಡು ಪ್ರಕರಣಗಳು ದಾಖಲಾಗಿವೆ. ಅಹಿತಕರ ಘಟನೆಯಲ್ಲಿ ಭಾಗಿಯಾದ 500ಕ್ಕೂ ಹೆಚ್ಚು ಕಾರ್ಯಕರ್ತರನ್ನು ವಶಕ್ಕೆ ಪಡೆದು ಬಿಡುಗಡೆ ಮಾಡಲಾಗಿದೆ. ಕಾನೂನು ಉಲ್ಲಂಘನೆ, ಶಾಂತಿ ಭಂಗ ಹಾಗೂ ಪ್ರಚೋದನೆ ನೀಡಿದ ಆರೋಪದ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಿಯಮ ಉಲ್ಲಂಘಿಸಿದರೆ ಪರವಾನಗಿ ರದ್ದು: ಸಚಿವ ಶಿವರಾಜ ತಂಗಡಗಿ

'ಅಂಗಡಿ, ಮಳಿಗೆ, ವಾಣಿಜ್ಯ ಸಂಸ್ಥೆಗಳ ನಾಮಫಲಕಗಳಲ್ಲಿ ಶೇಕಡ 60ರಷ್ಟು ಕನ್ನಡ ಬಳಸಬೇಕೆಂಬ ಮಾರ್ಗಸೂಚಿ ಉಲ್ಲಂಘಿಸುವವರ ಉದ್ದಿಮೆ ಪರವಾನಗಿ ರದ್ದುಗೊಳಿಸಲು ಕಠಿಣ ನಿಯಮಗಳನ್ನು ರೂಪಿಸಲಾಗುವುದು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದರು.

ಕನ್ನಡ ನಾಮಫಲಕ ಜಾಗೃತಿ ಹೋರಾಟ ಕುರಿತು ಸುದ್ದಿಗಾರರಿಗೆ ಬುಧವಾರ ಪ್ರತಿಕ್ರಿಯಿಸಿದ ಅವರು, 'ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಪದಗಳೇ ಇರಬೇಕು. ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆಯಡಿ ಕಠಿಣ ನಿಯಮಗಳನ್ನು ರೂಪಿಸಲಾಗುವುದು. ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಕೆ ಮಾಡಬೇಕೆಂಬ ಕರ್ನಾಟಕ ರಕ್ಷಣಾ ವೇದಿಕೆಯ ಆಗ್ರಹಕ್ಕೆ ನಮ್ಮ ಬೆಂಬಲವಿದೆ. ಆದರೆ, ಶಾಂತಿಯುತವಾಗಿ ಪ್ರತಿಭಟನೆ ನಡೆಸಬೇಕು' ಎಂದರು.

'ಎರಡೂ ಭಾಷೆ ಇದ್ದರೆ ಒಳ್ಳೆಯದು'

ನಾಮಫಲಕಗಳಲ್ಲಿ ಕನ್ನಡ ಕಡ್ಡಾಯ ಕುರಿತು ಪ್ರತಿಕ್ರಿಯಿಸಿದ ಗೃಹ ಸಚಿವ ಜಿ. ಪರಮೇಶ್ವರ ಅವರು, 'ಬೆಂಗಳೂರಿನಂತಹ ನಗರಗಳಿಗೆ ದೇಶ, ಹೊರದೇಶಗಳಿಂದ ಬಹಳಷ್ಟು ಜನರು ಬರುತ್ತಾರೆ. ಕನ್ನಡದಲ್ಲೇ ನಾಮಫಲಕಗಳು ಇದ್ದರೆ ಅವರಿಗೆ ಗೊತ್ತಾಗುವುದಿಲ್ಲ. ಅವರಿಗೆ ಕಷ್ಟವಾಗುತ್ತದೆ. ಹೀಗಾಗಿ, ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಬರೆಯಬೇಕು. ಎರಡೂ ಭಾಷೆ ಇದ್ದರೆ ಆಡಳಿತದ ದೃಷ್ಟಿಯಿಂದ ಒಳ್ಳೆಯದಾಗುತ್ತದೆ. ನಾಮಫಲಕಗಳು ಕನ್ನಡದಲ್ಲೇ ಇರಬೇಕು ಎಂಬುದನ್ನು ಮಾಡಬಹುದು' ಎಂದು ಹೇಳಿದರು.

ಸುದ್ದಿ 2 ನಿಮಿಷ

'ಕೋವಿಡ್ ಅಕ್ರಮ: ಯತ್ನಾಳ ಅವರನ್ನೂ ತನಿಖೆಗೊಳಪಡಿಸಿ'

ವಿಜಯಪುರ: 'ಬಿಜೆಪಿ ಸರ್ಕಾರದ ಆಡಳಿತದಲ್ಲಿ ಕೋವಿಡ್ ಹೆಸರಿನಲ್ಲಿ₹40 ಸಾವಿರ ಕೋಟಿ ಅವ್ಯವಹಾರ ನಡೆದಿದೆ' ಎಂದು ಆರೋಪಿಸಿರುವ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಮೊದಲು ತನಿಖೆಗೊಳಪಡಿಸಬೇಕು. ಆಗ ಇನ್ನು ಹೆಚ್ಚಿನ ಸತ್ಯಾಂಶ ಹೊರಬೀಳಲಿದೆ. ಈ ಕುರಿತು ಸಮಗ್ರ ತನಿಖೆ ನಡೆಯಬೇಕು' ಎಂದು ಕೆಪಿಸಿಸಿ ವಕ್ತಾರ ಎಸ್.ಎಂ.ಪಾಟೀಲ ಗಣಿಹಾರ ಆಗ್ರಹಿಸಿದರು.

ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ ಅವ್ಯವಹಾರ ನಡೆಸಿದ ಸಮಯದಲ್ಲಿ ಯತ್ನಾಳ ಕೂಡ ಬಿಜೆಪಿ ಸರ್ಕಾರದ ಭಾಗವಾಗಿದ್ದರು, ಆಗ ಈ ಅವ್ಯವಹಾರದ ಬಗ್ಗೆ ಧ್ವನಿ ಏಕೆ ಎತ್ತಲಿಲ್ಲ? ಆಗ ನಿಮ್ಮ ಪಾಲು ಅದರಲ್ಲಿತ್ತೋ? ಅಥವಾ ಪಾಲು ಹಣ ಹಂಚಿಕೆಯಲ್ಲಿ ಧಕ್ಕೆಯಾಗಿದ್ದಕ್ಕೆ ಈ ರೀತಿ ಆರೋಪಿಸುತ್ತಿದ್ದೀರೋ' ಎಂದು ಪ್ರಶ್ನಿಸಿದರು.

'ಯತ್ನಾಳರ ಬಗ್ಗೆ ಜನರಿಗೆ ಗೌರವವಿದೆ. ಅವರ ಈ ಗೌರವ ಇನ್ನೂ ಹೆಚ್ಚಾಗಬೇಕಿದ್ದರೆ ಮೊದಲು ಚುನಾವಣೆಗೆ ಸ್ಪರ್ಧಿಸಿದಾಗ ಎಷ್ಟು ಪ್ರಮಾಣದ ಆಸ್ತಿ ಇತ್ತು? ಈಗ ಎಷ್ಟು ಪ್ರಮಾಣದ ಆಸ್ತಿ ಇದೆ? ಎಂದು ಜನರ ಮುಂದೆ ಬಿಚ್ಚಿಡಬೇಕು. ಚಿಂಚೋಳಿಯಲ್ಲಿ ಸಕ್ಕರೆ ಕಾರ್ಖಾನೆ ನಿರ್ಮಾಣಕ್ಕೆ ಅವರಿಗೆ ₹2 ಸಾವಿರ ಕೋಟಿ ಎಲ್ಲಿಂದ ಬಂತು? ಅವರದೇ 'ಸಿದ್ಧಸಿರಿ' ಸಹಕಾರ ಬ್ಯಾಂಕ್ ವಹಿವಾಟು–ಹೀಗೆ ಎಲ್ಲವನ್ನೂ ಬಹಿರಂಗಪಡಿಸಿ ತಮ್ಮ ಪರಿಶುದ್ಧತೆ ಸಾಬೀತು ಪಡಿಸಬೇಕು' ಎಂದು ಸವಾಲು ಹಾಕಿದರು.

'ಕಲ್ಲಡ್ಕ ಪ್ರಭಾಕರ ಭಟ್ ಮೇಲೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ'

ಬೆಂಗಳೂರು: 'ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳ ಗೌರವಕ್ಕೆ ಧಕ್ಕೆ ಆಗುವಂತಹ ಹೇಳಿಕೆ ನೀಡಿರುವ ಆರೆಸ್ಸೆಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ಮೇಲೆ ತಕ್ಷಣ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಬಂಧಿಸಬೇಕು' ಎಂದು ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಒತ್ತಾಯಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಬಿಜೆಪಿ ಮತ್ತು ಸಂಘ ಪರಿವಾರದ ನಾಯಕರು ಸಂಸ್ಕೃತಿ ರಕ್ಷಣೆ ಬಗ್ಗೆ ದೊಡ್ಡ ದೊಡ್ಡ ಭಾಷಣ ಬಿಗಿಯುತ್ತಾರೆ. ಆದರೆ, ಕಲ್ಲಡ್ಕ ಪ್ರಭಾಕರ ಭಟ್ಟರು ಮೈಸೂರು ಮತ್ತು ಶ್ರೀರಂಗಪಟ್ಟಣದಲ್ಲಿ ನೀಡಿರುವ ಹೇಳಿಕೆ ಕೀಳು ಅಭಿವ್ಯಕ್ತಿಯಿಂದ ಕೂಡಿದ್ದಾಗಿದೆ. ಕೋಮುದ್ವೇಷ ಹರಡಲು ಅವರು ಪ್ರಯತ್ನಿಸುತ್ತಿದ್ದಾರೆ' ಎಂದು ದೂರಿದರು.

'ಸಮುದಾಯದವರು ಒಟ್ಟಾಗಿ ದೂರು ನೀಡುವ ಮೂಲಕ ಎಫ್‌ಐಆರ್ ದಾಖಲಿಸಲಾಗಿದೆ. ಅದರ ಆಧಾರದಲ್ಲಿ ಕೂಡಲೇ ಅವರನ್ನು ಬಂಧಿಸಬೇಕು. ಸರ್ವಜನಾಂಗದ ಶಾಂತಿಯ ತೋಟ ಎಂಬ ಶೀರ್ಷಿಕೆಯ ಪ್ರಣಾಳಿಕೆ ಜನರ ಮುಂದಿಟ್ಟು ಮತ ಪಡೆದು ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಅದರಂತೆ ಕೋಮು ದ್ವೇಷ ಹರಡುವ, ಶಾಂತಿ ಕದಡುವ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದರು.

ವಿಕ್ರಂ ವಿಚಾರಣೆಗೆ ಅನುಮತಿ ಕೇಳಿದ ಅರಣ್ಯ ಇಲಾಖೆ

ಪ್ರಜಾವಾಣಿ ವಾರ್ತೆ

ಹಾಸನ: 'ಬೇಲೂರು ತಾಲ್ಲೂಕಿನ ನಂದಗೋಡನಹಳ್ಳಿಯ 10 ಎಕರೆ ಪ್ರದೇಶದಲ್ಲಿ 126 ಮರಗಳನ್ನು ಕಡಿದಿರುವ ಪ್ರಕರಣಕ್ಕೆ ಸಂಬಂಧಿಸಿ ಸಂಸದ ಪ್ರತಾಪ್ ಸಿಂಹ ಅವರ ಸಹೋದರ ವಿಕ್ರಂ ಸಿಂಹ ಅವರ ವಿಚಾರಣೆ ನಡೆಸಲು ಬೇಲೂರು ಜೆಎಂಎಫ್‌ಸಿ ಕೋರ್ಟ್‌ನ ಅನುಮತಿ ಕೋರಲಾಗಿದೆ' ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

'ಗ್ರಾಮದ ಜಯಮ್ಮ ಎಂಬವರಿಂದ 3 ಎಕರೆ 10 ಗುಂಟೆ ಜಮೀನನ್ನು ವಿಕ್ರಂ ಸಿಂಹ ಗುತ್ತಿಗೆಗೆ ಪಡೆದಿದ್ದಾರೆ. ಜನವರಿ 1 ರಿಂದ ಒಂದು ವರ್ಷದ ಅವಧಿಗೆ ಶುಂಠಿ ಬೆಳೆಯಲು ಎಕರೆಗೆ ₹55 ಸಾವಿರದಂತೆ ಕರಾರು ಮಾಡಿಕೊಂಡಿದ್ದಾರೆ. ಆ ಜಮೀನು ಸೇರಿದಂತೆ ಸುತ್ತಲಿನ 10 ಎಕರೆ ಪ್ರದೇಶದಲ್ಲಿದ್ದ ಬೆಲೆಬಾಳುವ ಮರಗಳನ್ನು ಕಡಿದು ಹಾಕಲಾಗಿತ್ತು. ಡಿ.17 ರಂದು ಭೇಟಿ ನೀಡಿದ್ದ ಬೇಲೂರು ತಹಶೀಲ್ದಾರ್ ಮಮತಾ ಅದನ್ನು ಗಮನಿಸಿದ್ದರು. ನಂತರ ಜಯಮ್ಮ ಹಾಗೂ ರಾಕೇಶ್ ಶೆಟ್ಟಿ ಮತ್ತು ಇತರರ ವಿರುದ್ಧ ಅರಣ್ಯ ಇಲಾಖೆ ಪ್ರಕರಣ ದಾಖಲಿಸಿತ್ತು' ಎಂದು ಮೂಲಗಳು ತಿಳಿಸಿವೆ.

'ವಿಕ್ರಂ ಸಿಂಹ ಅವರೇ ಮರಗಳನ್ನು ಕಡಿದು ಸಾಗಿಸಲು ಯತ್ನಿಸಿದ್ದಾರೆಂಬ ಆರೋಪ ಕೇಳಿ ಬಂದಿದ್ದು, ಕೂಲಂಕಷ ತನಿಖೆ ನಡೆಸಲು ವಿಚಾರಣೆ ಅಗತ್ಯ. ವ್ಯಕ್ತಿಯೊಬ್ಬರು ಸ್ಥಳದಲ್ಲಿ ಖುದ್ದು ಹಾಜರಿದ್ದು ಮರಗಳನ್ನು ಕಡಿಸಿರುವುದಾಗಿ ಸ್ಥಳೀಯರು ತಿಳಿಸಿದ್ದು, ಅವರಿಗಾಗಿ ಶೋಧ ನಡೆದಿದೆ. ಅವರ ಬಂಧನವಾದಲ್ಲಿ, ನಿಜವಾದ ಆರೋಪಿಗಳು ಯಾರೆಂದು ಪತ್ತೆಯಾಗಲಿದೆ' ಎಂದು ಅರಣ್ಯ ಇಲಾಖೆಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ.

'ಅನುಮತಿಗಾಗಿ ಕೋರ್ಟ್‌ಗೆ ಮನವಿ ಮಾಡಲಾಗಿದೆ. ಇನ್ನೆರಡು ದಿನದಲ್ಲಿ ಆದೇಶ ಹೊರಬೀಳುವ ಸಾಧ್ಯತೆ ಇದೆ. ಅದನ್ನ ಆಧರಿಸಿ ಕ್ರಮ ಕೈಗೊಳ್ಳಲಾಗುವುದು' ಎಂದಿದ್ದಾರೆ.

ಮೂಡಿಗೆರೆ ಬಿಇಒ ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ

ಹೇಮಂತರಾಜ್

ಚಿಕ್ಕಮಗಳೂರು: ಅನುಕಂಪದ ಆಧಾರದ ನೌಕರಿಗೆ ಶಿಫಾರಸು ಮಾಡಲು ₹10 ಸಾವಿರ ಲಂಚ ಪಡೆಯುತ್ತಿದ್ದ ಆರೋಪದಲ್ಲಿ ಮೂಡಿಗೆರೆ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಹೇಮಂತರಾಜ್ ಅವರನ್ನು ಲೋಕಾಯುಕ್ತ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಮೂಡಿಗೆರೆ ತಾಲ್ಲೂಕಿನ ಹೊಯ್ಸಳಲು ಗ್ರಾಮದಲ್ಲಿ ಸಹ ಶಿಕ್ಷಕರಾಗಿದ್ದ ಜಿಲ್ಲೆಯ ತೇಗೂರು ಗ್ರಾಮದ ರಜನಿಕಾಂತ್ 7 ತಿಂಗಳ ಹಿಂದೆ ಹೃದಯಾಘಾತದಿಂದ ಮೃತಪಟ್ಟಿದ್ದರು. ಅವರ ಪತ್ನಿ ಲತಾಮಣಿ ಅನುಕಂಪದ ನೌಕರಿಗೆ ಅರ್ಜಿ ಸಲ್ಲಿಸಿದ್ದು, ಇದನ್ನು ಮೇಲಾಧಿಕಾರಿಗೆ ಶಿಫಾರಸು ಮಾಡುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗೆ ಮನವಿ ಮಾಡಿದ್ದರು.

ಬುಧವಾರ ₹10 ಸಾವಿರ ಲಂಚ ಪಡೆಯುವಾಗ ಬಂಧಿಸಲಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಇಬ್ಬರು ಉಗ್ರರಿಗೆ 7 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಧಿತ ಇಬ್ಬರು ಉಗ್ರರಿಗೆ ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯ 7 ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ ಬುಧವಾರ ಆದೇಶಿಸಿದೆ.

ಅಸ್ಸಾಂನ ಅಖ್ತರ್ ಹುಸೇನ್ ಲಷ್ಕರ್ (24) ಮತ್ತು ಪಶ್ಚಿಮ ಬಂಗಾಳದ ಅಬ್ದುಲ್ ಅಲೀಮ್ ಅಲಿಯಾಸ್ ಎಂಡಿ ಜುಬಾನ್(23) ಶಿಕ್ಷೆಗೊಳಗಾದ ಉಗ್ರರು. ಲಷ್ಕರ್‌ಗೆ ₹41 ಸಾವಿರ, ಅಬ್ದುಲ್ ಅಲೀಮ್ ಮೊಂಡಲ್‌ಗೆ ₹ 51 ಸಾವಿರ ದಂಡ ವಿಧಿಸಲಾಗಿದೆ.

ನಿಷೇಧಿತ ಅಲ್‌ಖೈದಾ ಉಗ್ರ ಸಂಘಟನೆ ಜತೆಗೆ ಸಂಪರ್ಕದಲ್ಲಿದ್ದ ಆರೋಪದ ಅಡಿ ಇವರನ್ನು ಕಳೆದ ವರ್ಷ ಸಿಸಿಬಿ ಪೊಲೀಸರು ಬಂಧಿಸಿದ್ದರು.

ಬಂಧಿತರು ವಿದೇಶದಲ್ಲಿರುವ ಅಲ್ ಖೈದಾ ಸಂಘಟನೆ ಸದಸ್ಯರ ಜತೆಗೆ ಸಾಮಾಜಿಕ ಜಾಲತಾಣಗಳ ಮೂಲಕ ಸಂಪರ್ಕದಲ್ಲಿದ್ದರು. ಟೆಲಿಗ್ರಾಂ ಆ್ಯಪ್‌ನಲ್ಲಿ ವಿದೇಶಿ ಹ್ಯಾಂಡ್ಲರ್‌ಗಳ ಜತೆ ಸಂವಹನ ನಡೆಸುತ್ತಿದ್ದರು. ಹಲವು ರಾಜ್ಯಗಳ ಯುವಕರನ್ನು ಸಂಪರ್ಕಿಸಿ, ಉಗ್ರ ಸಂಘಟನೆಗೆ ನೇಮಕ ಮಾಡಲು ಇಬ್ಬರು ಯತ್ನಿಸಿದ್ದರು ಎಂಬುದು ಎನ್‌ಐಎ ತನಿಖೆ ವೇಳೆ ಗೊತ್ತಾಗಿತ್ತು.

ಜಮ್ಮು–ಕಾಶ್ಮೀರದ ಮೂಲಕ ಅಫ್ಗಾನಿಸ್ತಾನದ ಖಾರಾಸನ್ ಪ್ರಾಂತ್ಯಕ್ಕೆ ತೆರಳಲು ಇಬ್ಬರು ಉಗ್ರರು ಸಿದ್ಧತೆ ನಡೆಸಿದ್ದರು. ಅಲ್ಲಿ ಉಗ್ರ ತರಬೇತಿ ಪಡೆದು ವಾಪಸ್ ಬಂದು ಹಲವೆಡೆ ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸಿದ್ದರು ಎಂದು ಮೂಲಗಳು ಹೇಳಿವೆ.

'ಅಖ್ತರ್ ಹುಸೇನ್ ಲಷ್ಕರ್‌ನದ್ದು ಅಸ್ಸಾಂನ ಕಚಾರ್ ಜಿಲ್ಲೆಯ ತೆಲಿತಿಕಾರ್ ಗ್ರಾಮ. ಎರಡು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದು ತಿಲಕನಗರದ ಬಿ.ಟಿ.ಬಿ ಲೇಔಟ್‌ನ 3ನೇ ಕ್ರಾಸ್‌ನ ಫನಿ ಮಸೀದಿ ಸಮೀಪದ ಬಾಡಿಗೆ ಮನೆಯಲ್ಲಿ ಮೂವರು ಸ್ನೇಹಿತರ ಜತೆ ವಾಸವಾಗಿದ್ದ. ಹಗಲು ವೇಳೆ ಹೊರಗೆ ಬರುತ್ತಿರಲಿಲ್ಲ. ಸಂಜೆ ವೇಳೆ ಫುಡ್ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ' ಎಂದು ಮೂಲಗಳು ಹೇಳಿವೆ.

ಖಚಿತ ಮಾಹಿತಿ ಮೇರೆಗೆ ಕಳೆದ ವರ್ಷದ ಜುಲೈನಲ್ಲಿ ಸಿಸಿಬಿ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಅಖ್ತರ್‌ನನ್ನು ಬಂಧಿಸಿದ್ದರು. ಅಖ್ತರ್ ನೀಡಿದ ಮಾಹಿತಿ ಮೇರೆಗೆ ತಮಿಳುನಾಡಿನಲ್ಲಿ ಜುಬಾನ್‌ನನ್ನು ಬಂಧಿಸಲಾಗಿತ್ತು. ಈ ಸಂಬಂಧ ತಿಲಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

'ರಾಜಕಾರಣಿಗಳೇ ಲೂಟಿಕೋರರು, ದರೋಡೆಕೋರರು'

ಪ್ರಜಾವಾಣಿ ವಾರ್ತೆ

ರಾಜು ಕಾಗೆ

ಮುಗಳಖೋಡ (ಬೆಳಗಾವಿ ಜಿಲ್ಲೆ): 'ರಾಜಕೀಯ ವ್ಯವಸ್ಥೆ ತುಂಬ ಕೆಟ್ಟು ಹೋಗಿದೆ. ಇಲ್ಲಿ ರಾಜಕಾರಣಿಗಳು ಪವಿತ್ರವಾಗಿಲ್ಲ. ಜಗತ್ತಿನಲ್ಲಿ ಯಾರಾದರೂ ಲೂಟಿ ಮಾಡುವವರು, ದರೋಡೆ ಮಾಡುವವರು ಇದ್ದರೆ ಅದು ರಾಜಕಾರಣಿಗಳೇ' ಎಂದು ಕಾಗವಾಡದ ಕಾಂಗ್ರೆಸ್ ಶಾಸಕ ರಾಜು ಕಾಗೆ ಹೇಳಿದ್ದಾರೆ.

ರಾಯಬಾಗ ತಾಲ್ಲೂಕಿನ ಮುಗಳಖೋಡದ ಖಾಸಗಿ ಶಾಲೆಯಲ್ಲಿ ಬುಧವಾರ ನಡೆದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, 'ಶಾಲೆ ಮಕ್ಕಳಿಗೆ ಹಲವು ಯೋಜನೆಗಳನ್ನು ರೂಪಿಸಲಾಗಿದೆ. ಅವುಗಳ ನಮ್ಮಂಥ ರಾಜಕಾರಣಿಗಳಿಗೆ ಕಮಿಷನ್ ಹೊಡೆಯುವ ಯೋಜನೆಗಳಾಗಿವೆ' ಎಂದರು.

'ಇಂಥ ವೇದಿಕೆಯಲ್ಲಿ ನಾವು ಮಾತನಾಡಬಾರದು. ನಮ್ಮ ಮಾನವನ್ನು ನಾವೇ ತೆಗೆದುಕೊಂಡಂತಾಗುತ್ತದೆ. ಶ್ರೀಗಳ ಜೊತೆ ಗೌರವ ಕೊಟ್ಟು ನಮ್ಮನ್ನು ಕರೆದುಕೊಂಡು ಬರಬೇಡಿ. ನಮ್ಮನ್ನು ಹಿತ್ತಿಲ ಬಾಗಿಲಿನಿಂದ ಕರೆದುಕೊಂಡು ಬನ್ನಿ. ಆ ಮಟ್ಟಿಗೆ ಸದ್ಯ ಈಗ ವ್ಯವಸ್ಥೆ ಹದಗೆಟ್ಟಿದೆ. ನಾವೆಲ್ಲರೂ ಶುದ್ಧರಿಲ್ಲ' ಎಂದೂ ಅವರು ಹೇಳಿದರು.

'ಗುಜರಿ' ಬಸ್‌ಗೆ ಬ್ರೇಕ್

ಒಂದನೇ ಪುಟದಿಂದ...

ಪ್ರಕರಣವೇನು?: ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲ್ಲೂಕಿನ ಎತ್ತಿನಬಯಲು ನಿವಾಸಿ ಸತೀಶ್ ಗಣಪತಿ ಗುನಗಿ ವಾಯವ್ಯ ಕೆಎಸ್‌ಆರ್‌ಟಿಸಿ ವಿಭಾಗದಲ್ಲಿ ಬಸ್ ಚಾಲಕರಾಗಿದ್ದರು. 2006ರ ನವೆಂಬರ್ 27ರಂದು ಅವರು ಚಲಾಯಿಸುತ್ತಿದ್ದ ಬಸ್ (ಕೆಎ-31 ಎಫ್-620) ಅಂಕೋಲಾದ ಕೆ.ಸಿ. ರಸ್ತೆಯಲ್ಲಿರುವ ಹರ್ಷ ಹೋಟೆಲ್ ಮುಂಭಾಗ ಮಧ್ಯಾಹ್ನ 12.10ರ ಸಮಯದಲ್ಲಿ ಕೆವಿಎಸ್ ಶಾಲೆಯ ಮೂವರು ವಿದ್ಯಾರ್ಥಿಗಳಿಗೆ ಡಿಕ್ಕಿ ಹೊಡೆದಿತ್ತು.

ಘಟನೆಯಲ್ಲಿ ಮೃತ್ಯುಂಜಯ (11) ಮತ್ತು ಅಭಿಲಾಷ್ ಮಾರುತಿ ಗಾಂವಕರ್ (12) ಸಾವನ್ನಪ್ಪಿದ್ದರು. ಮೃತ್ಯುಂಜಯನ ಅಣ್ಣ ಏಳನೇ ತರಗತಿಯಲ್ಲಿ ಓದುತ್ತಿದ್ದ ಧನಂಜಯ ಗಂಭೀರವಾಗಿ ಗಾಯಗೊಂಡಿದ್ದ.

ಪ್ರಕರಣ ದಾಖಲಿಸಿಕೊಂಡಿದ್ದ ಅಂಕೋಲಾ ಠಾಣಾ ಪೊಲೀಸರು ತನಿಖೆ ನಡೆಸಿ ಸ್ಥಳೀಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಾಲಯವು ಚಾಲಕ ಸತೀಶ್‌ಗೆ ಒಂದು ವರ್ಷದ ಜೈಲು ಶಿಕ್ಷೆ ಮತ್ತು ₹1 ಸಾವಿರ ದಂಡ ವಿಧಿಸಿ, 2008ರ ನವೆಂಬರ್ 26ರಂದು ಆದೇಶ ಹೊರಡಿಸಿತ್ತು. ಈ ಶಿಕ್ಷೆಯನ್ನು ಕಾರವಾರ ಜಿಲ್ಲಾ ನ್ಯಾಯಾಲಯ 2019ರ ಮೇ 29ರಂದು ಎತ್ತಿ ಹಿಡಿದಿತ್ತು.

ಇದನ್ನು ಪ್ರಶ್ನಿಸಿ ಸತೀಶ್, ಹೈಕೋರ್ಟ್‌ಗೆ ಮರು ಪರಿಶೀಲನಾ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ನ್ಯಾಯಪೀಠ ಭಾಗಶಃ ಪುರಸ್ಕರಿಸಿದೆ.

ಚಾಲಕನ ಸದ್ಯದ ವಯಸ್ಸು 44 ವರ್ಷ. ಈ ಕಾರಣಕ್ಕಾಗಿ ಅವರಿಗೆ ವಿಧಿಸಿರುವ ಶಿಕ್ಷೆಯ ಪ್ರಮಾಣದಲ್ಲಿ ಕೊಂಚ ಔದಾರ್ಯ ತೋರಿಸಬಹುದು ಎಂದು ತೀರ್ಮಾನಿಸಿ, ಒಂದು ವರ್ಷದ ಶಿಕ್ಷೆಯನ್ನು ಆರು ತಿಂಗಳಿಗೆ ಇಳಿಸಿದೆ.

ತಣಿಯದ ತಂದೆ–ಮಗನ ಮುನಿಸು

ಪ್ರಜಾವಾಣಿ ವಾರ್ತೆ

ಎಂ. ಕೃಷ್ಣಪ್ಪ

ಪ್ರಿಯಕೃಷ್ಣ

ಬೆಂಗಳೂರು: ಸಚಿವ ಸ್ಥಾನ ಕೈ ತಪ್ಪಿದ ಕಾರಣಕ್ಕೆ ಮತ್ತು ತಮ್ಮ ರಾಜಕೀಯ ವಿರೋಧಿ ವಿ. ಸೋಮಣ್ಣ ಅವರನ್ನು ಕಾಂಗ್ರೆಸ್‌ಗೆ ಸೆಳೆಯುವ ಪಕ್ಷದ ನಾಯಕರ ನಡೆಗೆ ವಿಜಯನಗರ ಶಾಸಕ ಎಂ. ಕೃಷ್ಣಪ್ಪ ಮತ್ತು ಅವರ ಪುತ್ರ ಗೋವಿಂದರಾಜನಗರ ಶಾಸಕ ಪ್ರಿಯಕೃಷ್ಣ ಮುನಿಸಿಕೊಂಡಿದ್ದಾರೆ.

'ಇಬ್ಬರನ್ನು ಸಮಾಧಾನಪಡಿಸುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಯತ್ನ ಫಲ ನೀಡಿಲ್ಲ' ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಪಕ್ಷದ ಯಾವುದೇ ಚಟುವಟಿಕೆಯಲ್ಲಿ ಭಾಗಿಯಾಗದೆ ಪಕ್ಷದ ನಾಯಕರಿಂದ ತಂದೆ ಮತ್ತು ಮಗ ಅಂತರ ಕಾಯ್ದುಕೊಂಡಿದ್ದಾರೆ. ಅಲ್ಲದೆ, ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆದ ಸಭೆಗಳಿಗೂ ಹಾಜರಾಗದೆ ಇಬ್ಬರೂ ತಮ್ಮ ಅಸಮಾಧಾನ ಹೊರ ಹಾಕಿದ್ದಾರೆ.

'ಸಚಿವ ಸ್ಥಾನ ಪಡೆದೇ ತೀರುತ್ತೇನೆ' ಎಂದು ಹಟಕ್ಕೆ ಬಿದ್ದಿರುವ ಕೃಷ್ಣಪ್ಪ, ಪುತ್ರನಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷ ಸ್ಥಾನ ನೀಡುವುದಾಗಿ ಡಿ.ಕೆ. ಶಿವಕುಮಾರ್ ನೀಡಿದ ಭರವಸೆಗೂ ಮಣಿದಿಲ್ಲ. ತಮ್ಮನ್ನು ಕಡೆಗಣಿಸಿ ವಿ. ಸೋಮಣ್ಣ ಅವರನ್ನು ಕಾಂಗ್ರೆಸ್‌ಗೆ ಕರೆತರಲು ಶಿವಕುಮಾರ್ ತಂತ್ರ ರೂಪಿಸಿದ್ದಾರೆಂಬ ಕಾರಣಕ್ಕೆ ಕೃಷ್ಣಪ್ಪ ಸಿಡಿಮಿಡಿಗೊಂಡಿದ್ದಾರೆ ಎಂದು ಅವರ ಆಪ್ತ ಮೂಲಗಳು ಹೇಳಿವೆ.

ಬೆಳಗಾವಿಯಲ್ಲಿ ನಡೆದ ವಿಧಾನಸಭಾ ಅಧಿವೇಶನಕ್ಕೆ ಪ್ರಿಯಕೃಷ್ಣ ಗೈರಾಗಿದ್ದರು. ಕೃಷ್ಣಪ್ಪ ಅವರು ಒಂದು ದಿನ ಮಾತ್ರ ಕಾಣಿಸಿಕೊಂಡಿದ್ದರು.

ಕೊರಗಪ್ಪ ಶೆಟ್ಟಿ, ಸಿಂಹ ಸೇರಿ 8 ಮಂದಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ನೀಡುವ 2022–23 ಮತ್ತು 2023–24ನೇ ಸಾಲಿನ 'ಜಾನಪದ ಶ್ರೀ ಪ್ರಶಸ್ತಿ', 'ಜಕಣಾಚಾರಿ ಪ್ರಶಸ್ತಿ' ಹಾಗೂ ವರ್ಣಶಿಲ್ಪ ವೆಂಕಟಪ್ಪ ಪ್ರಶಸ್ತಿ'ಗೆ ಎಂಟು ಮಂದಿ ಸಾಧಕರನ್ನು ಆಯ್ಕೆ ಮಾಡಲಾಗಿದೆ.

'ವರ್ಣಶಿಲ್ಪ ವೆಂಕಟಪ್ಪ ಪ್ರಶಸ್ತಿ'ಗೆ ಮೈಸೂರಿನ ಜಿ.ಎಲ್.ಎನ್. ಸಿಂಹ ಮತ್ತು ಕಲಬುರಗಿಯ ಬಸವರಾಜ ಎಲ್. ಜಾನೆ, 'ಜಕಣಾಚಾರಿ ಪ್ರಶಸ್ತಿ'ಗೆ ಕಲಬುರಗಿಯ ಮಹದೇವಪ್ಪ ಎಲ್. ಶಿಲ್ಪಿ ಮತ್ತು ಚಿಕ್ಕಮಗಳೂರಿನ ಎಸ್.ಪಿ. ಜಯಣ್ಣಾಚಾರ್, 'ಜಾನಪದ ಶ್ರೀ ಪ್ರಶಸ್ತಿ'ಗೆ ದಕ್ಷಿಣ ಕನ್ನಡದ ಅರುವ ಕೊರಗಪ್ಪ ಶೆಟ್ಟಿ (ಯಕ್ಷಗಾನ), ಬೀದರ್‌ನ ಕಲ್ಲಪ್ಪ ಮಿರ್ಜಾಪುರ (ರಿವಾಯತ್ ಪದಗಳು), ಚಿಕ್ಕಮಗಳೂರಿನ ಜಿ.ಪಿ. ಜಗದೀಶ್ (ವೀರಗಾಸೆ) ಹಾಗೂ ಚಿತ್ರದುರ್ಗದ ಹಲಗೆ ದುರ್ಗಮ್ಮ (ಹಲಗೆ ವಾದನ–ಲಾವಣಿ ಪದಗಳು) ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ.

ಈ ಪ್ರಶಸ್ತಿಗಳು ತಲಾ ₹ 5 ಲಕ್ಷ ನಗದನ್ನು ಒಳಗೊಂಡಿವೆ. ಕಲಾವಿದ ವಿ.ಟಿ. ಕಾಳೆ ಅವರ ಅಧ್ಯಕ್ಷತೆಯ ಸಮಿತಿ ಈ ಆಯ್ಕೆ ಮಾಡಿದೆ. 'ಜಕಣಾಚಾರಿ ಪ್ರಶಸ್ತಿ'ಯನ್ನು ಜ.1ರಂದು ನಡೆಯುವ ವಿಶ್ವಕರ್ಮ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯಲ್ಲಿ ಪ್ರದಾನ ಮಾಡಲಾಗುವುದು. ಉಳಿದ ಪ್ರಶಸ್ತಿಗಳನ್ನು ಜನವರಿ ಕೊನೆಯ ವಾರ ಅಥವಾ ಫೆಬ್ರವರಿ ತಿಂಗಳಲ್ಲಿ ಪ್ರದಾನ ಮಾಡಲಾಗುತ್ತದೆ ಎಂದು ಹೇಳಿದ್ದಾರೆ.

ನಿಧನ ವಾರ್ತೆ

ಎ. ಬೆಳ್ಳಿಯಪ್ಪ

ಗೋಣಿಕೊಪ್ಪಲು (ಕೊಡಗು ಜಿಲ್ಲೆ): ರಾಜ್ಯದ ಮೊದಲ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ (ಸಿಸಿಎಫ್) ಕಾಡ್ಯಮಾಡ ಎ. ಬೆಳ್ಳಿಯಪ್ಪ (87) ಮಂಗಳವಾರ ರಾತ್ರಿ ಇಲ್ಲಿಗೆ ಸಮೀಪದ ಅತ್ತೂರಿನ ತಮ್ಮ ನಿವಾಸದಲ್ಲಿ ನಿಧನರಾದರು.

ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರಿದ್ದಾರೆ. ಅಂತ್ಯಕ್ರಿಯೆ ಡಿ.28ರಂದು ಅತ್ತೂರಿನಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಎಸ್.ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಹೊಸದಾಗಿ ಸಿಸಿಎಫ್ ಹುದ್ದೆ ಸೃಜನೆಯಾಯಿತು. ಆಗ ಮೊದಲ ಸಿಸಿಎಫ್ ಆದವರು ಕಾಡ್ಯಮಾಡ ಎ. ಬೆಳ್ಳಿಯಪ್ಪ. ಅವರು ಆ ಹುದ್ದೆಯ ಜತೆಗೇ ರಾಜ್ಯದ ಮೀನುಗಾರಿಕೆ, ಪಶುಸಂಗೋಪನೆ ಹುದ್ದೆಗಳನ್ನೂ ನಿಭಾಯಿಸಿದ್ದರು.

ರಾಜ್ಯದಲ್ಲಿ 7,262 ಪರೀಕ್ಷೆ • 103 ಕೊರೊನಾ ಸೋಂಕು ಪ್ರಕರಣ ದೃಢ

ಕೋವಿಡ್: ಪರೀಕ್ಷೆ ಮತ್ತಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಮತ್ತಷ್ಟು ಹೆಚ್ಚಳ ಮಾಡಲಾಗಿದ್ದು, ಬುಧವಾರ 7,262 ಪರೀಕ್ಷೆಗಳನ್ನು ನಡೆಸಲಾಗಿದೆ. ಹೊಸದಾಗಿ 103 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ.

ಸೋಂಕು ದೃಢ ಪ್ರಮಾಣ ಶೇ 1.41ರಷ್ಟು ವರದಿಯಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 479ಕ್ಕೆ ಏರಿಕೆಯಾಗಿದೆ. ಸೋಂಕಿತರಲ್ಲಿ 422 ಮಂದಿ ಮನೆ ಆರೈಕೆಗೆ ಒಳಗಾಗಿದ್ದಾರೆ. 19 ಮಂದಿ ತೀವ್ರ ನಿಗಾ ಘಟಕ ಹಾಗೂ 38 ಮಂದಿ ಸಾಮಾನ್ಯ ಹಾಸಿಗೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸೋಂಕಿತರಲ್ಲಿ 87 ಮಂದಿ ಚೇತರಿಸಿಕೊಂಡಿದ್ದಾರೆ.

ಬೆಂಗಳೂರಿನಲ್ಲಿ 2,321 ಪರೀಕ್ಷೆಗಳನ್ನು ನಡೆಸಲಾಗಿದೆ. ಹೊಸದಾಗಿ 80 ಪ್ರಕರಣಗಳು ದೃಢಪಟ್ಟಿವೆ. ಇದರಿಂದಾಗಿ ಬೆಂಗಳೂರಿನಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 380ಕ್ಕೆ ಏರಿಕೆಯಾಗಿದೆ.

ಸೋಂಕಿತರಲ್ಲಿ ಮೈಸೂರಿನ 53 ವರ್ಷದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಜ್ವರ, ಕೆಮ್ಮು ಹಾಗೂ ಉಸಿರಾಟದ ಸಮಸ್ಯೆ ಕಾರಣ ಸರ್ಕಾರಿ ಆಸ್ಪತ್ರೆಗೆ ಡಿ.25ರಂದು ದಾಖಲಾಗಿದ್ದರು. ಅವರು ಅದೇ ದಿನ ಮೃತಪಟ್ಟಿದ್ದಾರೆ. ಅಧಿಕ ರಕ್ತದೊತ್ತಡ, ಹೃದಯ ಸಮಸ್ಯೆಯನ್ನೂ ಅವರು ಎದುರಿಸುತ್ತಿದ್ದರು.

ಹೊಸದಾಗಿ 529 ಪ್ರಕರಣಗಳು ಪತ್ತೆ

ನವದೆಹಲಿ (ಪಿಟಿಐ): ದೇಶದಲ್ಲಿ 529 ಕೋವಿಡ್ ಪ್ರಕರಣಗಳು ಬುಧವಾರ ದೃಢಪಟ್ಟಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 4,093ಕ್ಕೆ ತಲುಪಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಕರ್ನಾಟಕದಲ್ಲಿ ಇಬ್ಬರು ಮತ್ತು ಗುಜರಾತ್‌ನಲ್ಲಿ ಒಬ್ಬರು ಸೋಂಕಿನಿಂದ ಮೃತಪಟ್ಟಿದ್ದಾರೆ.

ಡಿ.5ರವರೆಗೂ ದೈನಂದಿನ ಪ್ರಕರಣಗಳ ಸಂಖ್ಯೆ ಎರಡಂಕಿಗೆ ಇಳಿಕೆಯಾಗಿತ್ತು. ಆದರೆ, ವೈರಾಣುವಿನ ಹೊಸ ರೂಪಾಂತರಿ ತಳಿ ಮತ್ತು ಚಳಿ ವಾತಾವರಣದಿಂದಾಗಿ ಸೋಂಕಿತರ ಸಂಖ್ಯೆ ಮತ್ತೆ ಏರುಗತಿಯಲ್ಲಿದೆ.

ಜೆಎನ್.1 ಸೋಂಕಿತರ ಸಂಖ್ಯೆ 109ಕ್ಕೆ ಏರಿಕೆ: ಮತ್ತೆ 40 ಮಂದಿಯಲ್ಲಿ ಕೊರೊನಾ ವೈರಾಣುವಿನ ಹೊಸ ಉಪ ತಳಿ ಜೆಎನ್.1 ಸೋಂಕು ಕಾಣಿಸಿಕೊಂಡಿದೆ. ಇದರೊಂದಿಗೆ ಜೆಎನ್.1 ಸೋಂಕಿತರ ಸಂಖ್ಯೆ 109ಕ್ಕೆ ಏರಿಕೆಯಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಈ ಪೈಕಿ ಕರ್ನಾಟಕದಲ್ಲಿ 34, ಗುಜರಾತ್‌ನಲ್ಲಿ 36, ಗೋವಾದಲ್ಲಿ 14 ಮತ್ತು ಮಹಾರಾಷ್ಟ್ರದಲ್ಲಿ 9 ಪ್ರಕರಣಗಳು ಪತ್ತೆಯಾಗಿವೆ. ಉಳಿದಂತೆ ಕೇರಳದಲ್ಲಿ ಆರು, ರಾಜಸ್ಥಾನ ಮತ್ತು ತಮಿಳುನಾಡಿನಲ್ಲಿ ತಲಾ ನಾಲ್ಕು ಹಾಗೂ ತೆಲಂಗಾಣದಲ್ಲಿ ಎರಡು ಪ್ರಕರಣಗಳು ದೃಢಪಟ್ಟಿವೆ. ರೋಗಿಗಳಲ್ಲಿ ಹೆಚ್ಚಿನವರು ಮನೆಯಲ್ಲಿ ಪ್ರತ್ಯೇಕವಾಗಿ ವಾಸವಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಿಳಿಸಿವೆ.

ಜ.1ರಿಂದ ಮಂತ್ರಾಕ್ಷತೆ ವಿತರಣೆ

ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ಪ್ರಯುಕ್ತ ಮನೆ ಮನೆಗೆ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಯೋಧ್ಯೆಯಲ್ಲಿ 2024ರ ಜ.24ರಂದು ನಡೆಯಲಿರುವ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ಪ್ರಯುಕ್ತ ವಿಶ್ವ ಹಿಂದೂ ಪರಿಷತ್ತಿನ (ವಿಎಚ್‌ಪಿ) ನೇತೃತ್ವದಲ್ಲಿ ಜ.1ರಿಂದ ಜ.15ರವರೆಗೆ ರಾಜ್ಯದಾದ್ಯಂತ ಮಂತ್ರಾಕ್ಷತೆ ವಿತರಣಾ ಅಭಿಯಾನ ನಡೆಯಲಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕ್ಷೇತ್ರೀಯ ಕಾರ್ಯವಾಹ ನಾ. ತಿಪ್ಪೇಸ್ವಾಮಿ, 'ಸುಮಾರು 500 ವರ್ಷಗಳ ಸುದೀರ್ಘ ಸಂಘರ್ಷದ ಫಲಶ್ರುತಿಯ ಪರಿಣಾಮ ಅಯೋಧ್ಯೆಯಲ್ಲಿ ಶ್ರೀರಾಮ ಜನ್ಮಭೂಮಿಯಲ್ಲಿ ಭವ್ಯವಾದ ಶ್ರೀರಾಮ ಮಂದಿರ ನಿರ್ಮಾಣಗೊಂಡಿದೆ. ಈಗ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆಯ ಸಂಭ್ರಮದಲ್ಲಿದ್ದೇವೆ. ಈ ಸಂದರ್ಭದಲ್ಲಿ ರಾಷ್ಟ್ರದ ಪ್ರತಿ ಮನೆಗೂ ಮಂತ್ರಾಕ್ಷತೆ ತಲುಪಿಸುವ ಯೋಜನೆಯನ್ನು ಅಯೋಧ್ಯೆಯ 'ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್' ಹಮ್ಮಿಕೊಂಡಿದೆ. ಈ ಕಾರ್ಯವನ್ನು ವಿಶ್ವ ಹಿಂದೂ ಪರಿಷತ್ ಪರಿವಾರದ ಸಂಘಟನೆಗಳು ಮಾಡಲಿವೆ. ಮಂತ್ರಾಕ್ಷತೆಯ ಜತೆಗೆ ರಾಮ ಮಂದಿರದ ಭಾವಚಿತ್ರ ಹಾಗೂ ನಿವೇದನಾ ಪತ್ರವನ್ನು ಪ್ರತಿ ಮನೆಗೂ ತಲುಪಿಸಲಾಗುತ್ತದೆ' ಎಂದು ಹೇಳಿದರು.

'15 ದಿನಗಳ ಅಭಿಯಾನದಲ್ಲಿ ಜ.7ರಂದು ಮಹಾ ಸಂಪರ್ಕ ಅಭಿಯಾನ ನಡೆಯಲಿದೆ. ಆ ದಿನದಂದು ಎಲ್ಲಾ ಕಾರ್ಯಕರ್ತರು ಅಭಿಯಾನದಲ್ಲಿ ಪಾಲ್ಗೊಳ್ಳಲ್ಲಿದ್ದಾರೆ. ಈಗಾಗಲೇ ಅಯೋಧ್ಯೆಯಿಂದ ಮಂತ್ರಾಕ್ಷತೆ ಬಂದಿದ್ದು, ಅದನ್ನು ಎಲ್ಲ ತಾಲ್ಲೂಕುಗಳಿಗೂ ಹಂಚಿಕೆ ಮಾಡಲಾಗಿದೆ. ಅಭಿಯಾನದ ದಿನಗಳಂದು ಕಾರ್ಯಕರ್ತರು ಮನೆ ಮನೆಗೆ ಇದನ್ನು ತಲುಪಿಸುತ್ತಾರೆ. ಮಂದಿರ ನಿರ್ಮಾಣಕ್ಕೆ ನಡೆದ ನಿಧಿ ಸಮರ್ಪಣಾ ಅಭಿಯಾನದಲ್ಲಿ ರಾಜ್ಯದ 29 ಸಾವಿರ ಗ್ರಾಮಗಳನ್ನು ತಲುಪಿದ್ದೆವು. ಈ ಬಾರಿಯೂ ಅಷ್ಟು ಗ್ರಾಮಗಳನ್ನು ತಲುಪುವ ವಿಶ್ವಾಸವಿದೆ' ಎಂದರು.

'ಜ.24ರಂದು ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ಸಮಯದಲ್ಲಿ ನಗರ, ಗ್ರಾಮಗಳ ಮಂದಿರಗಳಲ್ಲಿ ವಿಶೇಷ ಸತ್ಸಂಗ, ಭಜನೆಗಳು ನಡೆಯಲಿವೆ. ಅಲ್ಲಿಯೇ ಎಲ್ಇಡಿ ಪರದೆಯಲ್ಲಿ ಅಯೋಧ್ಯೆಯಲ್ಲಿ ನಡೆಯುವ ಕಾರ್ಯಕ್ರಮದ ನೇರಪ್ರಸಾರ ವೀಕ್ಷಿಸಬಹುದಾಗಿದೆ. ಅಂದು ಸಂಜೆ ಸೂರ್ಯಾಸ್ತದ ಬಳಿಕ ಪ್ರತಿ ಮನೆಯಲ್ಲಿಯೂ ಕನಿಷ್ಠ ಐದು ದೀಪಗಳನ್ನು ಬೆಳಗಬೇಕು. ಈ ಮೂಲಕ ದೀಪೋತ್ಸವದಲ್ಲಿ ಪಾಲ್ಗೊಳ್ಳಬೇಕು' ಎಂದು ಮನವಿ ಮಾಡಿಕೊಂಡರು.

ಚಕ್ಕೆರೆ ಶಿವಶಂಕರ್ ಅಭಿನಂದನಾ ಸಮಾರಂಭದಲ್ಲಿ ಹಿ.ಚಿ. ಬೋರಲಿಂಗಯ್ಯ

‘ಜನಪದರ ಚರಿತ್ರೆ ರಚನೆಯಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚರಿತ್ರೆಯಲ್ಲಿ ಜನಸಾಮಾನ್ಯರು, ಜನಪದರು ಇಲ್ಲ. ಜನಪದರ ಚರಿತ್ರೆಯನ್ನು ರಚಿಸಬೇಕಿದೆ ಎಂದು ಜನಪದ ವಿದ್ವಾಂಸ ಹಿ.ಚಿ. ಬೋರಲಿಂಗಯ್ಯ ಹೇಳಿದರು.

ನಗರದಲ್ಲಿ ಬುಧವಾರ ನಡೆದ ಜನಪದ ತಜ್ಞ ಚಕ್ಕೆರೆ ಶಿವಶಂಕರ್ ಅಭಿನಂದನಾ ಕಾರ್ಯಕ್ರಮದಲ್ಲಿ ‘ಜಾನಪದ ಚಂದ್ರಮ’ ಅಭಿನಂದನಾ ಗ್ರಂಥವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಎಲ್ಲ ಸಾಹಿತ್ಯ, ಕಲೆಗಳಿಗೆ ಜಾನಪದವೇ ತಾಯಿಬೇರು. ಆದರೆ, ಜನಪದ ಕಲಾವಿದರನ್ನೇ ಇತಿಹಾಸ ಮರೆತಿದೆ. ಜಾನಪದ ಪರಿಷತ್ ಕಾರ್ಯದರ್ಶಿಯಾಗಿ 18 ವರ್ಷ ಕೆಲಸ ಮಾಡಿರುವ ಚಕ್ಕೆರೆ ಶಿವಶಂಕರ್ ಅವರು ಜಾನಪದ ಕಲಾವಿದರನ್ನು ಗುರುತಿಸುವ ಕೆಲಸ ಮಾಡಿದರು. ಅವರಿಗೆ ಅವಕಾಶ ನೀಡಿ, ಸಂಭಾವನೆ ನೀಡಿ, ಪ್ರಶಸ್ತಿಗಳಿಗೆ ಆಯ್ಕೆ ಮಾಡಿ ಪ್ರೋತ್ಸಾಹ ನೀಡಿದರು. ಈ ಕ್ಷೇತ್ರದಲ್ಲಿ ಇನ್ನಷ್ಟು ಕೆಲಸಗಳಾಗಬೇಕು ಎಂದು ಆಶಿಸಿದರು.

ಸಾಹಿತಿ ಹಂಪ ನಾಗರಾಜಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ‘ಕನ್ನಡದಲ್ಲಿ 5ನೇ ಶತಮಾನದಲ್ಲಿಯೇ ಜಾನಪದ ಸಾಹಿತ್ಯದ ಉಲ್ಲೇಖವಿದೆ. ಆದರೆ, ವಿದ್ವಾಂಸರ ಬಲವಿಲ್ಲದೇ ಸೊರಗಿ ಹೋಯಿತು’ ಎಂದು ವಿಶ್ಲೇಷಿಸಿದರು.

ಚಕ್ಕೆರೆ ಶಿವಶಂಕರ್ ಮಾತನಾಡಿ, ‘ಎನ್‌ಜಿಎಫ್‌ನಲ್ಲಿ ನೌಕರನಾಗಿದ್ದ ನನ್ನನ್ನು ಗುರುತಿಸಿ ನಾಗೇಗೌಡರು ಕರೆತಂದಿದ್ದರಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಲು ಸಾಧ್ಯವಾಯಿತು. ಸರ್ಕಾರವು 400 ಕಲಾವಿದರಿಗೆ ಮಾಸಾಶನ ನೀಡಬೇಕು ಎಂದು ನಿರ್ಧರಿಸಿದಾಗ ಹೋರಾಟ ಮಾಡಿ 1,500 ಕಲಾವಿದರಿಗೆ ಮಾಸಾಶನ ಸಿಗುವಂತೆ ಮಾಡಿರುವುದು ನನ್ನ ಉಳಿದ ಎಲ್ಲ ಬರವಣಿಗೆ, ಕೆಲಸಗಳಿಗಿಂತ ಹೆಚ್ಚು ತೃಪ್ತಿ ನೀಡಿದೆ’ ಎಂದು ಹೇಳಿದರು.



ಜನಪದ ತಜ್ಞ ಚಕ್ಕೆರೆ ಶಿವಶಂಕರ್ ಅವರನ್ನು ಅಭಿನಂದಿಸಿದರು. ಆರ್‌.ಕೆ. ನಲ್ಲೂರು ಪ್ರಸಾದ್, ಮಂಜುನಾಥ್ ಪಾಳ್ಯ, ಕವಿ ಎಚ್‌.ಕೆ. ಮಳಲಿಗೌಡ, ಜನಪದ ವಿದ್ವಾಂಸ ಹಿ.ಚಿ. ಬೋರಲಿಂಗಯ್ಯ, ಸಾಹಿತಿ ಹಂಪ ನಾಗರಾಜಯ್ಯ, ವಿಮರ್ಶಕ ಬೈರಮಂಗಲ ರಾಮೇಗೌಡ, ಎಚ್‌. ದಂಡಪ್ಪ, ಸೂರನಾಯಕನಹಳ್ಳಿ ನಂದೀಶ್, ಎಂ.ಪ್ರಕಾಶಮೂರ್ತಿ ಪಾಲ್ಗೊಂಡಿದ್ದರು

—ಪ್ರಜಾವಾಣಿ ಚಿತ್ರ

ಬೌರಿಂಗ್: ನ್ಯಾಯಮೂರ್ತಿ ದಿಢೀರ್ ಭೇಟಿ

ಒಪಿಡಿ ನೋಂದಣಿ ಪ್ರಕ್ರಿಯೆ ಸೇರಿ ವಿವಿಧ ವ್ಯವಸ್ಥೆ ಸುಧಾರಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬೌರಿಂಗ್ ಆಸ್ಪತ್ರೆಗೆ ಬುಧವಾರ ದಿಢೀರ್ ಭೇಟಿ ನೀಡಿದ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ನ್ಯಾ.ಪಿ.ಎಸ್. ದಿನೇಶ್ ಕುಮಾರ್, ಹೊರರೋಗಿ ವಿಭಾಗದಲ್ಲಿ (ಒಪಿಡಿ) ನೋಂದಣಿ ಪ್ರಕ್ರಿಯೆ ಸೇರಿ ವಿವಿಧ ವ್ಯವಸ್ಥೆಯನ್ನು ಸುಧಾರಿಸುವಂತೆ ಸೂಚಿಸಿದರು.

ಒಳರೋಗಿ ವಿಭಾಗ ಹಾಗೂ ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಅವರು, ರೋಗಿಗಳು ಹಾಗೂ ಅವರ ಸಂಬಂಧಿಗಳಿಂದ ಕುಂದು ಕೊರತೆಗಳನ್ನು ಆಲಿಸಿದರು. ಈ ವೇಳೆ ಕೆಲವರು ಆಸ್ಪತ್ರೆಯ ವ್ಯವಸ್ಥೆ ಹಾಗೂ ವೈದ್ಯಕೀಯ ಸಿಬ್ಬಂದಿಯ ವರ್ತನೆ ಬಗ್ಗೆ ದೂರಿದರು. ಈ ಬಗ್ಗೆ ಕ್ರಮವಹಿಸಿ, ವ್ಯವಸ್ಥೆ ಸುಧಾರಿಸುವಂತೆ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ. ಕೆಂಪರಾಜು ಅವರಿಗೆ ನ್ಯಾ.ಪಿ.ಎಸ್. ದಿನೇಶ್ ಕುಮಾರ್ ಸೂಚಿಸಿದರು.

ಹೊರರೋಗಿ ವಿಭಾಗ ಹಾಗೂ ಔಷಧ ವಿಭಾಗದಲ್ಲಿ ರೋಗಿಗಳು ಸರದಿಯಲ್ಲಿ ಕಾಯುತ್ತಿರುವುದನ್ನು ಗಮನಿಸಿದ ಅವರು, ‘ರೋಗಿಗಳನ್ನು ಏಕೆ ಈ ರೀತಿ ಕಾಯಿಸುತ್ತೀರಿ ? ಕೌಂಟರ್‌ಗಳ ಸಂಖ್ಯೆಯನ್ನು ಏಕೆ ಹೆಚ್ಚಿಸಿಲ್ಲ’ ಎಂದು ವೈದ್ಯರನ್ನು ಪ್ರಶ್ನಿಸಿದರು.

ಮಧ್ಯಾಹ್ನ 12 ಗಂಟೆ ವೇಳೆಗೆ ಆಸ್ಪತ್ರೆಗೆ ಬಂದ ಅವರು, ತುರ್ತು ಚಿಕಿತ್ಸಾ ಘಟಕ, ಕೋವಿಡ್ ಚಿಕಿತ್ಸೆಗೆ ಮಾಡಲಾದ ವ್ಯವಸ್ಥೆಯ ಬಗ್ಗೆಯೂ ಪರಿಶೀಲಿಸಿದರು. ಆಸ್ಪತ್ರೆ ನಿರ್ದೇಶಕ ಡಾ. ಮನೋಜ್ ಕುಮಾರ್ ಅವರಿಂದ ಚಿಕಿತ್ಸಾ ವ್ಯವಸ್ಥೆಗಳ ಬಗ್ಗೆ ವಿವಿಧ ಮಾಹಿತಿ ಪಡೆದುಕೊಂಡರು.

ಬೌರಿಂಗ್ ಆಸ್ಪತ್ರೆ ಪರಿಶೀಲನೆ ವೇಳೆ ನ್ಯಾ.ಪಿ.ಎಸ್. ದಿನೇಶ್ ಕುಮಾರ್ ಅವರು ರೋಗಿಗಳು ಹಾಗೂ ಅವರ ಸಂಬಂಧಿಗಳಿಂದ ಮಾಹಿತಿ ಪಡೆದರು

– ಪ್ರಜಾವಾಣಿ ಚಿತ್ರ

‘ಭಾರತೀಯರ ಜೀವನ ಪದ್ಧತಿ ಒಂದೇ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾದೇಶಿಕವಾಗಿ ಭಿನ್ನ ಭಿನ್ನವಾಗಿ ಕಂಡರೂ ಭಾರತೀಯರ ಜೀವನ ಪದ್ಧತಿಯ ಮೂಲ ಒಂದೇ ಎಂದು ಕಾದಂಬರಿಕಾರ ಎಸ್.ಎಲ್. ಭೈರಪ್ಪ ಹೇಳಿದರು.

ಬಬ್ಬೂರುಕಮ್ಮೆ ಸೇವಾ ಸಮಿತಿ ವತಿಯಿಂದ ಇತ್ತೀಚೆಗೆ ‘ಆಚಾರ್ಯ ಬಿಎಂಶ್ರೀ’ ಗೌರವ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

‘ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಸುತ್ತಾಡಿದ್ದೇನೆ. ಮೇಲ್ನೋಟಕ್ಕೆ ಸಂಸ್ಕೃತಿಯಲ್ಲಿ ವ್ಯತ್ಯಾಸ ಕಾಣಬಹುದು. ಆಳದಲ್ಲಿ ಎಲ್ಲರ ನಂಬಿಕೆ, ಸಂಸ್ಕೃತಿ ಒಂದೇ ಆಗಿರುವುದನ್ನು ಕಂಡಿದ್ದೇನೆ’ ಎಂದು ವಿವರಿಸಿದರು.

‘ಬೇರೆ ಬೇರೆ ಜಾತಿ ಸಮುದಾಯಗಳ ಸಂಸ್ಕೃತಿ, ಸಂಪ್ರದಾಯಗಳನ್ನು ನೋಡುತ್ತಾ ನಾನು ಬೆಳೆದವನು. ನಾನು ಕಾದಂಬರಿ ಬರೆಯಬೇಕು ಎಂದು ಈ ರೀತಿ ಮಾಡಿದ್ದಲ್ಲ. ಬಾಲ್ಯದಲ್ಲೇ ಇದ್ದ ಕುತೂಹಲವು ಅಧ್ಯಯನಕ್ಕೆ ಕಾರಣವಾಯಿತು. ಇದೇ ಕಾದಂಬರಿ ಬರೆಯಲು ಸಹಾಯವಾದವು’ ಎಂದರು.

ಬಬ್ಬೂರುಕಮ್ಮೆ ಸೇವಾ ಸಮಿತಿ ನೀಡುವ ‘ಆಚಾರ್ಯ ಬಿಎಂಶ್ರೀ’ ಗೌರವ ಪ್ರಶಸ್ತಿಯನ್ನು ಕಾದಂಬರಿಕಾರ ಎಸ್‌.ಎಲ್‌. ಭೈರಪ್ಪ ಅವರಿಗೆ ಪ್ರದಾನ ಮಾಡಲಾಯಿತು. ಸಮಿತಿ ಅಧ್ಯಕ್ಷ ಎ.ವಿ. ಪ್ರಸನ್ನ, ಕಾರ್ಯದರ್ಶಿ ಎನ್‌. ಸತ್ಯಪ್ರಕಾಶ್, ಸುಪ್ರೀಂ ಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ಬಿ.ಎನ್‌. ಶ್ರೀಕೃಷ್ಣ ಇದ್ದರು —ಪ್ರಜಾವಾಣಿ ಚಿತ್ರ

‘ನಾನು ಹಾಸನ ಸೇರಿದಂತೆ ಬೇರೆ ಬೇರೆ ಊರುಗಳ ಜಾತ್ರೆಗಳಿಗೆ ತೆರಳುತ್ತಿದ್ದೆ. ಅಲ್ಲಿ ಜನಸಾಮಾನ್ಯರೊಂದಿಗೆ ಮಾತನಾಡುತ್ತಿದ್ದೆ. ಜನರ ಆಡುನುಡಿ ಕಿವಿಗೆ ಬೀಳುತ್ತಿದ್ದುದರಿಂದ ನನ್ನ ಕನ್ನಡ ಭಾಷೆ ಬಿಗಿಯಾಯಿತು’ ಎಂದು ತಿಳಿಸಿದರು.

‘ನಾನು ಕನ್ನಡದಲ್ಲಿ ಬರೆಯುವ ಭಾರತದ ಲೇಖಕ. ಕನ್ನಡ ನನ್ನ ಭಾಷೆ. ಭಾರತೀಯತೆ ನನ್ನ ವಿಚಾರ’ ಎಂದರು.

ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ಪ್ರಶಸ್ತಿ ಪ್ರದಾನ ಮಾಡಿದರು. ಬಬ್ಬೂರುಕಮ್ಮೆ ಸೇವಾ ಸಮಿತಿ ಅಧ್ಯಕ್ಷ ಎ.ವಿ. ಪ್ರಸನ್ನ ಅಧ್ಯಕ್ಷತೆ ವಹಿಸಿದ್ದರು.

ಪೊಲೀಸ್ ಇಲಾಖೆಗೆ ಐದು ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆ, ಗಣಕೀಕರಣ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗೆ ಒಟ್ಟು ಐದು ಪ್ರಶಸ್ತಿಗಳು ಒಲಿದಿವೆ.

ದೆಹಲಿಯಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ರಾಷ್ಟ್ರೀಯ ಅಪರಾಧ ದಾಖಲಾತಿ ವಿಭಾಗದ ವಾರ್ಷಿಕ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಪೊಲೀಸ್ ಇಲಾಖೆ, ಬಂದೀಖಾನೆ ಇಲಾಖೆ, ನ್ಯಾಯ ವಿಜ್ಞಾನ ಪ್ರಯೋಗಾಲಯಗಳೊಂದಿಗೆ ಅಪರಾಧ ಮತ್ತು ಅಪರಾಧಿಗಳ ಮಾಹಿತಿಯನ್ನು ಡಿಜಿಟಲ್ ರೂಪದಲ್ಲಿ ವಿನಿಮಯ ಮಾಡಿಕೊಳ್ಳಲು ಹಾಗೂ ತ್ವರಿತವಾಗಿ ಪ್ರಕರಣಗಳ ವಿಲೇವಾರಿಗೆ ಸಹಕಾರಿಯಾಗುವ ವ್ಯವಸ್ಥೆಯನ್ನು ಸೃಜಿಸುವಲ್ಲಿ ರಾಜ್ಯ ಪೊಲೀಸ್ ಇಲಾಖೆ ನೀಡಿದ ಗಣನೀಯ ಸೇವೆಗೆ ರಾಷ್ಟ್ರಮಟ್ಟದಲ್ಲಿ ಮೂರನೇ ಬಹುಮಾನ ಬಂದಿದೆ.

ಸೈಬರ್ ಭದ್ರತೆ ಕುರಿತು ವಿಚಾರ ಮಂಡಿಸಿದ ಪೊಲೀಸ್ ಗಣಕ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪ್ರಣವ ಮೊಹಂತಿ ಅವರಿಗೆ ಪ್ರಥಮ ಬಹುಮಾನ ಬಂದಿದೆ. ರಾಜ್ಯ ಅಪರಾಧ ದಾಖಲಾತಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಿಎಸ್ಐ ಚೇತನ್‌ಕುಮಾರ್, ಎಎಸ್‌ಐಗಳಾದ ದಿನೇಶ್ ಬಾಬು, ಮುನಿರಾಜ್ ಅವರಿಗೆ ಸಿಸಿಟಿಎಸ್/ಐಸಿಜೆಎಸ್ ಯೋಜನೆ ಜಾರಿಗೊಳಿಸುವಲ್ಲಿ ನೀಡಿದ ಸೇವೆಗೆ ಪ್ರತ್ಯೇಕ ಪ್ರಶಸ್ತಿಗಳು ಲಭಿಸಿವೆ ಎಂದು ಪ್ರಕಟಣೆ ತಿಳಿಸಿದೆ.

ಪ್ರತಿಭಟನೆ

ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುವ ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ‘ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್’ (ಎಐಡಿಎಸ್‌ಒ) ಬೆಂಗಳೂರು ಜಿಲ್ಲಾ ಸಮಿತಿ ಸದಸ್ಯರು ಬುಧವಾರ ಪ್ರತಿಭಟನೆ ನಡೆಸಿದರು

-ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ವಾರ್ಷಿಕ ಕ್ರೀಡಾಕೂಟ: ಉದ್ಘಾಟನೆ: ಎಸ್. ಪ್ರಕಾಶ್, ಅತಿಥಿ: ರಾಮಕೃಷ್ಣೇಗೌಡ, ಅಧ್ಯಕ್ಷತೆ: ಗುರುರಾಜ್ ದಾವಣಗೆರೆ, ಆಯೋಜನೆ ಮತ್ತು ಸ್ಥಳ: ವಿಡಿಯಾ ಪೂರ್ಣಪ್ರಜ್ಞ ಪದವಿಪೂರ್ವ ಕಾಲೇಜು, ಮಂಜುನಾಥನಗರ, ಬಾಗಲಗುಂಟೆ, ಬೆಳಿಗ್ಗೆ 9.30


ಚಂದ್ರಶೇಖರ ಕಂಬಾರ

ಕುವೆಂಪು ದಿನಾಚರಣೆ ಅಂಗವಾಗಿ ‘ವಿಶ್ವಮಾನವೋತ್ಸವ-ಕ್ರಾಂತಿಕವಿಗೆ 120’: ಉದ್ಘಾಟನೆ: ಚಂದ್ರಶೇಖರ ಕಂಬಾರ, ಎಚ್. ಸಿ. ಮಹದೇವಪ್ಪ, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಅತಿಥಿಗಳು: ಎಲ್.ಎನ್. ಮುಕುಂದರಾಜ್, ಪ್ರಿಯಕೃಷ್ಣ, ಫಾತಿಮಾ ರಲಿಯಾ, ಗಂಗಾಧರಮೂರ್ತಿ, ನಟರಾಜ್ ಗೌಡ, ಪ್ರದೀಪ್, ಆಯೋಜನೆ: ಕನ್ನಡ ಜಾಣಜಾಣೆಯರ ವೇದಿಕೆ, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ, ಬೆಳಿಗ್ಗೆ 10

‘ಇ.ಎಸ್. ವೆಂಕಟರಾಮಯ್ಯ ಗ್ಲೋಬಲ್ ಲೀಗಲ್ ಸ್ಕಿಲ್ಸ್ ಅಕಾಡೆಮಿ’ಯ ಉದ್ಘಾಟನೆ: ಎಂ.ಎನ್. ವೆಂಕಟಾಚಲಯ್ಯ, ಬಿ.ವಿ. ನಾಗರತ್ನ, ಆಯೋಜನೆ: ರಾಮಯ್ಯ ಕಾಲೇಜ್ ಆಫ್ ಲಾ, ಸ್ಥಳ: ಅಪೆಕ್ಸ್ ಸಭಾಂಗಣ, ಗಂಗೋತ್ರಿ ಆವರಣ, ಎಂ.ಎಸ್. ರಾಮಯ್ಯನಗರ, ಹೊಸ ಬಿಇಎಲ್ ರಸ್ತೆ, ಬೆಳಿಗ್ಗೆ 11

ಸಿದ್ಧು ಪಿನಾಕಿ ಅವರ ‘ಪಿನಾಕಿ ದಿ ಫ್ಯಾಂಟಮ್’ ಪುಸ್ತಕ ಬಿಡುಗಡೆ: ಈಶ್ವರ್ ಖಂಡ್ರೆ, ಕೃಪಾಕರ, ಸೇನಾನಿ, ಪುಸ್ತಕ ಪರಿಚಯ: ಕುಮಾರ ರೈತ, ಸ್ಥಳ: ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಕರ್ನಾಟಕ ರಾಜ್ಯೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮ, ಪ್ರತಿಭಾ ಪುರಸ್ಕಾರ: ಉದ್ಘಾಟನೆ: ಪಂಕಜ್ ಕುಮಾರ್ ಪಾಂಡೆ, ಅಧ್ಯಕ್ಷತೆ: ಆರ್. ಜಯಕುಮಾರ್, ಸನ್ಮಾನ: ಪುಸ್ತಕಮನೆ ಹರಿಹರ ಪ್ರಿಯ, ಅತಿಥಿಗಳು: ವಿಜಯ್ ಬಿ.ಪಿ., ಬಿ. ಕಪ್ಪೂರಲಿಂಗಯ್ಯ, ಕೃಷ್ಣಪ್ಪ ವಿ., ಆಯೋಜನೆ ಮತ್ತು ಸ್ಥಳ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಕನ್ನಡ ಸಂಘ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಮಧ್ಯಾಹ್ನ 2

‘ಕ್ವಾಂಟಮ್ ಎಂಟಾಂಗಲ್‌ಮೆಂಟ್ ಇನ್ ನೇಚರ್–ಸೂಪರ್ ಕಂಡಕ್ಟರ್ಸ್ ಆ್ಯಂಡ್ ಬ್ಲ್ಯಾಕ್ ಹೋಲ್ಸ್’ ಕುರಿತು ಉಪನ್ಯಾಸ: ಸುಬಿರ್ ಸಚ್‌ದೇವ್, ಆಯೋಜನೆ: ಇಂಡಿಯನ್ ಅಕಾಡೆಮಿ ಆಫ್ ಸೈನ್ಸ್, ಬೆಂಗಳೂರು ಸೈನ್ಸ್ ಫೋರಂ, ದಿ ಅಕಾಡೆಮಿ ಟ್ರಸ್ಟ್, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಮಧ್ಯಾಹ್ನ **3.30ರಿಂದ**

‘ಸವಿಗಾನ ರತ್ನ’ ವಾರ್ಷಿಕ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಅತಿಥಿಗಳು: ಅಶೋಕ ಎನ್. ಚಲವಾದಿ, ಆನೂರು ಅನಂತಕೃಷ್ಣ ಶರ್ಮ, ಪ್ರಶಸ್ತಿ ಪುರಸ್ಕೃತರು: ಬಿ.ಎಸ್. ವೇಣುಗೋಪಾಲರಾಜು, ಆಯೋಜನೆ: ಸವಿಗಾನಲಹರಿ ಸುಗಮಸಂಗೀತ ಶಾಲೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4.30

ದ್ವಂದ್ವ ವೀಣೆ: ಅಯ್ಯರ್ ಸಹೋದರರು, ಮೃದಂಗ: ಬೆಂಗಳೂರು ವಿ. ಪ್ರವೀಣ್, ಘಟ: ಶ್ರೀಶೈಲಂ, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 6

‘ಕೃಷ್ಣ ಕಾರುಣ್ಯ’ ನೃತ್ಯ ಪ್ರದರ್ಶನ: ಪ್ರಸ್ತುತಿ: ಮಿಥುನ್ ಶ್ಯಾಮ್, ರೂಪೇಶ್ ಕೆ.ಸಿ., ಆನಂದ ಸಚ್ಚಿದಾನಂದನ್, ಗೌತಮ ಮರಾಠೆ, ನಿಧಗ ಕರುನಾಡ್, ಜೆ. ಮನು, ಆಯೋಜನೆ ಮತ್ತು ಸ್ಥಳ: ದಿ ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಬಸವನಗುಡಿ, ಸಂಜೆ 6.30

ಹರಿದಾಸ ವೈಭವ: ಗಾಯನ: ಅಪರ್ಣ ಆನಂದ್, ಪಿಟೀಲು: ಸೀತಾರಾಮ, ಮೃದಂಗ: ಅನಿರುದ್ಧ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪಚಮಾನಪುರ, ಸಂಜೆ 7

ಹರಿದಾಸ ಮಂಜರಿ: ಗಾಯನ: ವಾರುಣಿ ಪಿ. ರಾವ್, ಕೀ–ಬೋರ್ಡ್: ರಮೇಶ್ ಟಿ.ಎಸ್., ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, ಸಂಜೆ 7.30

ರಾಷ್ಟ್ರೀಯ ಹೆದ್ದಾರಿಯಲ್ಲಿ ಸರಣಿ ಅಪಘಾತ: 30 ಮಂದಿಗೆ ಗಾಯ

ಲಾರಿ–ಬಸ್‌ಗಳ ನಡುವೆ ಅಪಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು- ಬೆಂಗಳೂರು ರಾಷ್ಟ್ರೀಯ ಹೆದ್ದಾರಿ-4ರಲ್ಲಿ ಬುಧವಾರ ಮುಂಜಾನೆ ಲಾರಿ ಹಾಗೂ ಖಾಸಗಿ ಬಸ್‌ಗಳ ನಡುವೆ ಸಂಭವಿಸಿದ ಅಪಘಾತದಲ್ಲಿ 30 ಪ್ರಯಾಣಿಕರು ಗಾಯಗೊಂಡಿದ್ದರು. ಎಲ್ಲ ಪ್ರಯಾಣಿಕರೂ ಅಪಾಯದಿಂದ ಪಾರಾಗಿದ್ದಾರೆ.

ನೆಲಮಂಗಲ ತಾಲ್ಲೂಕಿನ ತೊಣಚಿನಗುಪ್ಪೆ ಗ್ರಾಮದ ರಸ್ತೆಯ ಬದಿಯಲ್ಲಿ ಲಾರಿ ನಿಂತಿತ್ತು. ಅದೇ ವೇಳೆಯಲ್ಲಿ ದಟ್ಟವಾದ ಮಂಜು ಮುಸುಕಿದ ವಾತಾವರಣವಿತ್ತು. ವೇಗವಾಗಿ ಬಂದ ಖಾಸಗಿ ಬಸ್‌ವೊಂದು ನಿಂತಿದ್ದ ಲಾರಿಗೆ ಡಿಕ್ಕಿಯಾಗಿದೆ. ಹಿಂದಿನಿಂದ ಬಂದ ಮತ್ತೆ ಎರಡು ಬಸ್‌ಗಳು, ಲಾರಿ ಹಾಗೂ ಬಸ್‌ಗೆ ಡಿಕ್ಕಿಯಾಗಿದ್ದು, ಹಲವರು ಗಾಯಗೊಂಡಿದ್ದರು.

ಲಾರಿ ಹಾಗೂ ದುರ್ಗಾಂಬ, ಶಿವಗಂಗ, ಧ್ಯಾನ್ ಹೆಸರಿನ ಖಾಸಗಿ ಬಸ್‌ಗಳ ನಡುವೆ ಸರಣಿ ಅಪಘಾತವಾಗಿದೆ. ಮೂರು ಖಾಸಗಿ ಬಸ್‌ಗಳೂ ತುಮಕೂರು ಕಡೆಯಿಂದ ಬೆಂಗಳೂರಿಗೆ ಬರುತ್ತಿದ್ದವು. ಅಪಘಾತದ ಮಾಹಿತಿ ತಿಳಿದ ಕೂಡಲೇ ಸ್ಥಳಕ್ಕೆ ತೆರಳಿ ಏಳು ಮಂದಿಯನ್ನು ಆಂಬುಲೆನ್ಸ್‌ನಲ್ಲಿ ನೆಲಮಂಗಲ ಆಸ್ಪತ್ರೆಗೆ ಕಳುಹಿಸಿ, ಚಿಕಿತ್ಸೆ ಕೊಡಿಸಲಾಯಿತು ಎಂದು ನೆಲಮಂಗಲ ಸಂಚಾರ ಪೊಲೀಸರು ಹೇಳಿದರು.

ಬಸ್‌ಗಳು ಒಂದಕ್ಕೊಂದು ಡಿಕ್ಕಿಯಾಗಿ ರಸ್ತೆಗೆ ಅಡ್ಡಲಾಗಿ ನಿಂತಿದ್ದವು. ಇದರಿಂದ ಹೆದ್ದಾರಿಯಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. ರಸ್ತೆಯ ಉದ್ದಕ್ಕೂ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಬಳಿಕ ಸ್ಥಳಕ್ಕೆ ಕ್ರೇನ್ ತರಿಸಿ ಬಸ್‌ಗಳನ್ನು ತೆರವು ಮಾಡಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

‘ಲಾರಿಗೆ ಬಸ್ ಡಿಕ್ಕಿಯಾದ ರಭಸಕ್ಕೆ ದೊಡ್ಡ ಶಬ್ದಬಂತು. ನಿದ್ರೆಯ ಮಂಪರಿನಲ್ಲಿದ್ದ ಪ್ರಯಾಣಿಕರು ಕ್ಷಣಕಾಲ ಆತಂಕ ಗೊಂಡರು. ಸ್ಥಳೀಯರು ಎಲ್ಲ ಪ್ರಯಾಣಿಕರನ್ನು ಹೊರಗೆ ಕರೆತಂದರು’ ಎಂದು ಪ್ರಯಾಣಿಕರೊಬ್ಬರು ಹೇಳಿದರು.

ನೆಲಮಂಗಲ ತಾಲ್ಲೂಕಿನ ತೊಣಚಿನಗುಪ್ಪೆಯಲ್ಲಿ ನಡೆದ ಅಪಘಾತದಲ್ಲಿ ನಜ್ಜುಗುಜ್ಜಾದ ಬಸ್ ಅನ್ನು ಕ್ರೇನ್ ಸಹಾಯದಿಂದ ತೆರವು ಮಾಡಲಾಯಿತು

ಎಂ.ಜಿ ರಸ್ತೆಯಲ್ಲೂ ಅಪಘಾತ

ಮಹಾತ್ಮ ಗಾಂಧಿ ರಸ್ತೆಯಲ್ಲೂ ಮಂಗಳವಾರ ಮಧ್ಯರಾತ್ರಿ ಸರಣಿ ಅಪಘಾತವಾಗಿದೆ. ಘಟನೆಯಲ್ಲಿ ಮೂರು ಕಾರುಗಳಿಗೆ ಹಾನಿಯಾಗಿದೆ.

ವೇಗವಾಗಿ ಚಲಿಸುತ್ತಿದ್ದ ಮುಂಭಾಗದ ಕಾರಿನ ಚಾಲಕ ದಿಢೀರ್ ಎಂದು ಬ್ರೇಕ್ ಹಾಕಿದ ಪರಿಣಾಮ ಸರಣಿ ಅಪಘಾತವಾಗಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಕಾರು ಡಿಕ್ಕಿ ಹೊಡೆದು ಮಗು ಸಾವು

ಬ್ಯಾಟರಾಯನಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ರಸ್ತೆ ದಾಟುವಾಗ ಅಪಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟರಾಯನಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ರಸ್ತೆ ದಾಟುತ್ತಿದ್ದ ವೇಳೆ ಕಾರು ಡಿಕ್ಕಿ ಹೊಡೆದ ಪರಿಣಾಮ ಎರಡು ವರ್ಷದ ಮಗು ಸ್ಥಳದಲ್ಲೇ ಮೃತಪಟ್ಟಿದೆ.

ನಾಗರಬಾವಿಯ ಟೀಚರ್ಸ್ ಲೇಔಟ್ ನಿವಾಸಿ ಭವಾನಿಸಿಂಗ್ ಪುತ್ರಿ ಝಾನ್ಸಿ (2) ಮೃತ ಬಾಲಕಿ. ಈ ಸಂಬಂಧ ಪಶುವೈದ್ಯ ಉಪೇಂದ್ರ(64) ಎಂಬುವರನ್ನು ಬಂಧಿಸಲಾಗಿದೆ.

‘ತಾಯಿ ಹಾಗೂ ಚಿಕ್ಕಮ್ಮನ ಜತೆ ನಾಗರಬಾವಿ ವಿಲೇಜ್‌ನಲ್ಲಿರುವ ಚಿನ್ನಾಭರಣ ಅಂಗಡಿಗೆ ಝಾನ್ಸಿ ತೆರಳಿದ್ದಳು. ಝಾನ್ಸಿ ಚಿಕ್ಕಮ್ಮನ ಜತೆ ಅಂಗಡಿಯೊಂದರ ಬಳಿ ನಿಂತಿದ್ದಳು. ಆಕೆಯ ತಾಯಿ ಮೊಬೈಲ್‌ನಲ್ಲಿ ಮಾತಾಡಿಕೊಂಡು ಚಿನ್ನಾಭರಣ ಅಂಗಡಿ ಕಡೆಯ ಮುಂಭಾಗದಲ್ಲಿ ರಸ್ತೆಬದಿ ನಿಂತಿದ್ದರು. ಅದನ್ನು ಗಮನಿಸಿದ ಝಾನ್ಸಿ, ತಾಯಿ ಬಳಿ ಹೋಗಲು ಏಕಾಏಕಿ ಓಡಿ ಬಂದಿದ್ದಾಳೆ. ಅದೇ ವೇಳೆ ನಾಗರಬಾವಿ ಕಡೆಗೆ ತೆರಳಲು ವೇಗವಾಗಿ ಬಂದ ಉಪೇಂದ್ರ ಅವರು ಕಾರನ್ನು ಬಲಕ್ಕೆ ತಿರುವು ಪಡೆದಾಗ ಮಗುವಿಗೆ ಡಿಕ್ಕಿ ಹೊಡೆದಿದ್ದು, ಆಕೆ ಮೇಲೆಯೇ ಕಾರು ಹರಿದಿತ್ತು’ ಎಂದು ಪೊಲೀಸರು ಹೇಳಿದರು.

ಅಪಘಾತ: ವ್ಯಕ್ತಿ ಮರಣ

ಉಪ್ಪಾರಪೇಟೆ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಆನಂದ್‌ರಾವ್ ವೃತ್ತದ ಬಳಿಯ ಮೇಲ್ಸೇತುವೆಯಲ್ಲಿ ಪಾದಚಾರಿಗೆ ವಾಹನವೊಂದು ಡಿಕ್ಕಿ ಹೊಡೆದಿದ್ದು ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮಂಗಳವಾರ ರಾತ್ರಿ ಈ ಅಪಘಾತ ಸಂಭವಿಸಿದೆ. ಮೃತ ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ. ಮೃತ ವ್ಯಕ್ತಿಗೆ 35ರಿಂದ 40 ವರ್ಷ ಇರಬಹುದೆಂದು ಅಂದಾಜಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ರಾತ್ರಿ 9.30ರ ವೇಳೆಯಲ್ಲಿ ವ್ಯಕ್ತಿ ನಡೆದು ತೆರಳುತ್ತಿದ್ದರು. ವೇಗವಾಗಿ ಬಂದ ವಾಹನವೊಂದು ಡಿಕ್ಕಿ ಹೊಡೆದಿದೆ. ಚಾಲಕ ವಾಹನ ನಿಲ್ಲಿಸದೇ ತೆರಳಿದ್ದಾನೆ. ಘಟನೆ ಸುತ್ತಮುತ್ತಲ ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗಿದೆ. ವಾಹನದ ಮಾದರಿ ಸಹ ಪತ್ತೆಯಾಗಿಲ್ಲ’ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಡಿಕ್ಕಿ: ಕಾರ್ಮಿಕ ಮೃತ

ನಗರದ ಬನಶಂಕರಿಯಲ್ಲಿ ಬುಧವಾರ ಬಿಬಿಎಂಪಿ ಕಸ ಸಂಗ್ರಹಿಸುವ ವಾಹನ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಯಾರಬ್ ನಗರದ ನಿವಾಸಿ ಮುದಾಸೀರ್ (42) ಮೃತಪಟ್ಟವರು. ಮುದಾಸೀರ್ ಅವರು ಕಬ್ಬಿಣದ ವೆಲ್ಡಿಂಗ್ ಕೆಲಸ ಮಾಡುತ್ತಿದ್ದರು.

‘ಮುದಾಸೀರ್ ಅವರು ಯಾರಬ್ ನಗರದ ಮುಖ್ಯರಸ್ತೆಯಿಂದ ಬೇಂದ್ರೆ ವೃತ್ತದ ಕಡೆಗೆ ಬೈಕ್‌ನಲ್ಲಿ ತೆರಳುತ್ತಿದ್ದರು. ಆಗ ವೇಗವಾಗಿ ಬಂದ ಬಿಬಿಎಂಪಿಗೆ ಸೇರಿದ ವಾಹನವು ಹಿಂದಿನಿಂದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಸವಾರನಿಗೆ ತಲೆ ಬಲವಾದ ಪೆಟ್ಟು ಬಿದ್ದಿತ್ತು’ ಎಂದು ಬನಶಂಕರಿ ಸಂಚಾರ ಠಾಣೆ ಪೊಲೀಸರು ಹೇಳಿದರು.

ಪ್ರಯಾಣಿಕನ ಸೋಗಿನಲ್ಲಿ ಕ್ಯಾಬ್ ಚಾಲಕನ ಮೇಲೆ ಹಲ್ಲೆ

ಬೆಂಗಳೂರು: ಪ್ರಯಾಣಿಕನ ಸೋಗಿನಲ್ಲಿ ಓಲಾ ಕ್ಯಾಬ್ ಚಾಲಕನ ಮೇಲೆ ಹಲ್ಲೆ ನಡೆಸಿ ನಗದು ಹಾಗೂ ಚಿನ್ನಾಭರಣ ಕಸಿದು ಪರಾರಿಯಾಗಲು ಯತ್ನಿಸಿದ ಆರೋಪಿಯನ್ನು ಸ್ಥಳೀಯರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಈ ಸಂಬಂಧ ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿರಣ್ ಕುಮಾರ್ ಹಲ್ಲೆಗೆ ಒಳಗಾದ ಚಾಲಕ. ಹಲ್ಲೆ ನಡೆಸಿದ ಆರೋಪಿಯನ್ನು ರಾಯಚೂರು ಜಿಲ್ಲೆ, ದೇವದುರ್ಗದ ನರಸಪ್ಪ ಎಂದು ಗುರುತಿಸಲಾಗಿದೆ.

‘ಬುಧವಾರ ಬೆಳಿಗ್ಗೆ ಕಿರಣ್‌ಕುಮಾರ್ ಅವರು ಓಡಿಸುತ್ತಿದ್ದ ಕಾರಿಗೆ ಅಂಜಾನಪುರಕ್ಕೆ ತೆರಳಲು ಬುಕ್ಕಿಂಗ್ ಬಂದಿತ್ತು. ಕಾರು ಸ್ಥಳಕ್ಕೆ ತೆರಳುವುದಕ್ಕೂ ಮೊದಲು, ಅದೇ ವ್ಯಕ್ತಿ ಕ್ಯಾಬ್ ಬುಕ್ಕಿಂಗ್ ಅನ್ನು ರದ್ದು ಪಡಿಸಿದ್ದ. ನಾನೇ ಬುಕ್ಕಿಂಗ್ ರದ್ದು ಪಡಿಸಿದ್ದು, ಅಂಜನಾಪುರಕ್ಕೆ ಬಿಡುವಂತೆ ಚಾಲಕನ ಬಳಿ ಕೋರಿಕೆ ಸಲ್ಲಿಸಿದ್ದ. ಕಾರಿನಲ್ಲಿ ಆತನನ್ನು ಕೂರಿಸಿಕೊಂಡು ಮಾಂಗಲ್ಯ ಅಪಾರ್ಟ್‌ಮೆಂಟ್ ಬಳಿ ತೆರಳುತ್ತಿದ್ದಾಗ ಚಾಕು ತೋರಿಸಿ ಹಲ್ಲೆ ನಡೆಸಿದ. ಚಿನ್ನದ ಸರ ನೀಡುವಂತೆ ಬೆದರಿಕೆ ಹಾಕಿ ಬಲಗೈಗೆ ಚಾಕುವಿನಿಂದ ಚುಚ್ಚಿದ. ಅದಾದ ಮೇಲೆ ₹5 ಸಾವಿರ ನಗದು ಕಸಿದು ಪರಾರಿಯಾಗಲು ಯತ್ನಿಸಿದ. ಜೋರಾಗಿ ಕಿರುಚಿಕೊಂಡಾಗ ಸ್ಥಳೀಯರು ನೆರವಿಗೆ ಬಂದರು’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಚಾರಣ: ಪತ್ತೆಯಾಗದ ಯುವಕ

ಪ್ರಜಾವಾಣಿ ವಾರ್ತೆ

ಮಾಗಡಿ (ರಾಮನಗರ): ತಾಲ್ಲೂಕಿನ ಸಾವನದುರ್ಗಕ್ಕೆ ಡಿ.24ರಂದು ಬೆಂಗಳೂರಿನಿಂದ ಚಾರಣಕ್ಕೆ ಬಂದು ನಾಪತ್ತೆಯಾಗಿರುವ ಉತ್ತರಪ್ರದೇಶ ಮೂಲದ ಯುವಕ, ಸಾಫ್ಟ್‌ವೇರ್ ಎಂಜಿನಿಯರ್ ಗಗನ್‌ದೀಪ್ ಸಿಂಗ್ (30) 4ದಿನವಾದರೂ ಪತ್ತೆಯಾಗಿಲ್ಲ.

ಗಗನ್‌ದೀಪ್ ಸಿಂಗ್

ಪೊಲೀಸ್, ಅರಣ್ಯ ಇಲಾಖೆ ಹಾಗೂ ಸ್ಥಳೀಯರನ್ನೊಳಗೊಂಡ 100ಕ್ಕೂ ಹೆಚ್ಚು ಮಂದಿ ಅವರ ಪತ್ತೆಗಾಗಿ ಬೆಳಿಗ್ಗೆಯಿಂದ ಸಂಜೆವರೆಗೆ ಹುಡುಕಾಟ ನಡೆಸಿದ್ದಾರೆ. ಡ್ರೋನ್ ಮೂಲಕವೂ ಶೋಧ ನಡೆಸಲಾಗಿದೆ. ಆದರೂ, ಪತ್ತೆಯಾಗಿಲ್ಲ.

ಬೆಟ್ಟದ ಸುತ್ತಮುತ್ತ ಹುಡುಕಾಟ ನಡೆಸಲಾಗಿದೆ. ಸುಳಿವು ಸಿಕ್ಕಿಲ್ಲ. ಅವರ ಬಳಿ ಇದ್ದ ಆ್ಯಪಲ್ ಐಫೋನ್ ಲೊಕೇಷನ್ ಆಧರಿಸಿ ಪತ್ತೆ ಹಚ್ಚುವುದಕ್ಕಾಗಿ, ಲೊಕೇಷನ್ ಪತ್ತೆಗೆ ನೆರವಾಗುವಂತೆ ಆ್ಯಪಲ್ ಕಂಪನಿಗೂ ಪತ್ರ ಬರೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಂಗ್ ಹಾಗೂ ಅವರ ಸ್ನೇಹಿತ 24ರಂದು ಸಾವನದುರ್ಗ ಬೆಟ್ಟಕ್ಕೆ ಚಾರಣ ಬಂದಿದ್ದರು. ಬೆಟ್ಟ ಹತ್ತುವಾಗ ಅವರ ಸ್ನೇಹಿತ ಸುಸ್ತಾಗಿದ್ದರಿಂದ ಅರ್ಧದಲ್ಲೇ ಉಳಿದಿದ್ದರು. ಸ್ನೇಹಿತನನ್ನು ಅಲ್ಲಿಯೇ ಬಿಟ್ಟು ಬೆಟ್ಟ ಹತ್ತಿದ್ದ ಸಿಂಗ್, ಮರಳಿ ವಾಪಸ್ ಬಂದಿರಲಿಲ್ಲ. ಸಂಜೆಯಾದರೂ ಬಾರದಿದ್ದರಿಂದ ಆತಂಕಗೊಂಡ ಅವರ ಸ್ನೇಹಿತ ಮಾಗಡಿ ಠಾಣೆಗೆ ದೂರು ಕೊಟ್ಟಿದ್ದರು.

ತೆರಿಗೆ ಬಾಕಿ: ಬಿಬಿಎಂಪಿ ಅಧಿಕಾರಿಗಳಿಂದ ಕ್ರಮ

ಮಂತ್ರಿ ಸ್ಕ್ವೇರ್ ಮಾಲ್‌ಗೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲವು ವರ್ಷಗಳಿಂದ ತೆರಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿದ್ದ ಕಾರಣಕ್ಕೆ ಬಿಬಿಎಂಪಿ ಅಧಿಕಾರಿಗಳು ಬುಧವಾರ ಮಂತ್ರಿ ಸ್ಕ್ವೇರ್ ಮಾಲ್‌ಗೆ ಬೀಗ ಹಾಕಿದ್ದಾರೆ.

ನಾಲ್ಕು ವರ್ಷಗಳಿಂದ ತೆರಿಗೆ ಪಾವತಿಸಿರಲಿಲ್ಲ. ಇಲ್ಲಿವರೆಗಿನ ಬಾಕಿ ಮೊತ್ತ ₹ 51 ಕೋಟಿ ಆಗಿತ್ತು. ಫೆಬ್ರುವರಿಯಲ್ಲಿ ಬಿಬಿಎಂಪಿ ಅಧಿಕಾರಿಗಳು ಪೀಠೋಪಕರಣ ಜಪ್ತಿ ಮಾಡಲು ಹೋಗಿದ್ದರು. ಮಾಲ್‌ನ ಮಾಲೀಕರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರಿಂದ ವಾಪಸಾಗಿದ್ದರು. ಆ ಸಂದರ್ಭದಲ್ಲಿ ತೆರಿಗೆ ಪಾವತಿಸಲು ಸೂಚಿಸಲಾಗಿತ್ತು.

ತೆರಿಗೆ ಪಾವತಿಗೆ ಯಾವುದೇ ಕ್ರಮ ಕೈಗೊಳ್ಳದ ಕಾರಣ ಬುಧವಾರ ಬಿಬಿಎಂಪಿ ಅಧಿಕಾರಿಗಳು ಪೊಲೀಸರ ನೆರವಿನೊಂದಿಗೆ ಮಾಲ್‌ಗೆ ತೆರಳಿ ಗ್ರಾಹಕರನ್ನು ಹೊರಗೆ ಕಳುಹಿಸಿ ಮುಖ್ಯದ್ವಾರಕ್ಕೆ ಬೀಗ ಹಾಕಿದರು.

‘ಕೆಲವು ವರ್ಷಗಳಿಂದ ತೆರಿಗೆ ಪಾವತಿಸಿಲ್ಲ. ಈಗ ಬೀಗ ಹಾಕಿ ಸೀಲ್ ಮಾಡಿದ್ದೇವೆ. ಅವರ ಮೇಲೆ ಎಫ್‌ಐಆರ್ ದಾಖಲು ಮಾಡುತ್ತೇವೆ. ಆಗಲೂ ತೆರಿಗೆ ಪಾವತಿಸದೇ ಇದ್ದರೆ ಬೇರೆ ಕ್ರಮಗಳನ್ನು ಕೈಗೊಳ್ಳುತ್ತೇವೆ’ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಕಂದಾಯ/ಐಟಿ) ಮನೀಶ್ ಮೌದ್ಗಿಲ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಕಾರ್ಮಿಕ ಇಲಾಖೆ ನೋಟಿಸ್

ರಾಮನಗರ: ಕಾರ್ಮಿಕನಿಗೆ ಮಾಲೀಕ ಸರಪಳಿ ಕಟ್ಟಿ ಜೀತದಾಳುವಿನಂತೆ ದುಡಿಸಿಕೊಳ್ಳುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರ್ಮಿಕ ಇಲಾಖೆ ಅಧಿಕಾರಿಗಳು ಬುಧವಾರ ಘಟನೆ ನಡೆದ ಇಲ್ಲಿನ ಮೆಹಬೂಬ ನಗರದ ಎಸ್‌ಐಯು ರೇಷ್ಮೆ ಕಾರ್ಖಾನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

‘ಐವರು ಮಹಿಳೆಯರು ಸೇರಿದಂತೆ 20 ಮಂದಿ ಕೆಲಸ ಮಾಡುತ್ತಿರುವ ಕಾರ್ಖಾನೆಗೆ ಕಾರ್ಮಿಕ ನಿರೀಕ್ಷಕರು ಭೇಟಿ ನೀಡಿದಾಗ, ಕನಿಷ್ಠ ವೇತನ ಕಾಯ್ದೆ ಸೇರಿದಂತೆ ಕೆಲ ಕಾಯ್ದೆಗಳು ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ’ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಸುಭಾಷ್ ಆಲದಕಟ್ಟಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಾರ್ಮಿಕರಿಗೆ ವೇತನ ಪಾವತಿ, ರಜೆ ಸೌಲಭ್ಯ ಹಾಗೂ ಕಾರ್ಖಾನೆಗೆ ಸಂಬಂಧಿಸಿದ ದಾಸ್ತಾವೇಜುಗಳನ್ನು ಸಹ ಸರಿಯಾಗಿ ನಿರ್ವಹಣೆ ಮಾಡಿಲ್ಲ. ಸಂಬಂಧಿಸಿದ ದಾಖಲೆಗಳನ್ನು ಒಂದು ವಾರದೊಳಗೆ ಇಲಾಖೆಗೆ ಸಲ್ಲಿಸುವಂತೆ ಕಾರ್ಖಾನೆ ಮಾಲೀಕ ಸೈಯದ್ ಇಸಾಕ್ ಉಲ್ಲಾ ಅವರಿಗೆ ನೋಟಿಸ್ ನೀಡಲಾಗಿದೆ. ತಪ್ಪಿದಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು’ ಎಂದರು.

‘ಪೊಲೀಸರು, ಕಂದಾಯ ಅಧಿಕಾರಿಗಳು ರಕ್ಷಣೆ ಮಾಡಿದ ಕಾರ್ಮಿಕ ಮೊಹಮ್ಮದ್ ವಸೀಂ ಅವರ ಹೇಳಿಕೆ ಪಡೆಯಲಾಗಿದೆ’ ಎಂದು ತಿಳಿಸಿದರು.

ದು. ಸರಸ್ವತಿ ಅವರು ಅನುವಾದಿಸಿದ ‘ಬೀದಿಹೆಣ್ಣು’ ಪುಸ್ತಕವನ್ನು ಈಚೆಗೆ ಬಿಡುಗಡೆಗೊಳಿಸಲಾಯಿತು. (ಎಡದಿಂದ) ಹುಲಿಕುಂಟೆ ಮೂರ್ತಿ, ಜ್ಯೋತಿ ನಿಶಾ, ದು. ಸರಸ್ವತಿ ಮತ್ತು ದಯಾ ಗಂಗನಘಟ್ಟ ಇದ್ದಾರೆ.

ಪುಸ್ತಕ ಆಹ್ವಾನ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿಯು ‘ಕುವೆಂಪು ಚಿರಂತನ ಪ್ರಶಸ್ತಿ’ಗೆ 2023ರಲ್ಲಿ ಪ್ರಕಟಗೊಂಡ ಕೃತಿಗಳನ್ನು ಆಹ್ವಾನಿಸಿದೆ.

ಪ್ರಶಸ್ತಿಯು ₹ 5 ಸಾವಿರ ನಗದು ಒಳಗೊಂಡಿದೆ. ಕೃತಿಯ ಎರಡು ಪ್ರತಿಗಳನ್ನು ಎ.ಎಸ್.ನಾಗರಾಜಸ್ವಾಮಿ, ಅಧ್ಯಕ್ಷ, ಕನ್ನಡ ಸಂಘರ್ಷ ಸಮಿತಿ, ನಂ.3, 1ನೇ ತಿರುವು, 1ನೇ ಮುಖ್ಯ ರಸ್ತೆ, ಅನ್ನಪೂರ್ಣೇಶ್ವರಿ ಬಡಾವಣೆ, ಉಲ್ಲಾಳ ಮುಖ್ಯ ರಸ್ತೆ, ಬೆಂಗಳೂರು-560 056 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 9739001410

ಸಚಿವ ಶಿವರಾಜ ತಂಗಡಗಿ ಹೇಳಿಕೆ

‘ಅಹಿಂದ ಸಮಾವೇಶ ಯಾರ ವಿರುದ್ಧವೂ ಅಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿತ್ರದುರ್ಗದಲ್ಲಿ ನಡೆಯುವ ಅಹಿಂದ ಸಮಾವೇಶವು ಲಿಂಗಾಯತರು ಸೇರಿದಂತೆ ಯಾವುದೇ ಸಮುದಾಯಗಳ ವಿರುದ್ಧವೂ ಅಲ್ಲ’ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಹೇಳಿದರು.

ಈ ಕುರಿತು ಸುದ್ದಿಗಾರರಿಗೆ ಬುಧವಾರ ಪ್ರತಿಕ್ರಿಯಿಸಿದ ಅವರು, ‘ಲಿಂಗಾಯತರು ಸಮಾವೇಶ ನಡೆಸಿರುವುದಕ್ಕೆ ಪ್ರತಿಯಾಗಿ ಅಹಿಂದ ಸಮಾವೇಶ ನಡೆಸಲಾಗುತ್ತಿದೆ ಎಂದು ಹೇಳುವಂತಿಲ್ಲ. ಅವರಂತೆ ನಾವು ಕೂಡ ನಮ್ಮ ಸಮಾಜದ ಸಮಾವೇಶ ನಡೆಸುತ್ತಿದ್ದೇವೆ. ಅದಕ್ಕೆ ಬೇರೆ ಅರ್ಥ ಕಲ್ಪಿಸುವ ಅಗತ್ಯವಿಲ್ಲ’ ಎಂದರು.

ಹಿಂದುಳಿದ ವರ್ಗಗಳ ಆಯೋಗ ನಡೆಸಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವರದಿ ತಿರಸ್ಕರಿಸುವಂತೆ ಲಿಂಗಾಯತ ಸಮಾವೇಶದಲ್ಲಿ ನಿರ್ಣಯ ಕೈಗೊಂಡಿರುವ ಕುರಿತು ಕೇಳಿದಾಗ, ‘ವರದಿಯನ್ನು ಇನ್ನೂ ಸರ್ಕಾರ ಸ್ವೀಕರಿಸಿಲ್ಲ. ಈಗಲೇ ತಿರಸ್ಕರಿಸುವಂತೆ ಬೇಡಿಕೆ ಇಡುವುದು ಸರಿಯಲ್ಲ’ ಎಂದು ಹೇಳಿದರು.

‘ಒಕ್ಕಲಿಗರು, ಲಿಂಗಾಯತರು ವರದಿ ಸ್ವೀಕರಿಸದಂತೆ ಬೇಡಿಕೆ ಇಡುತ್ತಿದ್ದಾರೆ. ಈ ವರದಿ ಯಾವುದೇ ಜಾತಿಗೆ ಸೀಮಿತವಾದುದಲ್ಲ. ಇಡೀ ರಾಜ್ಯದ ಜನರ ಮಾಹಿತಿ ಇದೆ. ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಎಲ್ಲರಿಗೂ ಅವಕಾಶವಿದೆ. ಆದರೆ, ವರದಿ ಸ್ವೀಕರಿಸುವುದಾಗಿ ಮುಖ್ಯಮಂತ್ರಿ ಅವರು ಈಗಾಗಲೇ ಹೇಳಿದ್ದಾರೆ’ ಎಂದರು.

‘ಜಾತಿ ಗಣತಿ ವರದಿಗೆ ಸಂಬಂಧಿಸಿದಂತೆ ಪರ, ವಿರೋಧ ಎಲ್ಲ ಒತ್ತಡಗಳೂ ಇರುತ್ತವೆ. ಹಾಗಾಗಿ ನಾವು ಸಭೆಯಲ್ಲಿ ಮಾತನಾಡಿರುತ್ತೇವೆ. ವರದಿ ಸರ್ಕಾರದ ಕೈ ಸೇರಿದ ಬಳಿಕವಷ್ಟೇ ಅದರಲ್ಲಿ ಏನಿದೆ ಎಂಬುದನ್ನು ತಿಳಿಯಲು ಸಾಧ್ಯ ತಾನೆ’ ಎಂದು ಪ್ರಶ್ನಿಸಿದರು.

‘ಪ್ರಜಾವಾಣಿ’ ವರದಿ ಪ್ರಸ್ತಾಪಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಮಕ್ಕಳಿಂದ ಸ್ವಚ್ಛತೆ: ಕ್ರೂರ ಕೃತ್ಯ

ಪ್ರಜಾವಾಣಿ ವಾರ್ತೆ

ಕೋಲಾರ: ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಕೆಡಿಪಿ ಸಭೆಯಲ್ಲಿ 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದ್ದ ಕೋಲಾರ ಜಿಲ್ಲೆಯಲ್ಲಿನ ಬಾಲ್ಯ ವಿವಾಹ ಪ್ರಕರಣ, 8 ತಿಂಗಳಲ್ಲಿ 98 ಬಾಲ ಗರ್ಭಿಣಿಯರು, ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮಲ ಗುಂಡಿ ಸ್ವಚ್ಛತೆಗೆ ಮಕ್ಕಳ ಬಳಕೆ ಹಾಗೂ ಸ್ಮಶಾನಕ್ಕೆ ಜಾಗ ಕೊರತೆ ವಿಶೇಷ ವರದಿ ಪ್ರಸ್ತಾಪಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲೂ ‘ಪ್ರಜಾವಾಣಿ’ ತೋರಿಸಿ ಪ್ರಕರಣಗಳ ನಿಯಂತ್ರಣಕ್ಕೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದರು.

ಭ್ರೂಣ ಹತ್ಯೆ ಕಡ್ಡಾಯವಾಗಿ ತಪ್ಪಿಸಬೇಕು. ತಪ್ಪಿತಸ್ಥರ ವಿರುದ್ಧ ಎಫ್ಐಆರ್ ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

‘ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳಿಂದ ಮಲದ ಗುಂಡಿ ಸ್ವಚ್ಛಗೊಳಿಸಿದ್ದು ಕ್ರೂರ ಕೃತ್ಯ. ಅಪ್ಪಿತಪ್ಪಿಯೂ ಇಂಥ ಕೃತ್ಯ ಸಹಿಸುವುದಿಲ್ಲ. ಮೂವರು ಆರೋಪಿಗಳನ್ನು ಬಂಧಿಸಿದ್ದು, ಎರಡು ದಿನಗಳಲ್ಲಿ ಇನ್ನುಳಿದ ಇಬ್ಬರನ್ನು ಬಂಧಿಸಬೇಕು’ ಎಂದು ಸೂಚಿಸಿದರು.

ಕೋಲಾರದಲ್ಲಿ ಬುಧವಾರ ನಡೆದ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ‘ಪ್ರಜಾವಾಣಿ’ ವರದಿ ತೋರಿಸಿದರು

‘ಕಾನೂನು ಬಾಹಿರ ಕೆಲಸಕ್ಕೆ ಕ್ರಮ’

‘ಕನ್ನಡ ನಾಮಫಲಕ ಅಳವಡಿಸಬೇಕೆಂದು ಪ್ರತಿಭಟನೆ ಮಾಡುತ್ತಿರುವ ವಿಚಾರ ನನ್ನ ಗಮನಕ್ಕೆ ಬಂದಿದೆ. ಕಾನೂನು ಬಾಹಿರ ಕೆಲಸ ಮಾಡಿದರೆ, ಕಾನೂನು ಕೈಗೆತ್ತಿಕೊಂಡರೆ ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

‘ಕೋವಿಡ್-19 ಸಂಬಂಧ ಆರೋಗ್ಯ ಸಚಿವರ ನೇತೃತ್ವದಲ್ಲಿ ನಾಲ್ವರು ಸದಸ್ಯರ ಸಂಪುಟ ಉಪಸಮಿತಿ ರಚಿಸಲಾಗಿದೆ. ತಾಂತ್ರಿಕ ಸಲಹಾ ಸಮಿತಿ ಭೇಟಿ ಮಾಡಿ ಏನು ಸಲಹೆ ನೀಡುತ್ತಾರೋ ಅದನ್ನು ಜಾರಿಗೊಳಿಸಬೇಕು’ ಎಂದರು.

ಸಚಿವರಾದ ಬೈರತಿ ಸುರೇಶ್, ಎಂ.ಸಿ.ಸುಧಾಕರ್, ‘ಈ ಘಟನೆ ಇಡೀ ರಾಜ್ಯಕ್ಕೆ ಒಂದು ಪಾಠ. ಯಾವುದೇ ಕಾರಣಕ್ಕೂ ಮರುಕಳಿಸಬಾರದು. ವಸತಿ ಶಾಲೆಗಳ ಒಳಗೆ ಪೋಷಕರು ಪ್ರವೇಶಿಸಲು ಅವಕಾಶ ನೀಡಬೇಕು. ಇದರಿಂದ ಪೋಷಕರಿಗೆ ವಸತಿ ಶಾಲೆಗಳ ಗುಣಮಟ್ಟ ಗೊತ್ತಾಗುತ್ತದೆ’ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

'ಸ್ಮಶಾನ ಮತ್ತು ಖಬರಸ್ತಾನಕ್ಕೆ ಅಗತ್ಯ ಜಾಗ ಒದಗಿಸಬೇಕು. ಸರ್ಕಾರಿ ಸ್ಥಳ ಇಲ್ಲದಿದ್ದರೆ ಖರೀದಿಸಿ ಕೊಡಬೇಕು. ದಲಿತರು ಸೇರಿದಂತೆ ಯಾವುದೇ ಸಮುದಾಯ, ಧರ್ಮದವರಿಗೆ ಶವ ಸಂಸ್ಕಾರಕ್ಕೆ ತೊಂದರೆ ಆಗಕೂಡದು' ಎಂದರು.

ಸಭೆಗೆ ಪತ್ರಕರ್ತರಿಗೆ ಪ್ರವೇಶ ಇರಲಿಲ್ಲ. ಈ ಸಂಬಂಧ ಕೆಲ ಪತ್ರಕರ್ತರು ಆಕ್ಷೇಪ ವ್ಯಕ್ತಪಡಿಸಿದರು, ಆಗ ವಾಗ್ವಾದ ನಡೆಯಿತು. ‘ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾಧ್ಯಮದವರೂ ಇರಬೇಕೆಂಬ ಪದ್ಧತಿಯೇನಿಲ್ಲ’ ಎಂದರು.

‘ಬಸವಲಿಂಗಪ್ಪ ಸ್ಮಾರಕಕ್ಕೆ ಆಗ್ರಹ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ. ಬಸವಲಿಂಗಪ್ಪ ಅವರ ಪುಣ್ಯಸ್ಮರಣೆಯ ಅಂಗವಾಗಿ ದಲಿತ ಸಂಘರ್ಷ ಸಮಿತಿಯ (ಡಿಎಸ್ಎಸ್) ವತಿಯಿಂದ ಯಲಹಂಕ ಉಪನಗರದ ಮದರ್ ಡೇರಿ ವೃತ್ತದಿಂದ ಅಳ್ಳಾಳ ಸಂದ್ರ ಬಸ್ ನಿಲ್ದಾಣದವರೆಗೆ (ಬಿ.ಬಸವಲಿಂಗಪ್ಪ ಅವರ ಪುಣ್ಯ ಭೂಮಿ) ಕಾಲ್ನಡಿಗೆ ಜಾಥಾ ನಡೆಯಿತು.

ಜಾಥಾ, ಯಲಹಂಕ ಉಪನಗರದ ಬಸ್ ನಿಲ್ದಾಣದ ಮುಖ್ಯರಸ್ತೆಯ ಮೂಲಕ ಚಿಕ್ಕಬೊಮ್ಮಸಂದ್ರ ಕ್ರಾಸ್ ಮಾರ್ಗವಾಗಿ ಶೇಷಾದ್ರಿಪುರ ಕಾಲೇಜಿನ ರಸ್ತೆ, ದೊಡ್ಡಬಳ್ಳಾಪುರ ರಸ್ತೆಯ ಮಾರ್ಗವಾಗಿ ಅಳ್ಳಾಳಸಂದ್ರ ಬಸ್ ನಿಲ್ದಾಣ ಮುಂಭಾಗದಲ್ಲಿರುವ ಬಿ. ಬಸವಲಿಂಗಪ್ಪ ಅವರ ಪುಣ್ಯಭೂಮಿಗೆ ತಲುಪಿತು. ನಂತರ ಬಸವಲಿಂಗಪ್ಪ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಜಾಥಾದಲ್ಲಿ ಡಿಎಸ್ಎಸ್‌ನ ಹಲವಾರು ಸದಸ್ಯರು ಪಾಲ್ಗೊಂಡಿದ್ದರು.

ಡಿಎಸ್ಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್. ಮಾರಪ್ಪ, ‘ಬಿ. ಬಸವಲಿಂಗಪ್ಪ ಅವರು ದಲಿತರು ತಲೆಯ ಮೇಲೆ ಮಲ ಹೊರುವ ಪದ್ಧತಿಯನ್ನು ನಿಷೇಧಿಸಿದ್ದರು. ಜೊತೆಗೆ ಭೂ ಪರಭಾರೆ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಿದ್ದರು. ಆದ್ದರಿಂದ ಬಸವಲಿಂಗಪ್ಪ ಅವರ ಪ್ರತಿಮೆಯನ್ನು ವಿಧಾನಸೌಧದ ಆವರಣದಲ್ಲಿ ನಿರ್ಮಿಸಬೇಕು. ಯಲಹಂಕದಲ್ಲಿರುವ ಅವರ ಸಮಾಧಿಯನ್ನು ಸ್ಮಾರಕವನ್ನಾಗಿ ಮಾಡಬೇಕು’ ಎಂದು ಆಗ್ರಹಿಸಿದರು.

ಬಿ. ಬಸವಲಿಂಗಪ್ಪ ಅವರ ಪುಣ್ಯಸ್ಮರಣೆಯ ಅಂಗವಾಗಿ ದಲಿತ ಸಂಘರ್ಷ ಸಮಿತಿಯ ಸದಸ್ಯರು ಯಲಹಂಕದಲ್ಲಿ ಬುಧವಾರ ಕಾಲ್ನಡಿಗೆ ಜಾಥಾ ನಡೆಸಿದರು

ಚುನಾವಣೆ ಜೆಡಿಎಸ್ ಚರ್ಚೆ

ಬೆಂಗಳೂರು: ಪದವೀಧರ, ಶಿಕ್ಷಕರ ಕ್ಷೇತ್ರಗಳು, ಬಿಬಿಎಂಪಿ ಹಾಗೂ ಲೋಕಸಭೆ ಚುನಾವಣೆಗಾಗಿ ಪಕ್ಷವನ್ನು ಸಜ್ಜುಗೊಳಿಸಲು, ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲು ಬುಧವಾರ ನಡೆದ ಜೆಡಿಎಸ್ ಮುಖಂಡರ ಸಭೆ ನಿರ್ಧರಿಸಿತು.

ವಿಧಾನ ಪರಿಷತ್ ಮಾಜಿ ಸದಸ್ಯ ಎಚ್.ಎಂ.ರಮೇಶ್ ಗೌಡ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿ, ಟಿ.ಎ.ಶರವಣ, ಗೊಟ್ಟಿಗೆರೆ ಮಂಜಣ್ಣ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಘಟಕದ ಅಧ್ಯಕ್ಷರಾಗಿ ಎಂ.ನಾಗೇಂದ್ರ ಪ್ರಸಾದ್ (ಬಾಬು) ಅವರನ್ನು ನೇಮಕ ಮಾಡಲಾಯಿತು.

AIR FORCE SCHOOL ASTE
GV Camp, Murugeshpalya, Bengaluru - 560 017
(Ph:080-25276920/ 25203358)
Invites applications for the posts of

	Post	Nature of Appointment
(a)	PGT – Economics	Regular
(b)	TGT – Social Studies	Regular
(c)	TGT – HWT	Panel
(d)	NTT	Regular
(e)	Office Superintendent	Regular
(f)	Special Educator	Contractual (Full-time/Part-time)
(g)	Computer Lab Attendant	Contractual
(h)	STEM Lab Co-ordinator	Part-time
(j)	Helpers (Male/Female) (Gagan Vihar camp/ Akash Vihar camp)	Regular and Contractual

Details of qualifications and documents required to be checked on www.afsaste.edu.in. Hard copies of resume/CV, along with relevant documents, two passport size photographs and covering letter stating the post applied for with complete contact details (i.e. present address, mobile nos, email id) should be submitted/posted to **Air Force School, ASTE, GV Camp, Murugeshpalya, Bengaluru - 560 017. Last date of receipt is 11 Jan 2024 upto 1200 hrs.** Soft copies will not be accepted.

ಶ್ರೀನಿಧಿ ಸಹಕಾರಿ ಬ್ಯಾಂಕಿನ ರಜತ ಮಹೋತ್ಸವದಲ್ಲಿ ವೆಂಕಟಪ್ಪ, ಲೇಖಕಿ ಸಂಧ್ಯಾರೆಡ್ಡಿ, ಪತ್ರಕರ್ತ ಆರ್‌.ಪಿ.ಎಸ್‌. ರೆಡ್ಡಿ, ಸದಾಶಿವರೆಡ್ಡಿ ಅವರನ್ನು ಸನ್ಮಾನಿಸಲಾಯಿತು

MISSING



My Son Mr. GirishBabu, aged about 25 years while Missing, He is missing from 02.08.2011, after finishing work he came to house and again evening at about 6-00 he went Kolar for some work. I verified with all my relatives and at his working place, but he is not found, in this regard we had already lodged police complaint before Kolar Rural Police Station in Crime No. 303/2011. request you to please help me if anyone have seen him anywhere. I will be grateful of you all.
Contact Details:
N. VENKATARAMANA
S/o Late Sri Narayanappa, Aged about 63,
R/at Gajaladinne Village, Kasaba Hobli,
Kolar Taluk, Kolar District
Mobile No: 8123311929

‘ಸರ್ಕಾರಿ ಬ್ಯಾಂಕ್‌ಗಳ ಮೂಲಕ ₹14 ಸಾವಿರ ಕೋಟಿ ನಷ್ಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಬ್ಯಾಂಕ್‌ಗಳ ಮೂಲಕ ದೇಶದ ಸಾರ್ವಜನಿಕರಿಗೆ ಸೇರಿದ ₹ 14,500 ಕೋಟಿ ನಷ್ಟವಾಗಿದೆ. ಆದರೂ ಸಹ ಸಹಕಾರ ಬ್ಯಾಂಕ್‌ಗಳು ಜನರಿಗೆ ಆರ್ಥಿಕ ಭದ್ರತೆ ಒದಗಿಸುತ್ತಿವೆ’ ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಹೇಳಿದರು.

ನಗರದಲ್ಲಿ ನಡೆದ ಶ್ರೀನಿಧಿ ಸೌಹಾರ್ದ ಸಹಕಾರ ಬ್ಯಾಂಕಿನ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ದೇಶದ ಆರ್ಥಿಕತೆಯ ಪುನಶ್ಚೇತನ ಮಾಡುವ ಪ್ರಕ್ರಿಯೆಯಲ್ಲಿ ಸಹಕಾರಿ ಬ್ಯಾಂಕ್ ಪ್ರಮುಖ ಪಾತ್ರ ವಹಿಸುತ್ತಿವೆ. ಗ್ರಾಮೀಣರ ಆರ್ಥಿಕ ವ್ಯವಹಾರಗಳಲ್ಲಿ ಸಹಕಾರ ಸಂಘಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ’ ಎಂದರು.

ಬ್ಯಾಂಕಿನ ಅಧ್ಯಕ್ಷ ಸದಾಶಿವ ರೆಡ್ಡಿ, ‘ಹಲವಾರು ಅಡೆ ತಡೆಗಳ ನಡುವೆ ಶ್ರೀನಿಧಿ ಬ್ಯಾಂಕ್ ರಜತ ಮಹೋತ್ಸವ ಆಚರಿಸುತ್ತಿದೆ. ಸಂಘದ ಸದಸ್ಯರು ಹಾಗೂ ನಿರ್ದೇಶಕರ ಅವಿರತ ಪರಿಶ್ರಮದಿಂದ ಬ್ಯಾಂಕ್ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ’ ಎಂದರು.

ಇದೇ ಸಂದರ್ಭದಲ್ಲಿ ಶ್ರೀನಿಧಿ ರಜತ ಕುಸುಮ ಸ್ಮರಣಿಕೆ ಬಿಡುಗಡೆಗೊಳಿಸಲಾಯಿತು. ಬ್ಯಾಂಕಿನ ಹಿರಿಯ ಸದಸ್ಯ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವೆಂಕಟಪ್ಪ, ಲೇಖಕಿ ಸಂಧ್ಯಾರೆಡ್ಡಿ, ಪತ್ರಕರ್ತ ಆರ್.ಪಿ.ಎಸ್. ರೆಡ್ಡಿ, ಸದಾಶಿವರೆಡ್ಡಿ ಅವರನ್ನು ಸನ್ಮಾನಿಸಲಾಯಿತು.

ಬ್ಯಾಂಕ್‌ನ ಸಂಸ್ಥಾಪಕ ಅಧ್ಯಕ್ಷ ಚೆನ್ನಾರೆಡ್ಡಿ, ನಿವೃತ್ತ ಪೊಲೀಸ್ ಅಧಿಕಾರಿ ರಾಮಸುಬ್ಬು, ಸಹಕಾರ ಇಲಾಖೆಯ ಎಂ.ವೆಂಕಟರೆಡ್ಡಿ, ಉಪಾಧ್ಯಕ್ಷ ಶಂಕರ ರೆಡ್ಡಿ, ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಎಂ.ಡಿ.ಪ್ರವೀಣ್ ಭಾಗವಹಿಸಿದ್ದರು.

ಆರ್ಯ ವೈಶ್ಯ ನಿಗಮ: ಡಿಬಿಟಿ ವ್ಯವಸ್ಥೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಯೋಜನೆಗಳ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಹಣ ವರ್ಗಾಯಿಸುವ ವ್ಯವಸ್ಥೆಗೆ ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮ ಚಾಲನೆ ನೀಡಿದೆ.

ನಿಗಮದ ಡಿಬಿಟಿ ವ್ಯವಸ್ಥೆಯನ್ನು ಬುಧವಾರ ಉದ್ಘಾಟಿಸಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಸ್ವಯಂ ಉದ್ಯೋಗ ನೇರ ಸಾಲ ಯೋಜನೆಯ 500 ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಒಟ್ಟು ₹ 5 ಕೋಟಿ ಸಾಲ ಮತ್ತು ಸಹಾಯಧನವನ್ನು ವರ್ಗಾವಣೆ ಮಾಡಿದರು.

ನಂತರ ಮಾತನಾಡಿದ ಅವರು, ‘ರಾಜ್ಯ ಸರ್ಕಾರದ ನಿಗಮಗಳಲ್ಲಿ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮವು ಸಂಪೂರ್ಣವಾಗಿ ಡಿಬಿಟಿ ವ್ಯವಸ್ಥೆ ಅಳವಡಿಸಿಕೊಂಡಿರುವ ಮೊದಲ ಸಂಸ್ಥೆಯಾಗಿದೆ. ನಿಗಮದ ಎಲ್ಲ ಯೋಜನೆಗಳ ಫಲಾನುಭವಿಗಳಿಗೆ ಇನ್ನು ಮುಂದೆ ಡಿಬಿಟಿ ಮೂಲಕವೇ ಸಾಲ ಮತ್ತು ಸಹಾಯಧನ ಬಿಡುಗಡೆ ಮಾಡಲಾಗುವುದು’ ಎಂದರು.

ಈ ನಿಗಮವು ಆ್ಯಪ್ ಮೂಲಕ ಸಾಲ ಮರು ಪಾವತಿಗೂ ಅವಕಾಶ ಕಲ್ಪಿಸಿದೆ. ಫಲಾನುಭವಿಗಳು ತಮ್ಮ ಇಮೇಲ್ ಮೂಲಕ ಸ್ವಯಂಚಾಲಿತ ಸಾಲ ಮಂಜೂರಾತಿ ಆದೇಶ ಪತ್ರ ಪಡೆಯುವ ಸೌಲಭ್ಯವನ್ನೂ ಕಲ್ಪಿಸಿದೆ. ನಿಗಮದ ಫಲಾನುಭವಿಗಳು ಈವರೆಗೆ ₹ 4.57 ಕೋಟಿಯಷ್ಟು ಸಾಲ ಮರುಪಾವತಿಸಿರುವುದು ಸ್ವಾಗತಾರ್ಹ ಎಂದು ಹೇಳಿದರು.

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಮಾತನಾಡಿ, ‘ಆರ್ಯ ವೈಶ್ಯ ಅಭಿವೃದ್ಧಿ ನಿಗಮವು ಸಂಪೂರ್ಣವಾಗಿ ಕಂಪ್ಯೂಟರೀಕರಣಗೊಂಡಿದೆ. ಇದರಿಂದಾಗಿ ನೇರ ನಗದು ವರ್ಗಾವಣೆ ಅನುಷ್ಠಾನಕ್ಕೆ ತರಲು ಸಾಧ್ಯವಾಯಿತು’ ಎಂದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕಿ ದೀಪಶ್ರೀ .ಕೆ ಮಾತನಾಡಿ, ‘ಆಹಾರ ವಾಹಿನಿ ಯೋಜನೆಯಡಿಯಲ್ಲಿ ಆಯ್ಕೆಯಾದ 40 ಫಲಾನುಭವಿಗಳಿಗೆ ಹಾಗೂ ವಾಸವಿ ಜಲಶಕ್ತಿ ಯೋಜನೆ ಅಡಿಯಲ್ಲಿ ಆಯ್ಕೆಯಾದ 36 ಫಲಾನುಭವಿಗಳಿಗೆ ಶೀಘ್ರದಲ್ಲಿ ಸಾಲ ಮತ್ತು ಸಹಾಯಧನದ ಮೊತ್ತವನ್ನು ಬಿಡುಗಡೆ ಮಾಡಲಾಗುವುದು’ ಎಂದರು.

ಯಕ್ಷಗಾನ ಡಿಪ್ಲೊಮಾ ಕೋರ್ಸ್‌ಗೆ ಒಪ್ಪಂದ

ಬೆಂಗಳೂರು: ನಗರದ ಕಲಾಕದಂಬ ಆರ್ಟ್ ಸೆಂಟರ್ ಯಕ್ಷಗಾನದಲ್ಲಿ ಡಿಪ್ಲೊಮಾ ಹಾಗೂ ಅಲ್ಪಾವಧಿ ಕೋರ್ಸ್‌ಗಳನ್ನು ನಡೆಸಲು ಮೈಸೂರಿನಲ್ಲಿರುವ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದ ಜತೆಗೆ ಒಪ್ಪಂದ ಮಾಡಿಕೊಂಡಿದೆ.

2024ರ ಜನವರಿಯಿಂದ ಈ ಕೋರ್ಸ್‌ಗಳ ತರಗತಿ ಪ್ರಾರಂಭವಾಗಲಿದೆ. ಇದೇ ಮೊದಲ ಬಾರಿಗೆ ವಿಶ್ವವಿದ್ಯಾಲಯ ಮಾನ್ಯತೆಯೊಂದಿಗೆ ಯಕ್ಷಗಾನದಲ್ಲಿ ಡಿಪ್ಲೊಮಾ ಹಾಗೂ ಪ್ರಮಾಣ ಪತ್ರ ಆಧಾರಿತ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ.

‘ಯಕ್ಷಗಾನ ಕಲೆಯ ಜನಪ್ರಿಯತೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಆದ್ದರಿಂದ ಆಸಕ್ತರಿಗೆ ತರಗತಿಗಳನ್ನು ನಡೆಸಿ, ಕಲಿಸಲು ವಿಶ್ವವಿದ್ಯಾಲಯದ ಜತೆಗೆ ಒಪ್ಪಂದ ಮಾಡಿಕೊಂಡಿದ್ದೇವೆ. ಇದರಿಂದಾಗಿ ನಮ್ಮ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ಮಾನ್ಯತೆ ಹೊಂದಿದ ಪ್ರಮಾಣ ಪತ್ರ ದೊರೆಯುತ್ತದೆ’ ಎಂದು ಸೆಂಟರ್‌ನ ರಾಧಾಕೃಷ್ಣ ಉರಾಳ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9448510582 ಅಥವಾ 9886066732

30ರಂದು ‘ನಳಪಾಕ ನಾಟಕೂಟೋತ್ಸವ’

ಬೆಂಗಳೂರು: ಇಲ್ಲಿನ ನಳಪಾಕ ಹೋಟೆಲ್ ಹಾಗೂ ಹುಬ್ಬಳ್ಳಿಯ ಗುರು ಇನ್‌ಸ್ಟಿಟ್ಯೂಟ್ ಜಂಟಿಯಾಗಿ ಇದೇ 30ರಂದು ಬೆಳಿಗ್ಗೆ 10.30ಕ್ಕೆ ಜೆ.ಸಿ. ರಸ್ತೆಯಲ್ಲಿರುವ ಎ.ಡಿ.ಎ ರಂಗಮಂದಿರದಲ್ಲಿ ‘ನಳಪಾಕ ನಾಟಕೂಟೋತ್ಸವ’ ಹಮ್ಮಿಕೊಂಡಿದೆ.

ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಉತ್ಸವವನ್ನು ಉದ್ಘಾಟಿಸಲಿದ್ದಾರೆ. ಬಳಿಕ ಮರಾಠಿಯ ಪ್ರಸಿದ್ಧ ನಾಟಕಕಾರ ಸಂತೋಷ್ ಪವಾರ್ ಅವರು ರಚಿಸಿರುವ ‘ಸೂಪರ್ ಸಂಸಾರ’ ಹಾಸ್ಯ ನಾಟಕ ಪ್ರದರ್ಶನ ಕಾಣಲಿದೆ. ಇದನ್ನು ಯಶವಂತ್ ಸರದೇಶಪಾಂಡೆ ಅವರು ಅನುವಾದಿಸಿ, ನಿರ್ದೇಶಿಸಿದ್ದಾರೆ.

ನಾಟಕದ ಬಳಿಕ ನಳಪಾಕದ ಭರ್ಜರಿ ಊಟವನ್ನು ಸವಿಯಬಹುದು. ಜೋಳದ ರೊಟ್ಟಿ, ಬದನೆಕಾಯಿ ಪಲ್ಯ, ಅನ್ನ- ಸಾರು, ಗೋಧಿ ಹುಗ್ಗಿ, ಮೆಣಸಿಕಾಯಿ ಬಜ್ಜಿ ಸೇರಿ ಉತ್ತರ ಕರ್ನಾಟಕದ ತಿನಿಸುಗಳನ್ನು ಸವಿಯಬಹುದು ಎಂದು ನಳಪಾಕ ಹೋಟೆಲ್ ಮಾಲೀಕ ಲಿಂಗಯ್ಯ ಕಾಡದೇವರಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ವಿವರಕ್ಕೆ: 9731518999

ಡಿ.30ರಂದು ಅಧಿಕೃತ ಚಾಲನೆ ಸಾಧ್ಯತೆ

ವಂದೇ ಭಾರತ್ ಪ್ರಾಯೋಗಿಕ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಹಾಗೂ ತಮಿಳುನಾಡಿನ ಕೊಯಮತ್ತೂರು ನಡುವಿನ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಪ್ರಾಯೋಗಿಕ ಸಂಚಾರ ಬುಧವಾರ ನಡೆಯಿತು.

ಬೆಳಿಗ್ಗೆ 5 ಗಂಟೆಗೆ ಕೊಯಮತ್ತೂರಿನಿಂದ ಹೊರಟ ರೈಲು ಬೆಳಿಗ್ಗೆ 10.38ಕ್ಕೆ ಬೆಂಗಳೂರು ಕಂಟೋನ್ಮೆಂಟ್ ನಿಲ್ದಾಣಕ್ಕೆ ತಲುಪಿತು. ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಯೋಗೇಶ್ ಮೋಹನ್ ಮತ್ತು ವಿಭಾಗದ ಇತರ ಅಧಿಕಾರಿಗಳು ಕಂಟೋನ್ಮೆಂಟ್‌ಗೆ ಭೇಟಿ ನೀಡಿ ರೈಲು ಪರಿಶೀಲಿಸಿದರು.

ಡಿ.30ರಂದು ಈ ಮಾರ್ಗದಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್‌ಗೆ ಅಧಿಕೃತ ಚಾಲನೆ ದೊರೆಯುವ ಸಾಧ್ಯತೆ ಇದೆ. ಮಂಗಳೂರು- ಮಡಗಾಂವ್ ನಡುವಣ ವಂದೇ ಭಾರತ್ ರೈಲಿಗೂ ಅಂದೇ ಚಾಲನೆ ಸಿಗಲಿದೆ. ನೂತನ ರೈಲುಗಳ ವೇಳಾಪಟ್ಟಿ ಮತ್ತು ದರಪಟ್ಟಿಯನ್ನು ಶೀಘ್ರ ಬಿಡುಗಡೆ ಮಾಡಲಾಗುವುದು. ಈ ಎರಡು ಹೊಸ ರೈಲುಗಳ ಸೇರ್ಪಡೆಯಿಂದ ರಾಜ್ಯಕ್ಕೆ ಸಿಕ್ಕ ವಂದೇ ಭಾರತ್ ರೈಲುಗಳ ಸಂಖ್ಯೆ 5ಕ್ಕೆ ಏರಿಕೆಯಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಮಿಳುನಾಡಿನ ಕೊಯಮತ್ತೂರಿನಿಂದ ಬೆಂಗಳೂರು ಕಂಟೋನ್ಮೆಂಟ್ ರೈಲು ನಿಲ್ದಾಣಕ್ಕೆ ‘ವಂದೇ ಭಾರತ್’ ಎಕ್ಸ್‌ಪ್ರೆಸ್ ರೈಲಿನ ಪ್ರಾಯೋಗಿಕ ಸಂಚಾರ ಬುಧವಾರ ನಡೆಯಿತು

ತೆರಿಗೆದಾತರೇ ಗಮನಿಸಿ

ಈ ದಿನಾಂಕವನ್ನು ಮರೆಯದಿರಿ!

ಹ.ವ. 2023–24ನೇ ಸಾಲಿನ ಐಟಿಆರ್ ಫೈಲ್ ಮಾಡಲು ಕೊನೆಯ ದಿನಾಂಕ

ತ್ವರೆ ಮಾಡಿ!

ವಿಳಂಬ ಮಾಡಬೇಡಿ. ಇಂದೇ ಫೈಲ್ ಮಾಡಿರಿ!

ಪರಿಷ್ಕೃತ ರಿಟರ್ನ್ಸ್

ಅಂತಿಮ ದಿನಾಂಕದೊಳಗೆ ಫೈಲ್ ಮಾಡಲಾಗಿದ್ದ ಮೂಲ ಐಟಿಆರ್’ನ ಸ್ಟೇಟ್‌ಮೆಂಟ್‌ನಲ್ಲಿ ಯಾವುದೇ ಲೋಪ ದೋಷಗಳು ಉಂಟಾಗಿದ್ದರೆ, ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 139 (5)ರ ಅಡಿಯಲ್ಲಿ, ಹ.ವ. 2023-24ನೇ ಸಾಲಿನ ಪರಿಷ್ಕೃತ ಐಟಿ ರಿಟರ್ನ್‌ಗಳನ್ನು ಡಿಸೆಂಬರ್ 31, 2023 ರೊಳಗೆ ಯಾವುದೇ ವಿಳಂಬ ಶುಲ್ಕವಿಲ್ಲದೆ ಇ-ಫೈಲ್ ಮಾಡಬಹುದು.

ವಿಳಂಬಿತ ರಿಟರ್ನ್ಸ್

ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 139 (4) ಅಡಿಯಲ್ಲಿ, ಹ.ವ. 2023-24ನೇ ಸಾಲಿಗೆ ವಿಳಂಬಿತ ಐಟಿ ರಿಟರ್ನ್ ಅನ್ನು ವಿಳಂಬ ಶುಲ್ಕ ಸಮೇತ ಡಿಸೆಂಬರ್ 31, 2023 ರೊಳಗೆ ಇ-ಫೈಲ್ ಮಾಡಬಹುದು.

www.incometax.gov.in ಇ-ಫೈಲಿಂಗ್ ಪೋರ್ಟಲ್‌ಗೆ ಲಾಗಾನ್ ಮಾಡಿರಿ ಮತ್ತು ಸರಳವಾಗಿ ಹಾಗೂ ಸುರಕ್ಷಿತವಾಗಿ ನಿಮ್ಮ ಆದಾಯ ತೆರಿಗೆ ರಿಟರ್ನ್ ಫೈಲ್ ಮಾಡಿರಿ.

cbc 15401/13/0021/2324

ಇ-ಬ್ರೋಷರ್‌ಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

INCOME TAX DEPARTMENT

ಆದಾಯ ತೆರಿಗೆ ಇಲಾಖೆ
ಕೇಂದ್ರೀಯ ನೇರ ತೆರಿಗೆಗಳ ಮಂಡಳಿ
ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಭೇಟಿ ಕೊಡಿ www.incometax.gov.in

ಹೆಚ್ಚಿನ ಮಾಹಿತಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

@incometaxindiaofficial | @incometaxindia.official | @IncomeTaxIndia | @Income Tax India | @IncomeTaxIndia.Official

ಏನಿದು ಕಾರ್ಬನ್ ಬಾಂಬ್?

ಜಾಗತಿಕವಾಗಿ ಹೆಚ್ಚುತ್ತಿರುವ ಇಂಗಾಲದ ಡೈ ಆಕ್ಸೈಡ್ ಪ್ರಮಾಣಕ್ಕೆ ಸಂಬಂಧಿಸಿದಂತೆ ಒಂದು ಪ್ರಮುಖ ಪರಿಕಲ್ಪನೆಯಾಗಿರುವ ಕಾರ್ಬನ್ ಬಾಂಬ್‌ಗಳ ಕುರಿತ ಮಾಹಿತಿ ಇಲ್ಲಿದೆ.

ಯು.ಟಿ. ಆಯಿಷ ಫರ್ಜಾನ

ಕನಿಷ್ಠ ಒಂದು ಬಿಲಿಯನ್ ಟನ್ ಇಂಗಾಲದ ಡೈ ಆಕ್ಸೈಡ್ (CO_2) ಹೊರಸೂಸುವಿಕೆಗೆ ಕಾರಣವಾಗುವ ತೈಲ ಅಥವಾ ಅನಿಲ ಯೋಜನೆಗಳನ್ನು ಕಾರ್ಬನ್‌ಬಾಂಬ್ ಎಂದು ಕರೆಯಲಾಗುತ್ತದೆ. ಕಲ್ಲಿದ್ದಲು, ತೈಲ ಅಥವಾ ಅನಿಲವನ್ನು ಹೊರತೆಗೆಯುವಾಗ ಆ ಕ್ರಿಯೆಯು ಮಾಲಿನ್ಯ ಮತ್ತು ಪರಿಸರನಾಶಕ್ಕೆ ಕಾರಣವಾಗುತ್ತದೆ. ಇದರ ಜತೆಗೆ ಇಂಧನವನ್ನು ದಹಿಸಿದಾಗ ಹೆಚ್ಚಿನ ಪ್ರಮಾಣದಲ್ಲಿ ಇಂಗಾಲದ ಹೊರಸೂಸುವಿಕೆ ಉಂಟಾಗುತ್ತದೆ ಎಂದು ಗಾರ್ಡಿಯನ್ ಸಂಶೋಧನಾ ವರದಿ ವ್ಯಾಖ್ಯಾನಿಸಿದೆ.

ಅಮೆರಿಕ, ರಷ್ಯಾ, ಪಶ್ಚಿಮ ಏಷ್ಯಾ, ಆಸ್ಟ್ರೇಲಿಯಾ ಮತ್ತು ಭಾರತ ಸೇರಿ ಪ್ರಪಂಚದಾದ್ಯಂತ ಸುಮಾರು 195 ಇಂಥ ಕಾರ್ಬನ್‌ಬಾಂಬ್ ಯೋಜನೆಗಳನ್ನು ಗುರುತಿಸಲಾಗಿದೆ.

ಜಾಗತಿಕ ತಾಪಮಾನದ ಏರಿಕೆಯನ್ನು ಸರಾಸರಿ 2 °ಸೆಲ್ಸಿಯಸ್‌ಗೆ ಇಳಿಸುವುದು, ಮುಂದಿನ ದಿನಗಳಲ್ಲಿ 1.5 °ಸೆಲ್ಸಿಯಸ್ ಗುರಿಗಾಗಿ ಶ್ರಮಿಸುವುದು 2015ರ ಪ್ಯಾರಿಸ್ ಒಪ್ಪಂದದ ಗುರಿಯಾಗಿತ್ತು.

ಈ 195 'ಕಾರ್ಬನ್‌ಬಾಂಬ್'ಯೋಜನೆಗಳಲ್ಲಿ ತೊಡಗಿಸಿಕೊಳ್ಳಲು ಪ್ರಪಂಚದಾದ್ಯಂತ ದೇಶಗಳು ಮತ್ತು ಖಾಸಗಿ ಕಂಪನಿಗಳು ಸಜ್ಜಾಗಿವೆ. ಇದು ಭಾರಿ ಪ್ರಮಾಣದ ಇಂಗಾಲವನ್ನು ವಾತಾವರಣಕ್ಕೆ ಬಿಡುಗಡೆ ಮಾಡುತ್ತದೆ ಎನ್ನಲಾಗಿದೆ.

ಬಾಂಬ್ ನಿಷ್ಕ್ರಿಯಗೊಳಿಸುವ 'ಲಿಂಗೋ'

ಜಾಗತಿಕ ತಾಪಮಾನ ಏರಿಕೆಗೆ ಹೆಚ್ಚಿನ ಕೊಡುಗೆ ನೀಡುವ ಕಲ್ಲಿದ್ದಲು, ತೈಲ ಮತ್ತು ಅನಿಲ ಯೋಜನೆಗಳಂಥ ಕಾರ್ಬನ್‌ಬಾಂಬ್‌ಗಳನ್ನು ಗುರುತಿಸಿ, ನಿಷ್ಕ್ರಿಯಗೊಳಿಸಲು ಪರಿಸರವಾದಿಗಳು, ವಕೀಲರು ಮತ್ತು ಪರಿಸರ ಕಾರ್ಯಕರ್ತರ ಗುಂಪುಗಳು ಒಂದಾಗಿ ದುಡಿಯುತ್ತಿವೆ.

ಈ ಗುರಿಯತ್ತ ಕೆಲಸ ಮಾಡುತ್ತಿರುವ ಗುಂಪನ್ನು ಲೀವ್ ಇಟ್ ಇನ್ ಗ್ರೌಂಡ್ ಇನಿಶಿಯೇಟಿವ್ (LINGO) ಎಂದು ಕರೆಯಲಾಗುತ್ತದೆ. 'ಪಳೆಯುಳಿಕೆ ಇಂಧನಗಳನ್ನು ಉಳಿಯಲು ಬಿಟ್ಟು, ಅವುಗಳಿಲ್ಲದೆಯೂ ಬದುಕಲು ಕಲಿಯುವುದು' ಎಂಬುದು ಇದರ ವ್ಯಾಖ್ಯಾನವಾಗಿದೆ.

ಪಳೆಯುಳಿಕೆ ಇಂಧನಗಳ ದಹನದಿಂದಲೇ ಹವಾಮಾನದಲ್ಲಿ ವೈಪರೀತ್ಯ ಕಾಣಿಸುತ್ತಿದ್ದು, ನವೀಕರಿಸಬಹುದಾದ ಇಂಧನಗಳ ಸಮರ್ಪಕ ಬಳಕೆಯೇ ಇದಕ್ಕೆ ಪರಿಹಾರವೆಂಬುದನ್ನು ಲಿಂಗೋ ಪ್ರತಿಪಾದಿಸುತ್ತದೆ.

ಲಿಂಗೋ ಕಾರ್ಬನ್‌ಬಾಂಬ್ ಯೋಜನೆಗಳನ್ನು ಪಟ್ಟಿ ಮಾಡಿದ್ದು, ಇದರಲ್ಲಿ ಅದಾನಿ ಗ್ರೂಪ್ ಒಡೆತನದ ಕಾರ್ಮೈಕಲ್ ಕೋಲ್ ಪ್ರಾಜೆಕ್ಟ್, ಕೋಲ್ ಇಂಡಿಯಾ ಒಡೆತನದ ಛತ್ತೀಸಗಢದ ಗೆವ್ರಾ ಕೋಲ್ ಮೈನ್ಸ್ ಮತ್ತು ಈಸ್ಟರ್ನ್ ಕೋಲ್‌ಫೀಲ್ಡ್ಸ್ ಒಡೆತನದ ಪೂರ್ವ ಜಾರ್ಖಂಡ್‌ನಲ್ಲಿರುವ ರಾಜಮಹಲ್ ಕೋಲ್ ಮೈನ್ಸ್ ಯೋಜನೆಗಳು ಸೇರಿವೆ. ಎಕ್ಸಾನ್ಮೊಬಿಲ್, ಟೋಟಲ್, ಶೆವ್ರಾನ್, ಶೆಲ್ ಮತ್ತು ಬಿಪಿ (ಬ್ರಿಟಿಷ್ ಪೆಟ್ರೋಲಿಯಂ) ಯಂತಹ ಇಂಧನ ಕಂಪನಿಗಳು ಕಲ್ಲಿದ್ದಲು ಬಾಂಬ್ ಯೋಜನೆಗಳನ್ನು ಹೊಂದಿವೆ ಎಂದು ಆಕ್ಷೇಪಿಸಿದೆ.

ಸಿಸಿಪಿಐನಲ್ಲಿ ಭಾರತಕ್ಕೆ 7ನೇಸ್ಥಾನ

ಈ ವರ್ಷದ ಹವಾಮಾನ ಬದಲಾವಣೆಯ ಕಾರ್ಯಕ್ಷಮತೆ ಸೂಚ್ಯಂಕದಲ್ಲಿ (CCPI) ಭಾರತವು 7ನೇ ಸ್ಥಾನವನ್ನು ಪಡೆದುಕೊಂಡಿದ್ದು ಕಳೆದ ಬಾರಿಗಿಂತ ಒಂದು ಸ್ಥಾನದ ಸುಧಾರಣೆಯನ್ನು ಕಂಡಿದೆ.

ಹಸಿರುಮನೆ ಅನಿಲ (GHG) ಹೊರಸೂಸುವಿಕೆ ಮತ್ತು ಶಕ್ತಿಯ ದಕ್ಷ ಬಳಕೆಯ ವಿಭಾಗಗಳಲ್ಲಿ ದೇಶವು ಅತ್ಯುತ್ತಮ ಮಟ್ಟದ ಸಾಧನೆಯನ್ನು ತೋರಿದೆ. ಆದರೆ ಹಿಂದಿನ ವರ್ಷದ ಮೌಲ್ಯಮಾಪನಕ್ಕೆ ಅನುಗುಣವಾಗಿ ನೋಡುವುದಾದರೆ ಹವಾಮಾನ ನೀತಿ ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಭಾರತ ಮಧ್ಯಮ ಶ್ರೇಣಿಯನ್ನು ಪಡೆದುಕೊಂಡಿದೆ.

ಭಾರತ (7ನೇ), ಜರ್ಮನಿ (14ನೇ), ಮತ್ತು ಐರೋಪ್ಯ ಒಕ್ಕೂಟವು (16ನೇ) ಸ್ಥಾನವನ್ನು ಪಡೆದಿದ್ದು, ಕೇವಲ ಮೂರು G20 ದೇಶಗಳು ಮಾತ್ರ ಸಿಸಿಪಿಐ- 2024ರಲ್ಲಿ ಹೆಚ್ಚಿನ ಕಾರ್ಯಕ್ಷಮತೆಯನ್ನು ಹೊಂದಿವೆ.

ತನಿಖೆ ಏನು ಹೇಳುತ್ತದೆ?

ಗಾರ್ಡಿಯನ್ ತನಿಖೆಯ ಪ್ರಕಾರ ಈ ಕಾರ್ಬನ್ ಬಾಂಬ್ ಯೋಜನೆಗಳಲ್ಲಿ ಶೇ 60ಕ್ಕಿಂತ ಹೆಚ್ಚು ಯೋಜನೆಗಳು ಈಗಾಗಲೇ ಪ್ರಗತಿಯಲ್ಲಿವೆ. ಕಲ್ಲಿದ್ದಲು, ತೈಲ ಮತ್ತು ಅನಿಲ ಯೋಜನೆಗಳ ಹೊರತಾಗಿ ಮಿಥೇನ್‌ನಿಂದ ಆಗುವ ಅಪಾಯದ ಬಗ್ಗೆಯೂ ಈ ತನಿಖೆ ಎಚ್ಚರಿಸಿದೆ. ಇಂಗಾಲದ ಪ್ರಮಾಣವನ್ನು ಕಡಿಮೆ ಮಾಡಲು ನಿರ್ಧರಿಸದಿದ್ದರೆ ಮುಂದಿನ ಪೀಳಿಗೆ ಅಪಾಯಕಾರಿ ವಾತಾವರಣರದಲ್ಲಿ ಬೆಳೆಯಬೇಕಾಗಬಹುದು. ಜವಾಬ್ದಾರಿಯನ್ನು ಮರೆಯದೆ ಪರಿಸರವನ್ನು ಸಂರಕ್ಷಿಸುವಂತಾಗಬೇಕು.

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ

www.exammastermind.comಗೆ ಭೇಟಿ ಕೊಡಿ

ಭಾರತೀಯ ವಿಮಾನನಿಲ್ದಾಣಗಳ ಪ್ರಾಧಿಕಾರದಲ್ಲಿ 119 ಹುದ್ದೆಗಳು

ಮಂಜುನಾಥ್ ಭದ್ರಶೆಟ್ಟಿ

ನಾಗರಿಕ ವಿಮಾನಯಾನ ಸಚಿವಾಲಯದಡಿ ಕಾರ್ಯನಿರ್ವಹಿಸುವ ಭಾರತೀಯ ವಿಮಾನನಿಲ್ದಾಣಗಳ ಪ್ರಾಧಿಕಾರದ ದಕ್ಷಿಣ ಪ್ರಾಂತ್ಯದಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲು ಕರ್ನಾಟಕ ಸೇರಿದಂತೆ ದಕ್ಷಿಣ ರಾಜ್ಯದ ಅಭ್ಯರ್ಥಿಗಳಿಂದ ಮಾತ್ರ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ.

ಡಿಸೆಂಬರ್ 27ರಿಂದ ಒಟ್ಟು ವಿವಿಧ 119 ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಪ್ರಾರಂಭವಾಗಿದ್ದು, ಜನವರಿ 26ವರೆಗೆ ಅರ್ಜಿ ಸಲ್ಲಿಸಲು ಅವಕಾಶ ಇದೆ. ಅರ್ಜಿ ಶುಲ್ಕ ₹1000.

ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಪುದುಚೇರಿ, ಲಕ್ಷದ್ವೀಪದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರು.

ಜೂನಿಯರ್ ಅಸಿಸ್ಟೆಂಟ್: ಫೈರ್ ಸರ್ವಿಸ್- 73 ಹುದ್ದೆಗಳು 'ಜೂನಿಯರ್ ಅಸಿಸ್ಟೆಂಟ್- ಫೈರ್ ಸರ್ವಿಸ್' ಎಂಬ ಒಟ್ಟು 73 ಹುದ್ದೆಗಳಿದ್ದು ಪಿಯುಸಿ ಅಥವಾ ಡಿಪ್ಲೊಮಾ ಮೆಕ್ಯಾನಿಕಲ್/ ಡಿಪ್ಲೊಮಾ ಆಟೊಮೊಬೈಲ್ ಅರ್ಹತೆ ಹೊಂದಿರಬೇಕು. ಜೊತೆಗೆ ಭಾರಿ ವಾಹನ ಚಾಲನಾ ಪರವಾನಗಿ ಹೊಂದಿರಬೇಕು. ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿವೃತ್ತ ಸೈನಿಕರಿಗೆ ಮಾತ್ರ ಅವಕಾಶವಿದೆ. ಮೊದಲು ಕಂಪ್ಯೂಟರ್ ಆಧಾರಿತ ಪರೀಕ್ಷೆ (ಸಿಬಿಟಿ), ದೈಹಿಕ ಅರ್ಹತಾ ಪರೀಕ್ಷೆ, ವೈದ್ಯಕೀಯ ಪರೀಕ್ಷೆ ಇರಲಿದೆ. ವೇತನ:92,000 ವರಗೆ. ವಯೋಮಿತಿ: ನಿವೃತ್ತ ಸೈನಿಕರಿಗೆ ನಿಯಮಾವಳಿ ಅನುಸಾರ ಅನ್ವಯವಾಗಲಿವೆ.

ಜೂನಿಯರ್ ಅಸಿಸ್ಟೆಂಟ್ (ಆಫೀಸ್)- 2 ಹುದ್ದೆಗಳು: ಜೂನಿಯರ್ ಅಸಿಸ್ಟೆಂಟ್ ಎಂಬ ಎರಡು ಹುದ್ದೆಗಳಿದ್ದು, ಯಾವುದೇ ಪದವಿ ಹೊಂದಿರುವವರು ಅರ್ಜಿ ಸಲ್ಲಿಸಬಹುದು. ₹92,000 ವರೆಗೆ ವೇತನವಿದೆ. ವಯೋಮಿತಿ ಕನಿಷ್ಠ 18 ಗರಿಷ್ಠ 30. ಮೀಸಲು ವರ್ಗಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಇದೆ. ಸಿಬಿಟಿ ಪರೀಕ್ಷೆ ಹಾಗೂ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ ಇರಲಿದೆ.

ಸೀನಿಯರ್ ಅಸಿಸ್ಟೆಂಟ್ (ಎಲೆಕ್ಟ್ರಾನಿಕ್ಸ್)- 25 ಹುದ್ದೆಗಳು: ಸೀನಿಯರ್ ಅಸಿಸ್ಟೆಂಟ್ ಎಂಬ 25 ಹುದ್ದೆಗಳಿದ್ದು ಎಲೆಕ್ಟ್ರಾನಿಕ್ಸ್, ಟೆಲಿಕಮ್ಯೂನಿಕೇಷನ್/ರೇಡಿಯೊ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಹೊಂದಿರುವವರು ಅರ್ಜಿ ಸಲ್ಲಿಸಲು ಅರ್ಹರು. ಜೊತೆಗೆ ಅಭ್ಯರ್ಥಿಗಳು ಸಂಬಂಧಿಸಿದ ಕ್ಷೇತ್ರದಲ್ಲಿ ಪದವಿ ಮುಗಿಸಿ ಎರಡು ವರ್ಷದ ಸೇವಾನುಭವ ಹೊಂದಿರುವುದು ಅವಶ್ಯಕ. ವಯೋಮಿತಿ ಕನಿಷ್ಠ 18 ಗರಿಷ್ಠ 30. ಮೀಸಲು ವರ್ಗಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಇದೆ. ಸಿಬಿಟಿ ಪರೀಕ್ಷೆ ಮಾತ್ರ ಇರಲಿದೆ. ವೇತನ ₹1,10,000ವರೆಗೆ.

ಸೀನಿಯರ್ ಅಸಿಸ್ಟೆಂಟ್ (ಅಕೌಂಟ್ಸ್)- 19 ಹುದ್ದೆಗಳು: ಸೀನಿಯರ್ ಅಸಿಸ್ಟೆಂಟ್ ಎಂಬ 19 ಹುದ್ದೆಗಳಿದ್ದು, ಯಾವುದೇ ಪದವಿ ಹೊಂದಿರುವವರು ಅರ್ಜಿ ಸಲ್ಲಿಸಬಹುದು. ಆದರೆ, ಬಿ.ಕಾಂ ಪದವಿ ಹೊಂದಿರುವವರಿಗೆ ಆದ್ಯತೆ. ಜೊತೆಗೆ ಅಭ್ಯರ್ಥಿಗಳು ಸಂಬಂಧಿಸಿದ ಕ್ಷೇತ್ರದಲ್ಲಿ ಪದವಿ ಮುಗಿಸಿ ಎರಡು ವರ್ಷದ ಸೇವಾನುಭವ ಹೊಂದಿರುವುದು ಅವಶ್ಯಕ ₹ 1,10,000 ವರೆಗೆ ವೇತನವಿದೆ. ವಯೋಮಿತಿ ಕನಿಷ್ಠ 18 ಗರಿಷ್ಠ 30. ಮೀಸಲು ವರ್ಗಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಇದೆ. ಸಿಬಿಟಿ ಪರೀಕ್ಷೆ ಹಾಗೂ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ ಇರಲಿದೆ.

ಇಂಗ್ಲಿಷ್ ತಿಳಿವಳಿಕೆ ಅಗತ್ಯ

ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳಿಗೆ ಇಂಗ್ಲಿಷ್ ಭಾಷೆಯನ್ನು ಬರೆಯಲು, ಓದಲು ಬರಬೇಕು. ದೈಹಿಕ ಪರೀಕ್ಷೆಯ ವಿವರಗಳು, ಪಠ್ಯಕ್ರಮ, ಇತರೆ ಹೆಚ್ಚಿನ ಮಾಹಿತಿಗಳಿಗೆ ಆಸಕ್ತರು ಭಾರತೀಯ ವಿಮಾನ ನಿಲ್ದಾಣಗಳ ಅಭಿವೃದ್ಧಿ ಪ್ರಾಧಿಕಾರದ ಅಧಿಕೃತ ವೆಬ್‌ಸೈಟ್ www.aai.aero ನಲ್ಲಿ ನೋಟಿಫಿಕೇಶನ್ ಪರಿಶೀಲಿಸಬಹುದು.

AAI ಬಗ್ಗೆ: ಭಾರತೀಯ ವಿಮಾನ ನಿಲ್ದಾಣಗಳ ಅಭಿವೃದ್ಧಿ ಪ್ರಾಧಿಕಾರ 1995 ರಲ್ಲಿ ರಚನೆಯಾಗಿದ್ದು ದೇಶದಲ್ಲಿನ ವಿಮಾನ ನಿಲ್ದಾಣಗಳ ನಿರ್ಮಾಣ, ಮೂಲಸೌಕರ್ಯ ಅಭಿವೃದ್ಧಿ, ಹೊಣೆಗಾರಿಕೆ, ನವೀಕರಣ ಹಾಗೂ ನಿರ್ವಹಣೆ ಕೆಲಸಗಳನ್ನು ನೋಡಿಕೊಳ್ಳುತ್ತದೆ. ಒಟ್ಟು ಐದು ವಲಯಗಳಿವೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ನಿಯಂತ್ರಣ ಮತ್ತು ಸಹಭಾಗಿತ್ವ

9) ಮಾನವನಿಗೆ ಆಯೋಡಿನ ಮಹತ್ವವೇನು?

ಉತ್ತರ:- ಥೈರಾಕ್ಸಿನ್ ಉತ್ಪತ್ತಿ ಮಾಡಲು ಥೈರಾಯ್ಡ್ ಗ್ರಂಥಿಗೆ ಅಯೋಡಿನ್ ಅಗತ್ಯವಾಗಿ ಬೇಕು. ನಮ್ಮ ದೇಹದಲ್ಲಿ ಕಾರ್ಬೋಹೈಡ್ರೇಟ್, ಪ್ರೋಟಿನ್ ಮತ್ತು ಕೊಬ್ಬಿನ ಚಯಾಪಚಯ ಕ್ರಿಯೆಯನ್ನು ಥೈರಾಕ್ಸಿನ್ ನಿಯಂತ್ರಿಸಿ ಬೆಳವಣಿಗೆಗಾಗಿ ಅತ್ಯುತ್ತಮ ಸಮತೋಲನವನ್ನು ಒದಗಿಸುತ್ತದೆ. ಥೈರಾಕ್ಸಿನ್‌ನ ಸಂಶ್ಲೇಷಣೆಗೆ ಅಯೋಡಿನ್ ಅಗತ್ಯವಾಗಿ ಬೇಕು. ನಮ್ಮ ಆಹಾರದಲ್ಲಿ ಅಯೋಡಿನ್‌ನ ಕೊರತೆ ಉಂಟಾದರೆ ಗಳಗಂಡ ರೋಗಕ್ಕೆ ತುತ್ತಾಗುವ ಸಂಭವವಿದೆ.

10) ಪಿಟ್ಯೂಟರಿ ಗ್ರಂಥಿಯ ಹೊರಸೂಸುವ ಹಾರ್ಮೋನನ್ನು ಏನೆಂದು ಕರೆಯುವರು ಮತ್ತು ಏಕೆ?

ಉತ್ತರ::- ಪಿಟ್ಯುಟರಿ ಗ್ರಂಥಿಯ ಹಾರ್ಮೋನ್‌ಗಳಲ್ಲಿ ಬೆಳವಣಿಗೆಯ ಹಾರ್ಮೋನ್ ಕೂಡಾ ಒಂದು. ಅದರ ಹೆಸರೇ ಸೂಚಿಸುವಂತೆ ಬೆಳವಣಿಗೆಯ ಹಾರ್ಮೋನ್. ಇದು ದೇಹದ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ನಿಯಂತ್ರಿಸುತ್ತದೆ. ಒಂದೊಮ್ಮೆ ಬಾಲ್ಯದಲ್ಲಿ ಈ ಹಾರ್ಮೋನಿನ ಕೊರತೆಯಾದರೆ ಕುಬ್ಜತೆ ಉಂಟಾಗುತ್ತದೆ.

ಬಹು ಆಯ್ಕೆ ಪ್ರಶ್ನೆಗಳು

1) ಮಿದುಳಿನ ಯಾವ ಭಾಗವು ದೇಹದ ಭಂಗಿ ಮತ್ತು ಸಮತೋಲನವನ್ನು ನಿರ್ವಹಿಸುತ್ತದೆ?

ಎ) ಹಿಮ್ಮೆದುಳಿನ ಅನುಮಸ್ತಿಷ್ಕ ಬಿ) ಮುಮ್ಮಿದಳು

ಸಿ) ಕಣ್ಣುಗಳು ಡಿ) ಮೇಲಿನ ಯಾವುದು ಅಲ್ಲ

ಉತ್ತರ:-(ಎ) ಹಿಮ್ಮೆದುಳಿನ ಅನುಮಸ್ತಿಷ್ಕ

2) ಬೆಳವಣಿಗೆಯನ್ನು ಉತ್ತೇಜಿಸುವ ಸಸ್ಯ ಹಾರ್ಮೋನ್‌ಗೆ ಉದಾಹರಣೆ ....

ಎ) ಅಬ್ಸಿಸಿಕ್ ಆಮ್ಲ (abscisic acid) ಬಿ) ಆಕ್ಸಿನ್

ಸಿ) ಜಿಬ್ಬರ್‌ಲಿನ್ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಬಿ) ಆಕ್ಸಿನ್

3) ಸಸ್ಯಗಳ ಬೆಳವಣಿಗೆ ನಿಲ್ಲಲು ಯಾವ ಹಾರ್ಮೋನು ಕಾರನವಾಗುತ್ತದೆ?

ಎ) ಅಬ್ಸಿಸಿಕ್ ಆಮ್ಲ (abscisic acid)

ಬಿ) ಆಕ್ಸಿನ್ ಸಿ) ಸೈಟೋಕೈನಿನ್

ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಎ) ಅಬ್ಸಿಸಿಕ್ ಆಮ್ಲ (abscisic acid)

4) ರಕ್ತದ ಒತ್ತಡ, ಬಾಯಲ್ಲಿ ನೀರೂರುವಿಕೆ ಮತ್ತು ವಾಂತಿಯಾಗುವಿಕೆಗಳಂಥ ಎಲ್ಲಾ ಅನೈಚ್ಛಿಕ ಕ್ರಿಯೆಗಳನ್ನು ಯಾವುದು ನಿಯಂತ್ರಿಸುತ್ತದೆ?

ಎ) ಹಿಮ್ಮೆದುಳಿನ ಅನುಮಸ್ತಿಷ್ಕ

ಬಿ) ಹಿಮ್ಮೆದುಳಿನ ಮೆಡುಲ್ಲ ಸಿ)ಸೈಟೋಕೈನಿನ್

ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಬಿ) ಹಿಮ್ಮೆದುಳಿನ ಮೆಡುಲ್ಲ

5) ನೇರ ರೇಖೆಯಲ್ಲಿ ನಡೆಯುವುದು, ಬೈಸಿಕಲ್ ಸವಾರಿ, ಒಂದು ಪೆನ್ಸಿಲ್‌ಅನ್ನು ಎತ್ತಿಕೊಳ್ಳುವುದು ಮುಂತಾದ ಚಟುವಟಿಕೆಗಳನ್ನು ಮಾಡಲು ಯಾರ ಅವಶ್ಯಕತೆ ಇದೆ?

ಎ) ಹಿಮ್ಮೆದುಳಿನ ಮೆಡುಲ್ಲ ಬಿ) ಸೈಟೋಕೈನಿನ್

ಸಿ) ಕಾಲುಗಳು ಡಿ) ಹಿಮ್ಮೆದುಳಿನ ಅನುಮಸ್ತಿಷ್ಕ

ಉತ್ತರ:- (ಡಿ) ಹಿಮ್ಮೆದುಳಿನ ಭಾಗವಾದ ಅನುಮಸ್ತಿಷ್ಕ

ನಮ್ಮ ಪರಿಸರ

1) ಪರಿಸರ ಯಾವುದಕ್ಕೆ ಕರೆಯುತ್ತಾರೆ?

ಉತ್ತರ:- ನಮ್ಮ ಸುತ್ತಮುತ್ತಲಿನ ವಾತಾವರಣವನ್ನು ಪರಿಸರ ಎನ್ನುತ್ತಾರೆ. ಇದು ಜೈವಿಕ ಮತ್ತು ಅಜೈವಿಕ ಘಟಕಗಳನ್ನು ಒಳಗೊಂಡಿದೆ.

2) ನೈಸರ್ಗಿಕ ಪರಿಸರ ವ್ಯವಸ್ಥೆ ಮತ್ತು ಕೃತಕ ಪರಿಸರ ವ್ಯವಸ್ಥೆಗಳಿಗೆ ಉದಾಹರಣೆ ಕೊಡಿ

ಉತ್ತರ:-

*) **ನೈಸರ್ಗಿಕ ಪರಿಸರ ವ್ಯವಸ್ಥೆಗಳು:-** ಅರಣ್ಯ, ಕೆರೆಗಳು, ಸರೋವರ ಇತ್ಯಾದಿ

*) **ಕೃತಕ ಪರಿಸರ ವ್ಯವಸ್ಥೆಗಳು:-** ಉದ್ಯಾನ, ಮತ್ಸ್ಯಾಗಾರ ಇತ್ಯಾದಿ

3) ಕೆಲವು ವಸ್ತುಗಳು ಜೈವಿಕ ವಿಘಟನೀಯ ಮತ್ತು ಕೆಲವು ಜೈವಿಕ ವಿಘಟನೀಯವಲ್ಲ ಏಕೆ?

ಉತ್ತರ:- ಸೂಕ್ಷ್ಮ ಜೀವಿಗಳಿಂದ ಸರಳ ವಸ್ತುಗಳಾಗಿ ವಿಭಜಿಸಲ್ಪಡುವ ವಸ್ತುಗಳನ್ನು ಜೈವಿಕ ವಿಘಟನೀಯ ವಸ್ತುಗಳು ಎನ್ನುತ್ತಾರೆ, **ಉದಾ:-** ಹತ್ತಿ, ಮರ, ಕಾಗದ, ಉಣ್ಣೆ ಇತ್ಯಾದಿ

ಕೆಲವು ಮಾನವ ನಿರ್ಮಿತ ವಸ್ತುಗಳು ಬ್ಯಾಕ್ಟೀರಿಯಾ ಅಥವಾ ಕೊಳೆತಿನಿಗಳಿಂದ ಸರಳ ವಸ್ತುಗಳಾಗಿ ವಿಭಜಿಸಲ್ಪಡುವುದಿಲ್ಲ, ಅಂತಹ ವಸ್ತುಗಳನ್ನು ಜೈವಿಕ ವಿಘಟನೀಯವಲ್ಲದ ವಸ್ತುಗಳು ಎನ್ನುತ್ತಾರೆ, **ಉದಾ:-** ಪ್ಲಾಸ್ಟಿಕ್, ಪಾಲಿಥೀನ್, ಡಿಡಿಟಿ

4) ಪೋಷಣಾ ಸ್ತರಗಳು ಎಂದರೇನು? ಆಹಾರ ಸರಪಳಿಗೆ ಒಂದು ಉದಾಹಣೆ ಕೊಡಿ ಮತ್ತು ಅದರಲ್ಲಿನ ವಿವಿಧ ಪೋಷಣಾ ಸ್ತರಗಳನ್ನು ಹೆಸರಿಸಿ.

ಉತ್ತರ:- ಆಹಾರ ಶಕ್ತಿಯು ವರ್ಗಾವಣೆಯಾಗುವ ಆಹಾರಸರಪಳಿಯ ಹಂತಗಳನ್ನು ಪೋಷಣಾ ಸ್ತರಗಳು ಎನ್ನುತ್ತಾರೆ ಉದಾ ಹುಲ್ಲುಗಾವಲಿನಲ್ಲಿ ಕಂಡುಬರುವ ಆಹಾರ ಸರಪಳಿ

ಹುಲ್ಲು ⇨ ಕೀಟಗಳು ⇨ ಕಪ್ಪೆಗಳು ⇨ ಹಾವುಗಳು

ಹುಲ್ಲು..................ಪೋಷಣಾ ಸ್ತರ–1

ಕೀಟಗಳು ....ಪೋಷಣಾ ಸ್ತರ–2

ಕಪ್ಪೆಗಳು ....ಪೋಷಣಾ ಸ್ತರ–3

ಹಾವುಗಳು .... ಪೋಷಣಾ ಸ್ತರ–4

ಬಹು ಆಯ್ಕೆ ಪ್ರಶ್ನೆಗಳು:-

1. ಈ ಕೆಳಗಿನವುಗಳಲ್ಲಿ ಯಾವ ಗುಂಪುಗಳು ಜೈವಿಕ ವಿಘಟನೆಗೆ ಒಳಗಾಗುವ ವಸ್ತುಗಳನ್ನು ಮಾತ್ರ ಒಳಗೊಂಡಿದೆ?

(a) ಹುಲ್ಲು, ಪ್ಲಾಸ್ಟಿಕ್ ಹೂವುಗಳು ಮತ್ತು ಚರ್ಮ

(b) ಹುಲ್ಲು, ಮರ ಮತ್ತು ಪ್ಲಾಸ್ಟಿಕ್

(c) ಹಣ್ಣಿನ ಸಿಪ್ಪೆ, ಕೇಕ್ ಮತ್ತು ನಿಂಬೆರಸ

(d) ಕೇಕ್, ಮರ ಮತ್ತು ಸಿಂಥೆಟಿಕ್ ಹುಲ್ಲು **ಉತ್ತರ:-**ಸಿ

2 ಈ ಕೆಳಗಿನವುಗಳಲ್ಲಿ ಯಾವುದರಿಂದ ಒಂದು ಆಹಾರ ಸರಪಳಿಯನ್ನು ರಚಿಸಬಹುದು?

(a) ಹುಲ್ಲು, ಗೋಧಿ ಮತ್ತು ಮಾವು

(b) ಹುಲ್ಲು, ಮೇಕೆ ಮತ್ತು ಮಾನವ

(c) ಮೇಕೆ , ಹಸು ಮತ್ತು ಆನೆ

(d) ಹುಲ್ಲು, ಮೀನು ಮತ್ತು ಮೇಕೆ **ಉತ್ತರ:-**ಬಿ

3. ಈ ಕೆಳಗಿನವುಗಳಲ್ಲಿ ಪರಿಸರಸ್ನೇಹಿ ಅಭ್ಯಾಸಗಳು ಯಾವುವು?

(a) ಶಾಪಿಂಗ್ ವೇಳೆ ಖರೀದಿಸಿದ ವಸ್ತುಗಳನ್ನಿಡಲು ಬಟ್ಟೆಯ ಬ್ಯಾಗ್‌ಗಳನ್ನು ಒಯ್ಯುವುದು

(b) ಅನಗತ್ಯವಾಗಿ ಉರಿಯುತ್ತಿರುವ ವಿದ್ಯುದ್ದೀಪಗಳನ್ನು ಮತ್ತು ಫ್ಯಾನ್‌ಗಳನ್ನು ಆರಿಸುವುದು

(c) ಶಾಲೆಗೆ ಬಿಡಲು ನಿಮ್ಮ ತಾಯಿಯ ದ್ವಿಚಕ್ರ ವಾಹನದ ಬದಲು ಕಾಲ್ನಡಿಗೆಯಲ್ಲಿ ತೆರಳುವುದು

(d) ಮೇಲಿನ ಎಲ್ಲವೂ

ಉತ್ತರ:- ಡಿ

ಎಸ್ಸೆಸ್ಸೆಲ್ಸಿ- ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC BIOLOGY

PRINCIPLES OF INHERITANCE AND VARIATION

21. Which are the different types of crossing over?

Ans:- The different types of crossing over are – single cross-over, double cross-over and multiple cross-over.

22. What is meant by Sex linked inheritance in humans?

Ans:- The inheritance of the body characters controlled by genes present on the sex chromosomes is known as sex-linked inheritance.

23. Give some examples for Sex linked inheritance.

Ans:- Inheritance of eye colour in Drosophila, inheritance of colour blindness and haemophilia in human beings are some of the good examples for sex linked inheritance.

24. State the law of Segregation.

Ans:- The law of Segregation states that when a pair of contrasting factors or allelomorphs or genes are brought together in a hybrid (heterozygote), these factors do not blend or mix-up but simply associate themselves and remain together and separate at the time of gamete formation.

25. Explain the law of segregation briefly?

Ans:- Alleles with respect to a pair of characters remain associated in pairs in all the cells of an organism. But during gamete formation the factors undergo separation or segregation.

26. Give an example for the law of segregation?

Ans:- An example for the law of segregation is - Suppose a tall plant with a pair of alleles Tt produces about 100 gametes during reproduction, 50 gametes receive the gene T and the other 50 gametes receive the gene t. Thus, segregation takes place in equal ratios with reference to any given character and so the gametes maintain purity.

Hence this law is also, called the Law of purity of gametes.

27. Explain the Law of independent assortment briefly?

Ans:- In an organism with many characters, the genes for different characters undergo segregation independently. This means, the separation of genes for a character does not interfere in the separation of genes for the other character. Hence, they assort independently. This is possible because the genes for various characters are located on different loci or in different homologous chromosomes.

28. Mention some differences between Monohybird and Dihybird.

Ans:-

Monohybird	*Dihybird*
It is a cross made between individuals having contrasting traits in order to study the inheritance of a pair of alleles.	It is a cross made between individuals having contrasting traits in order to study the inheritance of a two pairs of alleles.
Phenotypic monohybrid ratio in F_2 generation is 3: 1.	Phenotypic dihybird ratio is 9 : 3 : 3 : 1.
Genotypic monohybrid ratio in F_2 generation is 1 : 2 : 1.	Genotypic mono-hybrid ratio in F_2 is 1:2:2:4:2:2:1:1:1.

29. Briefly mentioned the contribution of T.H. Morgan in genetics.

Ans:- T.H. Morgan (1866-1945) was an American genetist who was awarded Nobel Prize in 1933 for his work.

(1) Morgan found fruitfly Drosophila melanogaster to be better material for experiments on genetics as it was easy to rear and multiply it throughout the year.

(2) He estabilished the presence of genes over the chromosomes.

(3) Morgan estabilished the principle of linkage and crossing over.

(4) He discovered sex linkage and criss-cross inheritance.

(5) He developed the technique of chromosome mapping.

(6) He observed mutations.

(7) In 1926, Morgan wrote a book "The theory of Gene".

30. Using Punnet square, work out the distribution of phenotypic features in first filial generation after a cross between homozygous female and a heterozygous male for single locus.

Ans:- Homozygous Female WW

Heterozygous Male Ww



All with dominate trait, 50% with homozygous and 50% with heterozygous nature. *(Contd.....)*

ಜ.28ಕ್ಕೆ ಶೋಷಿತರ ಜಾಗೃತಿ ಸಮಾವೇಶ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಾಗಿದ್ದ ಎಚ್.ಕಾಂತರಾಜ ನಡೆಸಿದ ಜಾತಿ ಗಣತಿ ವರದಿಯನ್ನು ಜಾರಿಗೊಳಿಸುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲು ನಿರ್ಧರಿಸಿರುವ ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ, ಜ.28ರಂದು ನಗರದಲ್ಲಿ 'ಶೋಷಿತರ ಜಾಗೃತಿ ಸಮಾವೇಶ' ಆಯೋಜಿಸಿದೆ.

ಸಮಾವೇಶದ ಸಿದ್ಧತೆಗೆ ಸಂಬಂಧಿಸಿದಂತೆ ಬುಧವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಸಮಾವೇಶದ ರೂಪುರೇಷೆ ಕುರಿತು ಚರ್ಚಿಸಲಾಯಿತು.

ನಗರದ ಹೊರವಲಯದ ಮಾದಾರ ಚನ್ನಯ್ಯ ಗುರುಪೀಠದ ಬಳಿ ನಡೆಯಲಿರುವ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಳ್ಳಲಿದ್ದಾರೆ.

'ದಾವಣಗೆರೆಯಲ್ಲಿ ಈಚೆಗೆ ನಡೆದ ಪ್ರಬಲ ಜಾತಿಯ ಮಹಾ ಅಧಿವೇಶನದಲ್ಲಿ ಕಾಂತರಾಜ ವರದಿಗೆ ಆಕ್ಷೇಪ ವ್ಯಕ್ತಪಡಿಸಲಾಗಿದೆ. ಜಾತಿ ಗಣತಿ ವರದಿ ಬಗ್ಗೆ ಈ ಪರಿಯ ಭಯ ಏಕೆ ಎಂಬುದು ಇನ್ನೂ ಅರ್ಥವಾಗುತ್ತಿಲ್ಲ. ಜಾತಿ ಗಣತಿ ವರದಿಯನ್ನು ಸರ್ಕಾರ ಸ್ವೀಕರಿಸಿ ಯಥಾವತ್ತಾಗಿ ಜಾರಿಗೊಳಿಸಬೇಕು. ಸರ್ಕಾರದ ಮೇಲೆ ಒತ್ತಡ ತರುವ ಉದ್ದೇಶದಿಂದ ಸಮಾವೇಶ ಆಯೋಜಿಸಲಾಗಿದೆ' ಎಂದು ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ ಸಭೆಯ ನಂತರ ವಿವರಿಸಿದರು.

'ಪ್ರಬಲ ಜಾತಿಗಳ ದಬ್ಬಾಳಿಕೆಗೆ ಪ್ರತಿರೋಧ ವ್ಯಕ್ತಪಡಿಸುವ ಅಗತ್ಯವಿದೆ. ಅಹಿಂದ ವರ್ಗಕ್ಕೆ ಅಧಿಕಾರ ನೀಡದವರಿಗೆ ಸಂದೇಶ ರವಾನಿಸಬೇಕಿದೆ. ಸಮಾವೇಶ ಶೋಷಿತ ಸಮುದಾಯಗಳ ಶಕ್ತಿ ಪ್ರದರ್ಶನ ವಾಗಬೇಕು. ತಾಲ್ಲೂಕು ಮಟ್ಟದಲ್ಲಿ ಸಮಿತಿ ರಚಿಸಿ ಜನರನ್ನು ಕರೆ ತರಲಾಗುವುದು' ಎಂದು ಅವರು ಮಾಹಿತಿ ನೀಡಿದರು.

ಉನ್ನತ ಶಿಕ್ಷಣ ಪರಿಷತ್‌ಗೆ ಎಂಟು ತಜ್ಞರ ನೇಮಕ

ಬೆಂಗಳೂರು: ರಾಜ್ಯ ಉನ್ನತ ಶಿಕ್ಷಣ ಪರಿಷತ್‌ಗೆ ಎಂಟು ತಜ್ಞರನ್ನು ನಾಮನಿರ್ದೇಶನ ಮಾಡಿ ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ವಿಶ್ರಾಂತ ಕುಲಪತಿಗಳಾದ ರಾಜಾಸಾಬ್, ಹಿ.ಚಿ.ಬೋರಲಿಂಗಯ್ಯ, ರಾಮಚಂದ್ರಗೌಡ, ಎಂ.ಎಸ್. ಸುಭಾಷ್, ನಿವೃತ್ತ ಕುಲಸಚಿವೆ ಸುನಂದಮ್ಮ, ಶಿಕ್ಷಣ ತಜ್ಞರಾದ ಜಯರಾಂ ಮೇಲುಕೋಟೆ, ದೇವಿಕಾ ಪಿ. ಮಾದಳ್ಳಿ, ದಿನೇಶ್ ಕುಮಾರ್ ಆಳ್ವ ಉನ್ನತ ಶಿಕ್ಷಣ ಪರಿಷತ್‌ಗೆ ನೇಮಕಗೊಂಡವರು.

ಪಿಎಸ್‌ಐ ಅಕ್ರಮ: ಶಾಸಕ ಯತ್ನಾಳ ಗೈರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ 545 ಹುದ್ದೆಗಳ ನೇಮಕಾತಿ ಅಕ್ರಮ ಪ್ರಕರಣದ ವಿಚಾರಣೆ ನಡೆಸುತ್ತಿರುವ ನಿವೃತ್ತ ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ಏಕಸದಸ್ಯ ಆಯೋಗವು ಬುಧವಾರ ಕೆಲವರ ಹೇಳಿಕೆ ದಾಖಲಿಸಿಕೊಂಡಿತು. ಕೆಲವರು ಖುದ್ದು ವಿಚಾರಣೆಗೆ ಹಾಜರಾದರೆ, ಕೆಲವರು ವಕೀಲರ ಮೂಲಕ ಮಾಹಿತಿ ಕಳುಹಿಸಿದ್ದರು.

ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಬಿಜೆಪಿ ಶಾಸಕರಾದ ಸಿ.ಎನ್.ಅಶ್ವತ್ಥನಾರಾಯಣ, ಬಸನಗೌಡ ಪಾಟೀಲ ಯತ್ನಾಳ, ಮಾಜಿ ಶಾಸಕ ಬಸವರಾಜ ದಢೇಸೂಗುರು ಅವರಿಗೆ ಆಯೋಗ ಸಮನ್ಸ್ ಜಾರಿ ಮಾಡಿತ್ತು. ಹಗರಣದ ದಾಖಲೆಗಳಿರುವ ಬಗ್ಗೆ ಹೇಳಿಕೆ ನೀಡಿದ್ದವರಿಗೆ ನೋಟಿಸ್ ಜಾರಿ ಮಾಡಲಾಗಿತ್ತು.

ವಿಚಾರಣೆಗೆ ಹಾಜರಾಗದ ಯತ್ನಾಳ ಅವರಿಗೆ ಆಯೋಗ ಎರಡನೇ ಸಮನ್ಸ್ ಜಾರಿ ಮಾಡಿದೆ. ಕುಮಾರಸ್ವಾಮಿ, ಅಶ್ವತ್ಥನಾರಾಯಣ ಪರವಾಗಿ ವಕೀಲರು ಹಾಜರಾಗಿ ಲಿಖಿತ ಹೇಳಿಕೆ ಸಲ್ಲಿಸಿದರು. ಪಿಎಸ್‌ಐ ಅಕ್ರಮ ಪ್ರಕರಣದ ಕುರಿತು ಹೇಳಿಕೆ ನೀಡಿದ್ದ ದಢೇಸೂಗುರು ಹಾಜರಾಗಿ ಹೇಳಿಕೆ ನೀಡಿದರು.

ಸ್ಪರ್ಧಾವಾಣಿ ಓದಿರಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ

ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023
ದೂರವಾಣಿ: 080-2955 7021, ಇ–ಮೇಲ್: pdksaps@gmail.com

ಸಂಖ್ಯೆ : ಕೆಎಸ್ಎಪಿಎಸ್/ಪಿಆರ್‌ಸಿ/13/2023–24 ದಿನಾಂಕ :22.12.2023

ಇ–ಸಂಗ್ರಹಣ ವೇದಿಕೆ ಮೂಲಕ ಟೆಂಡರ್ ಆಹ್ವಾನ ಪ್ರಕಟಣೆ

ವಿವಿಧ ಬಗೆಯ ಲ್ಯಾಪ್‌ಟಾಪ್‌ಗಳು ಮತ್ತು ಪ್ರಿಂಟರ್ಸ್‌ಗಳನ್ನು ಸರಬರಾಜು ಮಾಡುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **16.01.2024ರ ಸಂಜೆ 5.30 ಗಂಟೆಯವರೆಗೆ.** ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ವೆಬ್‌ಸೈಟ್ **https://kppp.karnataka.gov.in**

ಸಹಿ/– ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ

ವಾಸಾಸಂಇ/ವಾಪ್ರ/ಜಿಎ/2726/2023–24

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ

ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023
ದೂರವಾಣಿ: 080-2955 7021, ಇ–ಮೇಲ್: pdksaps@gmail.com

ಸಂಖ್ಯೆ : ಕೆಎಸ್ಎಪಿಎಸ್/ಪಿಆರ್‌ಸಿ/09/2023–24 ದಿನಾಂಕ :21.12.2023

ಇ–ಸಂಗ್ರಹಣ ವೇದಿಕೆ ಮೂಲಕ ಟೆಂಡರ್ (ದ್ವಿಲಕೋಟೆ) ಕಾಲ್–3 ಆಹ್ವಾನ ಪ್ರಕಟಣೆ

ವಿವಿಧ ಬಗೆಯ DBS Collection Kit ಗಳನ್ನು ಸರಬರಾಜು ಮಾಡುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ (ದ್ವಿಲಕೋಟೆ) ಕಾಲ್–3 ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **06.01.2024ರ ಸಂಜೆ 5.30 ಗಂಟೆಯವರೆಗೆ.** ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ವೆಬ್‌ಸೈಟ್ **https://kppp.karnataka.gov.in**

ಸಹಿ/– ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ

ವಾಸಾಸಂಇ/ವಾಪ್ರ/ಜಿಎ/2727/2023–24

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ನಂ. 16–ಡಿ, ಡಿ. ದೇವರಾಜ ಅರಸು ಭವನ, 3ನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052. ಫೋನ್:080–29505520, 080–29505530
ಇ–ಮೇಲ್: bcdbng@kar.nic.in / bcwd.adm2021@gmail.com

ಸಂಖ್ಯೆ:BCWD/EST-9/CR-03-2023-24 ದಿನಾಂಕ:28.12.2023

ಅಲ್ಪಾವಧಿ ಟೆಂಡರ್ ಪ್ರಕಟಣೆ [ಇ–ಟೆಂಡರ್ ಮೂಲಕ ಮಾತ್ರ]

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಹೊರಸಂಪನ್ಮೂಲ ಏಜೆನ್ಸಿಯಿಂದ ಕಚೇರಿಗೆ ಸಿಬ್ಬಂದಿಯನ್ನು ಭರ್ತಿ ಮಾಡಲು ಟೆಂಡರ್‌ಗಳನ್ನು ಅಹ್ವಾನಿಸಿದೆ. ವಿವರಗಳಿಗೆ **https://kppp.karnataka.gov.in** ವೆಬ್‌ಸೈಟ್ ವಿಳಾಸವನ್ನು ನೋಡಬಹುದಾಗಿದೆ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **29.01.2024 ರಂದು ಸಂಜೆ 4.30 ಗಂಟೆಯವರೆಗೆ.**

ಸಹಿ/–
(ಟೆಂಡರ್ ಹೊರಡಿಸುವ ಪ್ರಾಧಿಕಾರಿಗಳು)
ಜಂಟಿ ನಿರ್ದೇಶಕರು (ಆಡಳಿತ)

ವಾಸಾಸಂಇ/ವಾಪ್ರ/ಜಿಎ/2725/2023–24

ಕರ್ನಾಟಕ ಸರ್ಕಾರ GOVERNMENT OF KARNATAKA

ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ.

Cantonment Area, Director:8147796529, PA: 8147796539,
e-mail : vimsballaridirector@karnataka.gov.in , directorvimsballari@gmail.com
website: vims.karnataka.gov.in

No.VIMS/SUP/TENDER/05/2023-24 DATE: 22/12/2023.

ಇ–ಟೆಂಡರ್ ಅಧಿಸೂಚನೆ

ವಿಮ್ಸ್ ಸಂಸ್ಥೆ, ಬಳ್ಳಾರಿಯ **PROVIDING SERVICES OF DATA ENTRY OPERATORS FOR VIMS, BALLARI COMBINED GROUP OF COLLEGE & HOSPITALS FOR 2023-24 VIMS, Ballari.** ಸೇವೆಗಾಗಿ 05 ತಿಂಗಳ ಅವಧಿಗೆ ಮತ್ತು ಹೆಚ್ಚುವರಿಯಾಗಿ 02 ತಿಂಗಳ ಅವಧಿಗೆ ವಿಸ್ತರಿಸಬಹುದಾದ ಅವಧಿಗೆ 160 ಸಂಖ್ಯೆಯ ಮಾನವ ಸಂಪನ್ಮೂಲ ಒದಗಿಸಲು ಕೆ.ಟಿ.ಪಿ.ಪಿ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ದ್ವಿ–ಬಿಡ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್:**https://kppp.karnataka.gov.in** ಮೂಲಕ ಅರ್ಹ ಬಿಡ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ 06/01/2024ರ ಸಂಜೆ 5.00 ಗಂಟೆ ಇರುತ್ತದೆ, ಆಸಕ್ತಿಯುಳ್ಳ ಸರಬರಾಜುದಾರರು ಟೆಂಡರ್‌ಸಲ್ಲಿಸಲು ಕೋರಿದೆ ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲೆ ತಿಳಿಸಿದ ವೆಬ್‌ಸೈಟ್ ಮತ್ತು **website:https://vims.karnataka.gov.in** ಗಳಲ್ಲಿ ಪಡೆಯಲು ಕೋರಿದೆ. ಸದರಿ ಟೆಂಡರಿನ ಒಟ್ಟು ಅಂದಾಜು ಮೊತ್ತ **ರೂ.199.00** ಲಕ್ಷಗಳು ಇರುತ್ತದೆ.

ಸಹಿ/– ನಿರ್ದೇಶಕರು, ವಿಮ್ಸ್, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/648/ಕೆಎಸ್ಎಂಸಿಎ/2023–24

ಪುರಸಭಾ ಕಾರ್ಯಾಲಯ, ಚಿಕ್ಕಬಾಣಾವರ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
Email: itstaff_ulb_ckbanavara@yahoo.com
Website: https://chikkabanavaratown.mrc.gov.in

ಸಂಖ್ಯೆ: ಪು.ಕಾ.ಚಿ./ತಾ.ವಿ/ಟೆಂಡರ್/ಸಿಆರ್/04/2023–24 ದಿನಾಂಕ: 26.12.2023

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮುಖ್ಯಾಧಿಕಾರಿ, ಪುರಸಭೆ, ಚಿಕ್ಕಬಾಣಾವರ, ಬೆಂಗಳೂರು ನಗರ ಜಿಲ್ಲೆ, ಇವರಿಂದ **2023–24ನೇ ಸಾಲಿನ ಪುರಸಭಾ ನಿಧಿ ಅನುದಾನದಲ್ಲಿ** ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಪ್ರಕಾರ ಟೆಂಡರನ್ನು ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಕೆ.ಪಿ.ಪಿ.–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಕರೆಯಲಾಗಿರುತ್ತದೆ.

ಕ್ರ.ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	DMA/2023-24/RT/ WORK_INDENT10654	200.00	3,00,000/-

(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. (2) ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: **11.01.2024ರಂದು ಸಂಜೆ 4.30 ಗಂಟೆಯವರೆಗೆ.** (3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **12.01.2024ರಂದು ಸಂಜೆ 5.00 ಗಂಟೆಗೆ** ನಿಗದಿಪಡಿಸಲಾಗಿರುತ್ತದೆ. (4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **22.01.2024ರಂದು ಬೆಳಿಗ್ಗೆ 11.00 ಗಂಟೆಗೆ.** (5) ಹೆಚ್ಚಿನ ವಿವರಗಳನ್ನು ಪುರಸಭಾ ಕಛೇರಿಯ ತಾಂತ್ರಿಕ ಶಾಖೆಯಿಂದ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ ಹಾಗೂ ಯಾವುದೇ ತಿದ್ದುಪಡಿ ಮತ್ತು ಬದಲಾವಣೆಯಿದ್ದಲ್ಲಿ ಕೆ.ಪಿ.ಪಿ. ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಯುವುದು.

ಸಹಿ/–
ಆಡಳಿತಾಧಿಕಾರಿಗಳು, ಪುರಸಭೆ, ಚಿಕ್ಕಬಾಣಾವರ ಹಾಗೂ ಉಪ ವಿಭಾಗಾಧಿಕಾರಿಗಳು ಬೆಂಗಳೂರು ಉತ್ತರ ಉಪ ವಿಭಾಗ

ಸಹಿ/–
ಮುಖ್ಯಾಧಿಕಾರಿ
ಪುರಸಭೆ, ಚಿಕ್ಕಬಾಣಾವರ

DIPR/CP/YC/2722/2023-24

ಕೇಂದ್ರೀಕೃತ ದಾಖಲಾತಿ ಘಟಕ, ಆಯುಕ್ತರ ಕಛೇರಿ,

ಶಾಲಾ ಶಿಕ್ಷಣ ಇಲಾಖೆ, ಕೆಂಪೇಗೌಡ ರಸ್ತೆ, ಬೆಂಗಳೂರು–560009,
ಇ–ಮೇಲ್ : cackarnataka1@gmail.com ದೂ.22228805,22483140,22483145

ಸಂಖ್ಯೆ: ಸಿ.ಎ.ಸಿ–05/ಬಿ.ಇಡಿ.ದಾ./12/2023–24 ದಿನಾಂಕ: 27.12.2023

ಪ್ರಕಟಣೆ

2023–24ನೇ ಸಾಲಿನ ಬಿ.ಇಡಿ ಕೋರ್ಸಿನ ವ್ಯಾಸಂಗಕ್ಕಾಗಿ ಸರ್ಕಾರಿ ಕೋಟಾದ ಸೀಟುಗಳ ದಾಖಲಾತಿಗಾಗಿ ಸೀಟು ಹಂಚಿಕೆಯ ಮೊದಲ ಪಟ್ಟಿಯನ್ನು ದಿನಾಂಕ : **28.12.2023** ರಂದು ಅಪರಾಹ್ನ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಸೀಟು ಹಂಚಿಕೆಯಾದ ಅಭ್ಯರ್ಥಿಗಳು Online ನಲ್ಲಿ ಚಲನ್ ಡೌನ್‌ಲೋಡ್ ಮಾಡಿಕೊಂಡು ದಾಖಲಾತಿ ಶುಲ್ಕವನ್ನು **SBI** ಬ್ಯಾಂಕಿನಲ್ಲಿ ಪಾವತಿಸಿ ದಿನಾಂಕ : **30.12.2023** ರಿಂದ **03.01.2024** ರ ಒಳಗಾಗಿ ಚಲನ್ ಪ್ರತಿಯನ್ನು ಸಂಬಂಧಿಸಿದ ನೋಡಲ್ ಸೆಂಟರ್‌ನಲ್ಲಿ ಸಲ್ಲಿಸಿ ಪ್ರವೇಶಾತಿ ಪತ್ರವನ್ನು (Admission Slip) ಪಡೆಯುವುದು. **ಇಲಾಖಾ ವೆಬ್‌ಸೈಟ್ : www.schooleducation.karnataka.gov.in**

ವಿ.ಸೂ : ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳಿಗೆ ವೈಯಕ್ತಿಕವಾಗಿ ಮಾಹಿತಿ ನೀಡಲಾಗುವುದಿಲ್ಲ.

ಸಹಿ/– ವಿಶೇಷಾಧಿಕಾರಿ
ಕೇಂದ್ರೀಕೃತ ದಾಖಲಾತಿ ಘಟಕ

ವಾಸಾಸಂಇ/ವಾಪ್ರ/2724/ಶಿರಡಿ ಸಾಯಿ/2023–24

OFFICE OF THE DISTRICT SURGEON, DISTRICT HOSPITAL, Dharwad.

Phone No: 836-2741277 Email:dsdharwad@gmail.com

No: DHD/SUP/Orthoimplants/01/2023-24 dated: 26-12-2023

TENDER NOTIFICATION

Sub: Supply of Ortho implants on rate contract basis to 12 months District Hospital Dharwad
Ref: Approval of Deputy Commissioner, Dharwad dist.

District Surgeon, District hospital, Dharwad here by invites E- tenders from primary manufacturers, authorized distributor and suppliers for the supply of Ortho Implants on Rate Contract basis as per KTPP Act 1999 & 2000. Items described and listed in detail in this tender document. Rate contract is for a period of 12 months from the date of issue of rate contract award.

1	Tender No	DHFWS/2023-24/IND0360
2	Last date & Time for submission of Tender	12-01-2024, 05.00 PM
3	Date & Time of opening of Technical bid	17-01-2024 11.00 AM
4	Date & Time of opening of Financial Bid	On/After 20-01-2024 10.00 AM
5	EMD Amount (Minimum)	Rs: 37,500/-
6	Opening of tenders & address Contact Details for communication	Office of District Surgeon, District hospital, Dharwad 0836-2748374 9845516199

Note: In the event of the specified date of opening of First Cover (Technical Bid) being declared a holiday for the purchaser, the First Cover (Technical Bid) shall be opened on the next working day at the same time and venue.

Interested eligible Registered in www.kppp.karnataka.gov.in portal bidders can download the bid documents with visiting the web site.

Sd/- District Surgeon
District hospital, Dharwad

DIPR/Dwd/ 631/DeshpandePublicity/2023-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ (ಯಲಹಂಕ ವಿಭಾಗ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಅಮೃತಹಳ್ಳಿ, ಬ್ಯಾಟರಾಯನಪುರ, ಬೆಂಗಳೂರು – 560092

No. SADH(YLK) /TENDER/02/2023-24 Date: 27.12.2023

ಅಲ್ಪಾವಧಿ ಟೆಂಡರ್ ಅಧಿಸೂಚನೆ (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರಕಾರದ ಕರ್ನಾಟಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ (ಯಲಹಂಕ ವಿಭಾಗ), ಬಿಬಿಎಂಪಿ, ಬೆಂಗಳೂರು ಇವರು,ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಮತ್ತು ಅನುಭವ ವಿರುವ ವ್ಯಕ್ತಿ/ ಏಜೆನ್ಸಿ/ಸಂಸ್ಥೆಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಿರುವ ಉದ್ಯಾನವನಗಳ ನಿರ್ವಹಣೆಗೆ ಕೆ ಟಿ ಪಿ ಪಿ ಕಾಯ್ದೆ 2000 ನಿಯಮದನ್ವಯ ಟೆಂಡರ್ ಆಹ್ವಾನಿಸಿದೆ. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರಕಾರದ ಪಬ್ಲಿಕ್ ಪ್ರೊಕ್ಯೂರ್ಮೆಂಟ್ ಪೋರ್ಟಲ್ kppp.karnataka.govt.in/ ಪೋರ್ಟಲ್ ಮೂಲಕ ಸಲ್ಲಿಸಬಹುದು. ಕಾಮಗಾರಿಗೆ ಅರ್ಹತೆ ಪಡೆಯಲು ಟೆಂಡರ್ ಸೂಚನೆಗಳಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಟೆಂಡರ್ ದಾರರಿಗೆ ಸೂಚಿಸಲಾಗಿದೆ . (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ – ಕೆ ಡಬ್ಲ್ಯೂ –1, 2, 3 ಮತ್ತು 4).

ಕ್ರ. ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಗಳಲ್ಲಿ)
1	ಯಲಹಂಕ ವಲಯದ ಮೀಡಿಯನ್ಸ್‌ಗಳ ನಿರ್ವಹಣೆ ಮತ್ತು ಉದ್ಯಾನವನಗಳಿಗೆ, ಮೀಡಿಯನ್ಸ್ ಗಳಿಗೆ ಮತ್ತು ವೃತ್ತಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವ ಕಾಮಗಾರಿ. ಕಾಮಗಾರಿ ಮುಗಿಸಲು ನಿಗಧಿಪಡಿಸಿದ ಅವಧಿ : (7 ತಿಂಗಳುಗಳಲ್ಲಿ)	120.00	2,00,000/-
2	ಯಲಹಂಕ ವಿಧಾನ ಸಭಾ ಕ್ಷೇತ್ರದ ಉದ್ಯಾನವನಗಳ ನಿರ್ವಹಣೆ ಮತ್ತು ಉದ್ಯಾನವನಗಳಲ್ಲಿ Shredder ಗಾಗಿ ಕಾರ್ಮಿಕರನ್ನು ತೊಡಗಿಸಿಕೊಳ್ಳುವುದು. ಕಾಮಗಾರಿ ಮುಗಿಸಲು ನಿಗಧಿಪಡಿಸಿದ ಅವಧಿ : (8 ತಿಂಗಳುಗಳಲ್ಲಿ)	5.00	12,500/-
3	ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರದ ಉದ್ಯಾನವನಗಳ ನಿರ್ವಹಣೆ ಮತ್ತು ಉದ್ಯಾನವನಗಳಲ್ಲಿ Shredder ಗಾಗಿ ಕಾರ್ಮಿಕರನ್ನು ತೊಡಗಿಸಿಕೊಳ್ಳುವುದು. ಕಾಮಗಾರಿ ಮುಗಿಸಲು ನಿಗಧಿಪಡಿಸಿದ ಅವಧಿ : (8 ತಿಂಗಳುಗಳಲ್ಲಿ)	15.00	37,500/-

ವೇಳಾಪಟ್ಟಿ :
(1) ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡುವ ದಿನಾಂಕ : 30.12.2023 (2) ಪ್ರಿ ಬಿಡ್ ಮೀಟಿಂಗ್ ದಿನಾಂಕ : 08.01.2024, ಬೆಳಿಗ್ಗೆ 11.30 ಗಂಟೆಗೆ. (3) ಟೆಂಡರ್ ಮುಕ್ತಾಯದ ದಿನಾಂಕ : 16.01.2024 ಸಂಜೆ 4.30 ಗಂಟೆಗೆ. (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 18.01.2024, ಬೆಳಿಗ್ಗೆ 11.30 ಗಂಟೆ ನಂತರ. (5) ಆರ್ಥಿಕ ಬಿಡ್ ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಯ ನಂತರ.

ಸಹಿ/–
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಯಲಹಂಕ ವಲಯ)

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ:ಕಾಅ/ಪಂರಾಇವಿ/ಬೆಂನ/ಎಇ–2/ಟೆಂಡರ್/22/2023–24 ದಿನಾಂಕ: 27–12–2023

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ 2023–24ನೇ ಸಾಲಿನ ಜಿಲ್ಲಾ ಪಂಚಾಯತ್ ವಿವಿಧ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **04–01–2024 ರಂದು ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/2732/ಅಡ್ವರ್ಟೋರ್/2023–24

ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು –18. ದೂರವಾಣಿ: 26709689/ 26706775,
ಫ್ಯಾಕ್ಸ್: 26700801, E-mail: endowmentcommissioner@gmail.com

ಸಂಖ್ಯೆ: ಚಾರ್‌ಧಾಮ್ ಮಾನಸಸರೋವರ/ಸಿಆರ್/03/2023–24 ದಿನಾಂಕ: 26.12.2023

–:ಪತ್ರಿಕಾ ಪ್ರಕಟಣೆ:–

2023–24ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಕಾಶಿಯಾತ್ರೆಯನ್ನು ಕೈಗೊಂಡ 30000 ಯಾತ್ರಾರ್ಥಿಗಳಿಗೆ ಸರ್ಕಾರದಿಂದ ತಲಾ ರೂ.5000/–ಗಳಂತೆ ಸಹಾಯಧನವನ್ನು ನೀಡುವ ಸಂಬಂಧ ಅರ್ಜಿಗಳನ್ನು ದಿನಾಂಕ: 06.11.2023 ರಿಂದ 31.12.2023 ರವರೆಗೆ ಆಹ್ವಾನಿಸಲಾಗಿದ್ದ **ದಿನಾಂಕವನ್ನು 15.02.2024** ರವರೆಗೆ ವಿಸ್ತರಿಸಲಾಗಿದೆ.

ದಿನಾಂಕ: 06.11.2023ರ ಪೂರ್ವದಲ್ಲಿ (ಅರ್ಜಿ ಆಹ್ವಾನಿಸುವ ಮುನ್ನ) ಕಾಶಿಯಾತ್ರೆ ಕೈಗೊಂಡಿರುವ ಯಾತ್ರಾರ್ಥಿಗಳು ಯಾತ್ರೆ ಕೈಗೊಂಡಿರುವ ಸಂಬಂಧ ಪ್ರವಾಸದ ಟಿಕೇಟ್, ಫೋಟೊ, (Selfie) ಆಧಾರ್ ಪ್ರತಿ ಮತ್ತು ಯಾತ್ರಾರ್ಥಿಯು ರೂ.50/–ಗಳ ಛಾಪಾ ಕಾಗದದಲ್ಲಿ ಈ ಹಿಂದೆ ಸಹಾಯಧನವನ್ನು ಪಡೆದಿಲ್ಲವೆಂದು ದೃಢೀಕರಣವನ್ನು ನೀಡತಕ್ಕದ್ದು.

–:ವಿಶೇಷ ಸೂಚನೆ:–

ಈಗಾಗಲೇ ಕೈಲಾಸ ಮಾನಸ ಸರೋವರ, ಚಾರ್‌ಧಾಮ್ ಮತ್ತು ಕಾಶಿ ಯಾತ್ರ ಕೈಗೊಂಡಿರುವ ಬಗ್ಗೆ, ಸರ್ಕಾರದ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಿರುವ ಯಾತ್ರಾರ್ಥಿಗಳು ತಮ್ಮ ಆಧಾರ್ ಸಂಖ್ಯೆಯು ತಮ್ಮ ಬ್ಯಾಂಕ್ ಖಾತೆಗೆ ಲಿಂಕ್ (Seeding)ಆಗಿರುವ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು.

ಅರ್ಜಿದಾರರು ನಿಗದಿತ ದಿನಾಂಕದೊಳಗೆ ಆಧಾರ್ ಸಂಖ್ಯೆಯು ಬ್ಯಾಂಕ್ ಖಾತೆಗೆ ಲಿಂಕ್ (Seeding) ಆಗದಿದ್ದಲ್ಲಿ ಅಂತಹವರ ಅರ್ಜಿಯನ್ನು ಸಹಾಯಧನಕ್ಕೆ ಪರಿಗಣಿಸುವುದಿಲ್ಲ.

ಸಹಿ/– ಆಯುಕ್ತರು
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಚಾಮರಾಜಪೇಟೆ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/2728/ಆಕಾರ್/2023–24

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಸಂಪೂರ್ಣವಾಗಿ ಕರ್ನಾಟಕ ರಾಜ್ಯ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಕ್ರ. ಸಂ: ಮುಇಂ(ವಿ)/ಚಿವ/ಕಾನಿಇಂ(ಸಿ)/ಎಫ್–2&3/2023–24/6992 ದಿನಾಂಕ: 20-12-2023

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (2ನೇ ಕರೆ) (ಕೆಪಿಪಿಪಿ ಮೂಲಕ ಮಾತ್ರ)

ಮುಖ್ಯ ಇಂಜಿನಿಯರ್(ವಿ)., ಬೆವಿಕಂ, ಚಿತ್ರದುರ್ಗ ಇವರು **ಚಿತ್ರದುರ್ಗ ವಲಯದ** ಕಾರ್ಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಸಿವಿಲ್ ಕಾಮಗಾರಿಗಳಿಗೆ ಕೆಪಿಪಿಪಿ ಅಡಿಯಲ್ಲಿ (ದ್ವಿ ಲಕೋಟೆ ಪದ್ಧತಿ) ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಪಟ್ಟಿ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ವರ್ಗ
1	**ಹೊಸದುರ್ಗ ತಾಲ್ಲೂಕಿನ ಬೆಲಗೂರು ಗ್ರಾಮದ** ಬೆವಿಕಂ ಕಾಲೋನಿಯಲ್ಲಿ ಬೆವಿಕಂ ಶಾಖಾ ಕಛೇರಿ ಕಟ್ಟಡ ನಿರ್ಮಿಸುವ ಕಾಮಗಾರಿ.	34.00	68,000/-	ಇತರೆ
2	**ಚಿತ್ರದುರ್ಗ ವಿಭಾಗೀಯ ಕಛೇರಿ ಕಟ್ಟಡ** ಎರಡನೇ ಮಹಡಿಯಲ್ಲಿ ಹೆಚ್ಚುವರಿ–ಯಾಗಿ ದಾಖಲೆಗಳ ಕೊಠಡಿ ನಿರ್ಮಿಸುವ ಕಾಮಗಾರಿ.	15.00	18,750/-	ಎಸ್.ಟಿ
3	**ಮಧುಗಿರಿ ತಾಲ್ಲೂಕಿನ ಕೊಡಿಗೇನ–ಹಳ್ಳಿಯ** ಬೆವಿಕಂ ಕಾಲೋನಿಯಲ್ಲಿ ಬೆವಿಕಂ ಉಪವಿಭಾಗೀಯ ಕಛೇರಿ ಕಟ್ಟಡ ನಿರ್ಮಿಸುವ ಕಾಮಗಾರಿ.	115.00	2,00,000/-	ಇತರೆ
4	**ಬೆವಿಕಂ ಗುಬ್ಬಿ ಕಾಲೋನಿಯಲ್ಲಿ** ಕಾ& ಪಾ ಘಟಕ–1 & 2, ಕಾಮಗಾರಿ ಘಟಕ ಮತ್ತು ಇತರೆ ಕೆಲಸಗಳ ಉಳಿಕೆ ಕಾಮಗಾರಿ.	27.50	55,000/-	ಇತರೆ
5	**ಗುಬ್ಬಿ ಬೆವಿಕಂ ಕಾಲೋನಿಯಲ್ಲಿರುವ** ಉಪ ವಿಭಾಗೀಯ ಕಛೇರಿ ಕಟ್ಟಡಕ್ಕೆ ಹೊಂದಿ ಕೊಂಡಂತೆ, ಶೌಚಾಲಯ–ಗಳ ಅಭಿವೃದ್ಧಿ ಹಾಗೂ ನೀರಿನ ಸರಬರಾಜು ಕಾಮಗಾರಿ.	10.00	25,000/-	ಇತರೆ

ಇಚ್ಛೆಯುಳ್ಳ ಅರ್ಹ ಗುತ್ತಿಗೆದಾರರು ಕರ್ನಾಟಕ ಸರ್ಕಾರದ ಕೆಪಿಪಿಪಿ ವೆಬ್‌ಸೈಟ್ **https://kppp.karnataka.gov.in** ಅಡಿಯಲ್ಲಿ ದಿನಾಂಕ: **29.12.2023**ರ ನಂತರ ತಮ್ಮ ಬಳಕೆ ಐ.ಡಿ ರಿಜಿಸ್ಟರ್ ಮಾಡಿ ಲಾಗಿನ್ ಆಗುವ ಮೂಲಕ ಟೆಂಡರ್‌ನಲ್ಲಿ ಭಾಗವಹಿಸಲು ಕೋರಲಾಗಿದೆ.

ಸಹಿ/– ಮುಖ್ಯ ಇಂಜಿನಿಯರ್ (ವಿ)
ಕಾ ಮತ್ತು ಪಾ ವಲಯ,
ಬೆವಿಕಂ, ಚಿತ್ರದುರ್ಗ.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೂವಿನಹಡಗಲಿ.

ಸಂಖ್ಯೆ:ಕೃಉಮಾಸ/ಹೂ/376/2023–24 ದಿನಾಂಕ:21/12/2023

–: ಸಂಕ್ಷಿಪ್ತ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ :–

ಹೂವಿನಹಡಗಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2023–24ನೇ ಸಾಲಿನ ಆರ್.ಐ.ಡಿ.ಎಫ್–29ನೇ ಯೋಜನೆಯಡಿಯಲ್ಲಿ ಮುಖ್ಯ ಮಾರುಕಟ್ಟೆಯ ವಿಸ್ತೃತ ಜಾನುವಾರು ಮಾರುಕಟ್ಟೆಯಲ್ಲಿ ಸಿ.ಸಿ ರಸ್ತೆ ಹಾಗೂ ಚರಂಡಿ ನಿರ್ಮಿಸುವ ಕಾಮಗಾರಿಯನ್ನು KW-3 ಪ್ರಕಾರ **ದ್ವಿ ಲಕೋಟೆ** ಪದ್ಧತಿ ಮೂಲಕ ಟೆಂಡರ್ ಪ್ರಕಟಣೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ, ಭರ್ತಿ ಮಾಡಿದ ಟೆಂಡರ್ ಫಾರಂ ಸ್ವೀಕರಿಸುವ ಕೊನೆಯ ದಿನಾಂಕ: **08–01–2024 ಸಂಜೆ 4.00 ಗಂಟೆಯವರೆಗೆ.** ಫಾರಂ ಫೀ, ಇ.ಎಂ.ಡಿ., ಷರತ್ತು ನಿಬಂಧನೆ ಹಾಗೂ ಇತರೆ ಮಾಹಿತಿಯನ್ನು ಇ–ಪೋರ್ಟಲ್ ವೆಬ್‌ಸೈಟ್‌ನಲ್ಲಿ (http:// www.eproc.karnataka.gov.in) ಅಥವಾ ಕೆಲಸದ ವೇಳೆಯಲ್ಲಿ ಕಚೇರಿಯಿಂದ ಪಡೆಯಬಹುದಾಗಿರುತ್ತದೆ. (ದೂರವಾಣಿ ಸಂ: **08399–240234**)

ಸಹಿ/– ಕಾರ್ಯದರ್ಶಿ,
ಕೃ.ಉ.ಮಾ.ಸ., ಹೂವಿನಹಡಗಲಿ.

ಸಹಿ/– ಆಡಳಿತಾಧಿಕಾರಿಗಳು,
ಕೃ.ಉ.ಮಾ.ಸ., ಹೂವಿನಹಡಗಲಿ.

ವಾ.ಸಾ.ಇ./ವಿಜಯನಗರ/291/2023–24/ದೇಶಪಾಂಡೆ ಪಬ್ಲಿಸಿಟಿ

ಕರ್ನಾಟಕ ಸರ್ಕಾರ
(ಪಂಚಾಯತ್ ರಾಜ್ ಇಂಜನೀಯರಿಂಗ್ ಇಲಾಖೆ)

ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ,ವಿಜಯಪುರ

ದೂರವಾಣಿ ಸಂ:08352–277816, ಫ್ಯಾಕ್ಸ್:08352–277817
ಇ–ಮೇಲ್:zpebjp9@yahoo.co.in

ಸಂಖ್ಯೆ:ಕಾಇಂ/ಪಂ.ರಾ.ಇ.ವಿ/ವಿಜ/ಇಪ್ರಾ/ಟೆಂಡರ್/2023–24/1950 ದಿನಾಂಕ:26.12.2023

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟಿ ಪದ್ಧತಿ)

ಕಾರ್ಯನಿರ್ವಾಹಕ ಇಂಜನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2022–23 ನೇ ಸಾಲಿನ 8443 ಠೇವಣಿ ವಂತಿಕೆ ಕೆ.ಪಿ.ಎಸ್. ಶಾಲಾ ಕಟ್ಟಡ ನಿರ್ಮಾಣ) ಯೋಜನೆಯಡಿಯಲ್ಲಿ ಈ ಕಚೇರಿಯ ಟೆಂಡರ ಪ್ರಕಟಣೆ **ಸಂಖ್ಯೆ: 1950 ದಿನಾಂಕ: 26.12.2023** ರಂತೆ ರೂ. 64.17, 93.05, 111.55 ಹಾಗೂ ರೂ.103.52 ಲಕ್ಷಗಳ ಕಾಮಗಾರಿಗಳನ್ನು ಇ–ಟೆಂಡರ್‌ನ್ನು ಅಹ್ವಾನಿಸಿದ್ದು. ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ www.kppp.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ. ವಿಭಾಗ, ವಿಜಯಪುರ.

ವಾಸಾಸಂಇ/ವಿಜಯಪುರ/353/ಕೆಎಸ್ಎಂಸಿಎ/2023–24

ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
"ಬೀಜ ಭವನ", ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು–24
ಫೋನ್: 080–23415652/5656, ಫ್ಯಾಕ್ಸ್: 080–23415895

ಸಂ:ಕರಾಬೀನಿನಿ/ಕಾರ್ಯಕಾರಿ/3765/2023–24 ದಿನಾಂಕ: 27.12.2023

ನೋಟಿಸು

ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ ಈಕ್ವಿಟಿ ಷೇರುದಾರರ ಗಮನಕ್ಕಾಗಿ

ದಿನಾಂಕ 17.10.2023 ರಂದು ನಡೆದ ನಿಗಮದ 310ನೇ ನಿರ್ದೇಶಕ ಮಂಡಳಿ ಸಭೆಯ ನಿರ್ಣಯದಂತೆ, ನಿಗಮದ ಬೀಜೋತ್ಪಾದಕ ಈಕ್ವಿಟಿ ಷೇರುದಾರರು 2015–16ನೇ ಸಾಲಿನಿಂದ 2021–22ರ ವರೆಗೆ ಅಂದರೆ ಸತತವಾಗಿ 7 ವರ್ಷಗಳಿಂದ ಷೇರು ಬಂಡವಾಳದ ಮೇಲಿನ ಡಿವಿಡೆಂಡ್ ಮೊತ್ತವನ್ನು ನಗದೀಕರಿಸಿಕೊಳ್ಳದಿರುವ ಡಿವಿಡೆಂಡ್ ಮೊತ್ತ ಮತ್ತು ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ (Investor Education and Protection Fund Authority-IEPF) ವರ್ಗಾವಣೆ ಮಾಡಬೇಕಾಗಿರುವ ಹಿನ್ನೆಲೆಯಲ್ಲಿ ಷೇರುದಾರರಿಗೆ ಮನವಿ ಪತ್ರದೊಂದಿಗೆ **KYC** ದಾಖಲೆ/ಮಾಹಿತಿಯನ್ನು ದಿನಾಂಕ 30.03.2024ರ ಒಳಗಾಗಿ ಒದಗಿಸಲು ತಿಳಿಸಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಂಪನಿಯ ವೆಬ್‌ಸೈಟ್ **www.karnataka.gov.in/ksscl** ಅಥವಾ ನೋಂದಾಯಿತ ಕಛೇರಿ/ಕೇಂದ್ರ ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸಹಿ/– (ಹೆಚ್.ಎಸ್.ದೇವರಾಜ್) ವ್ಯವಸ್ಥಾಪಕ ನಿರ್ದೇಶಕರು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹೊಸನಗರ.

ಮುಖ್ಯ ಮಾರುಕಟ್ಟೆ ಪ್ರಾಂಗಣ, ಮಾವಿನಕೊಪ್ಪ,
ಹೊಸನಗರ–577418, ಶಿವಮೊಗ್ಗ ಜಿಲ್ಲೆ,
ಇ–ಮೇಲ್: apmchosanagar@rediffmail.com & apmchosanagar@gmail.com ದೂ: 08185–295042, 295043.

ಟೆಂಡರ್ ಪ್ರಕಟಣೆ ಸಂಖ್ಯೆ:ಕೃ.ಉ.ಮಾ.ಸ (ಹೊ):ಅಭಿವೃದ್ಧಿ: 673 /2023–24
ದಿನಾಂಕ:21/12/2023.

"ಸಂಕ್ಷಿಪ್ತ ಟೆಂಡರ್ ಪ್ರಕಟಣೆ"

ಲೋಕೋಪಯೋಗಿ ಇಲಾಖೆ ನೋಂದಾಯಿತ KW-4 ರನ್ವಯ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (www.kppp.karnataka.gov.in) ಮೂಲಕ ಹೊಸನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ NABARD RIDF -29 ಯೋಜನೆಯಡಿಯಲ್ಲಿ ರಿಪ್ಪನ್‌ಪೇಟೆ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಸಿ.ಸಿ.ರಸ್ತೆ, ಸಿ.ಸಿ ಬಾಕ್ಸ್ ಚರಂಡಿ ಮತ್ತು ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಕಾಮಗಾರಿಯ ಟೆಂಡರ್ ಆಹ್ವಾನಿಸಲಾಗಿದೆ. (I.No. 184, KW-4) ಟೆಂಡರಿಗಿಟ್ಟ ಮೊತ್ತ ರೂ. 2,08,82,625.00 ಇಎಂಡಿ ಮೊತ್ತ ರೂ. 3,13,250.00 ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿ: 27–12–2023 ರಿಂದ 10–01–2024 ಕಾಲಾವಧಿ 175 ದಿನಗಳು (ಮಳೆಗಾಲ ಹೊರತುಪಡಿಸಿ) ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ: 08185–295043) ಮಾಹಿತಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ (ಪ್ರ)
ಕೃ.ಉ.ಮಾ.ಸ., ಹೊಸನಗರ.

ಸಹಿ/– ಆಡಳಿತಾಧಿಕಾರಿಗಳು
ಕೃ.ಉ.ಮಾ.ಸ., ಹೊಸನಗರ.

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/34/12/23–24/960

ಟ್ರಾಮಾಕೇರ್ ಕೇಂದ್ರ

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯುತ್ತ ಸಂಸ್ಥೆ)
ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು–560002
Website: www.teccbmcri.karnataka.gov.in | Tele: 080- 26802725
Email: sploffrtcc@gmail.com | traumacareblr123@gmail.com

ಸಂಖ್ಯೆ: ಟಿಸಿಸಿ/ಟೆಂಡರ್/21,22,23,24,25,26,27,28/2023–24 ದಿನಾಂಕ: 26.12.2023

ಇ–ಟೆಂಡರ್ ಅಧಿಸೂಚನೆ

ಟ್ರಾಮಾಕೇರ್ ಕೇಂದ್ರ, ಬೆಂವೈವಿಸಂಸಂ., ಬೆಂಗಳೂರು ಇಲ್ಲಿಗೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳಾದ **CATH Lab, Orthopedic OT Table, Neuro Navigation System, Laproscope + Neuroendoscope System, Ultrasound System, Lab Equipments- Automated Blood Clture System, Automated Culture Identification & AST Machines- 2 Nos.** ಗಳನ್ನು ಪೂರೈಸುವ ಮತ್ತು ಅಳವಡಿಸುವ ಸಂಬಂಧ ಪ್ರತ್ಯೇಕವಾಗಿ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿ, ಅಗತ್ಯವಿರುವ ಮಾಹಿತಿಗಳ ವಿವರ, ಇ.ಎಂ.ಡಿ ಮತ್ತು ಷರತ್ತು ಮುಂತಾದ ವಿವರಗಳನ್ನು **https://www.kppp.karnataka.gov.in** ಹಾಗೂ ನಮ್ಮ ಸಂಸ್ಥೆಯ **www.teccbmcri.karnataka.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಿ. ಆಸಕ್ತಿಯುಳ್ಳ ಟೆಂಡರ್‌ದಾರರು **https://www.kppp.karnataka.gov.in e-procurement portal** ನಲ್ಲಿ ನೋಂದಾಯಿಸತಕ್ಕದ್ದು. ನೋಂದಾವಣಿಗೆ ಅಗತ್ಯವಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನೋಡಬಹುದು.

ಟೆಂಡರ್‌ನ ಬಿಡ್‌ನ್ನು ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ	30.12.2023 ಸಂಜೆ 4:30ರ ನಂತರ
ಟೆಂಡರ್‌ನ ಬಿಡ್‌ನ ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ	29.01.2024 ಸಂಜೆ 4:00ರ ಒಳಗಾಗಿ
ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	01.02.2024 ಅಪರಾಹ್ನ 11:00 ಗಂಟೆಗೆ

ಹೆಚ್ಚಿನ ವಿವರಗಳಿಗಾಗಿ ವಿಶೇಷಾಧಿಕಾರಿಗಳು, ಟ್ರಾಮಾಕೇರ್ ಕೇಂದ್ರ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು ಇವರನ್ನು ಸಂಪರ್ಕಿಸಬಹುದು.

ಸಹಿ/–
ವಿಶೇಷಾಧಿಕಾರಿಗಳು,
ಟ್ರಾಮಾಕೇರ್ ಕೇಂದ್ರ

ವಾಸಾಸಂಇ/ವಾಪ್ರ/ಜಿಎ/2713/2023–24

The Printers (Mysore) Pvt. Ltd

Publishers of DECCAN HERALD, PRAJAVANI, SUDHA & MAYURA
No.7-12, Kumbalgodu Indl. Area, Mysore Road, Bangalore - 74

NEWSPRINT WASTE FOR SALE

Sealed Tenders are invited for the disposal of the following Newsprint wastes from our Press at Bangalore, Dharwad , Mangalore, Harihara, Mysore, Gulbarga and Hospet. For the period January to March 2024

Details	Location-wise quantity in MT per month						
	Bangalore	Dharwad	Mangalore	Harihara	Mysore	Gulbarga	Hospet
DH &PV Print waste & unsolds (Voucher & Office Copies)	20	9	3.5	3	4	3	3
Mixed Print & Folded waste	3	1.5	0.2	0.3	0.2	0.3	0.2
DH,PV, Sudha & Mayura White cut Peel waste	2.5	0.6	0.3	0.5	0.4	0.4	0.3
White Reel ends including core DH,PV, Sudha & Mayura	8	2.5	0.6	1	0.7	1	1
DH, PV, Sudha & Mayura Reel Wrappers/Miscellaneous sweep/Bale pattie waste	10	2	0.9	1.2	0.4	0.9	0.9
Sudha & Mayura Print waste & unsolds-Magazine	1	0.6	0.9	0.6	0.6	0.9	0.05
Miscellaneous Tissue/Mixed White waste/ Carton boxes	2.5	0.8	0.3	0.4	0.2	0.5	0.2

For clarification, contact Procurement Head at **25880340/430.** Sealed Tenders/mail may be addressed to Procurement Head and sent to the above address **within 7 days** from the date of this advertisement.

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಆಲೂರು–573213, ಹಾಸನ ಜಿಲ್ಲೆ

ದೂ.ಸಂಖ್ಯೆ: 08170–218246, Website: http://www.alurtown.mrc.gov.in/ email: townpanchayath.alur@gmail.com

ನಂ:ಆಪಪಂಆಲೂರು/ಜೆಇ/ಕಾಮಗಾರಿ/01/2023–24. ದಿನಾಂಕ:26/12/2023

: ತಿದ್ದುಪಡಿ ಟೆಂಡರ್ ಪ್ರಕಟಣೆ:

ಆಲೂರು ಪಟ್ಟಣ ಪಂಚಾಯಿತಿ, ಹಾಸನ ಜಿಲ್ಲೆಯಲ್ಲಿ ಟೆಂಡರ್ ಸಂಖ್ಯೆ:ಆಪಪಂಆಲೂರು/ಜೆಇ/ಕಾಮಗಾರಿ/01/2023–24 ದಿನಾಂಕ 22/12/2023 ರಂದು ಪ್ರಕಟಿಸಿರುವ ಟೆಂಡರ್ ಪ್ರಕಟಣೆಯ ಇಂಡೆಂಟ್ ಸಂಖ್ಯೆಯಲ್ಲಿ ಬದಲಾವಣೆ ಇದ್ದು ವಿವರಗಳು, ಈ ಕೆಳಕಂಡಂತ್ತಿರುತ್ತದೆ.

ಕ್ರ. ಸಂ.	ಪ್ರಕಟಿಸಿರುವ ಇಂಡೆಂಟ್ ಸಂಖ್ಯೆ	ಬದಲಾವಣೆಯಿರುವ ಇಂಡೆಂಟ್ ಸಂಖ್ಯೆ
1	DMA/2023-24/OW/WORK_INDENT/10400	DMA/2023-24/OW/WORK_INDENT10400
2	DMA/2023-24/OW/WORK_INDENT/10416	DMA/2023-24/OW/WORK_INDENT10416
3	DMA/2023-24/OW/WORK_INDENT/10425	DMA/2023-24/OW/WORK_INDENT10425
4	DMA/2023-24/OW/WORK_INDENT/10434	DMA/2023-24/OW/WORK_INDENT10434
5	DMA/2023-24/OW/WORK_INDENT/10445	DMA/2023-24/OW/WORK_INDENT10445
6	DMA/2023-24/EL/WORK_INDENT/10484	DMA/2023-24/EL/WORK_INDENT10484
7	DMA/2023-24/OW/WORK_INDENT/10477	DMA/2023-24/OW/WORK_INDENT10477
8	DMA/2023-24/OW/WORK_INDENT/10473	DMA/2023-24/OW/WORK_INDENT10473
9	DMA/2023-24/OW/WORK_INDENT/10461	DMA/2023-24/OW/WORK_INDENT10461
10	DMA/2023-24/OW/WORK_INDENT/10459	DMA/2023-24/OW/WORK_INDENT10459
11	DMA/2023-24/OW/WORK_INDENT/10479	DMA/2023-24/OW/WORK_INDENT10479
12	DMA/2023-24/OW/WORK_INDENT/10458	DMA/2023-24/OW/WORK_INDENT10458

ಸಹಿ/– ಮುಖ್ಯಾಧಿಕಾರಿ ಪಟ್ಟಣ ಪಂಚಾಯಿತಿ, ಆಲೂರು.

ವಾಸಾಸಂಇ/ಹಿಸನಿ/ಹಾಸನ/590/ಕೆಎಸ್ಎಂಸಿಎ/596/2023–24

❦ ಸುಭಾಷಿತ ❦

ಗೆಲ್ಲಬೇಕೆಂಬ ಇಚ್ಛಾಶಕ್ತಿ, ಯಶಸ್ಸಿನ ಆಕಾಂಕ್ಷೆ, ನಿಮ್ಮ ಸಂಪೂರ್ಣ ಸಾಮರ್ಥ್ಯವನ್ನು ತೊಡಗಿಸಿಕೊಳ್ಳುವ ಅಭಿಲಾಷೆ... ಇವು, ವೈಯಕ್ತಿಕವಾಗಿ ಶ್ರೇಷ್ಠತೆ ಕಾಯ್ದುಕೊಳ್ಳುವ ಮಾರ್ಗದ ಬಾಗಿಲನ್ನು ತೆರೆಯುವ ಕೀಲಿಕೈಗಳು. –ಕನ್‌ಫ್ಯೂಷಿಯಸ್

ಸರ್ಕಾರಿ ಶಾಲೆ ಸಶಕ್ತಗೊಳಿಸಲು ಬೇಕಿದೆ ದೃಢಸಂಕಲ್ಪ

ರಾಜ್ಯದ ಸರ್ಕಾರಿ ಶಾಲೆಗಳ ಹಲವು ಕಟ್ಟಡಗಳು ಸುರಕ್ಷಿತವಲ್ಲ ಎಂಬ ವಿಚಾರವು ಕಳವಳಕಾರಿ ಆಗಿದೆ. ಇದರ ಜೊತೆಗೆ ಇತರ ಮೂಲಸೌಕರ್ಯಗಳ ಕೊರತೆಯೂ ಶಾಲೆಗಳನ್ನು ಕಾಡುತ್ತಿದೆ. ಹಲವೆಡೆ ಶಾಲಾ ಕಟ್ಟಡದ ಗೋಡೆಗಳು ಬಿರುಕು ಬಿಟ್ಟಿವೆ, ಹೆಂಚುಗಳು ಉದುರುತ್ತಿವೆ, ಸಿಮೆಂಟ್ ಚಾವಣಿ ಇದ್ದೆಡೆ ಸಿಮೆಂಟ್ ಉದುರುತ್ತಿದೆ, ಹಲವಾರು ಶಾಲೆಗಳಲ್ಲಿ ಬೆಂಚು, ಮೇಜುಗಳಿಲ್ಲ; ಶುದ್ಧ ಕುಡಿಯುವ ನೀರು ಲಭ್ಯ ಇಲ್ಲದ ಶಾಲೆಗಳ ಸಂಖ್ಯೆಯೂ ಬಹಳ ದೊಡ್ಡದಿದೆ. ಶೌಚಾಲಯದ ಸೌಲಭ್ಯ ಇಲ್ಲದ ಶಾಲೆಗಳು ಹಲವಿದ್ದರೆ, ಶೌಚಾಲಯದ ಸ್ವಚ್ಛತೆ ಮತ್ತು ಇತರ ನಿರ್ವಹಣೆಗೆ ಯಾವುದೇ ವ್ಯವಸ್ಥೆ ಇಲ್ಲ. ಗ್ರಾಮೀಣ ಪ್ರದೇಶ ಮತ್ತು ಹಿಂದುಳಿದ ಪ್ರದೇಶಗಳಲ್ಲಿನ ಶಾಲೆಗಳಲ್ಲಿಯೇ ಈ ಸಮಸ್ಯೆಗಳು ಹೆಚ್ಚು ಎಂಬುದು ಇಂತಹ ಪ್ರದೇಶಗಳ ಕುರಿತು ಸರ್ಕಾರ ಹೊಂದಿರುವ ನಿರ್ಲಕ್ಷ್ಯಕ್ಕೆ ಕನ್ನಡಿ ಹಿಡಿಯುತ್ತದೆ. ರಾಜ್ಯದಲ್ಲಿ ಒಟ್ಟು 48,285 ಸರ್ಕಾರಿ ಶಾಲೆಗಳಿವೆ, 17,258 ಕಡೆ ಶಾಲಾ ಕೊಠಡಿಗಳ ಕೊರತೆ ಇದೆ. ರಾಜ್ಯದ 5 ಜಿಲ್ಲೆಗಳಲ್ಲಿ ತಲಾ ಒಂದು ಸಾವಿರಕ್ಕೂ ಹೆಚ್ಚು ಕೊಠಡಿಗಳ ನಿರ್ಮಾಣವಾಗಬೇಕಿದೆ. ಕೊಠಡಿಗಳಿಲ್ಲದೆ ಮರದ ನೆರಳು, ಅಂಗನವಾಡಿ ಕೇಂದ್ರಗಳು, ಯಾವುದೋ ಉಗ್ರಾಣದಲ್ಲಿ ಶಾಲೆಗಳನ್ನು ನಡೆಸುವ ದುಃಸ್ಥಿತಿ ಇನ್ನೂ ಇದೆ ಎಂಬುದು ದುರದೃಷ್ಟಕರ. 'ನೆಲದ ಮೇಲೆ ಕುಳಿತು ಪಾಠ ಕೇಳುವ ವ್ಯವಸ್ಥೆಯನ್ನು ಮುಂದಿನ ವರ್ಷದೊಳಗೆ ಕೊನೆಗೊಳಿಸಲಾಗುವುದು' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಭರವಸೆ ಕೊಟ್ಟಿದ್ದಾರೆ. ಅದಕ್ಕೆ ಬೇಕಾಗುವ ಅನುದಾನವನ್ನು ಮುಂದಿನ ವರ್ಷದ ಬಜೆಟ್‌ನಲ್ಲಿ ತೆಗೆದಿರಿಸುವ ಕುರಿತು ಮುಖ್ಯಮಂತ್ರಿ ಮೇಲೆ ಅಗತ್ಯ ಒತ್ತಡ ಹಾಕಬೇಕಾಗಿದೆ. ಮೂಲಸೌಕರ್ಯ ಹಾಗೂ ಶಿಕ್ಷಕರ ಕೊರತೆಯ ಕಾರಣದಿಂದಲೇ ಸರ್ಕಾರಿ ಶಾಲೆಗಳು ಸೊರಗುತ್ತಿವೆ ಎಂಬುದು ಬಹಳ ಸ್ಪಷ್ಟ.

ಸರ್ಕಾರಿ ಶಾಲೆಗಳನ್ನು ಸಶಕ್ತಗೊಳಿಸಲು ಬೇಕಾದ ಸಮಗ್ರ ಯೋಜನೆ ರೂಪಿಸಿ, ಅದನ್ನು ಕಾಲಮಿತಿಯೊಳಗೆ ಕಾರ್ಯರೂಪಕ್ಕೆ ತರುವ ಬದ್ಧತೆಯನ್ನು ಸರ್ಕಾರ ಪ್ರದರ್ಶಿಸಬೇಕು

ಸರ್ಕಾರಿ ಶಾಲೆಗಳ ಪೈಕಿ ಒಟ್ಟು 287 ಶಾಲೆಗಳು ಈ ಸಾಲಿನಲ್ಲಿ ಶೂನ್ಯ ದಾಖಲಾತಿಯನ್ನು ಹೊಂದಿದ್ದರೆ, ಹತ್ತರವರೆಗೆ ಮಕ್ಕಳಿರುವ ಶಾಲೆಗಳ ಸಂಖ್ಯೆ 3,546. ಈ ಶಾಲೆಗಳ ಪರಿಸ್ಥಿತಿ ಸುಧಾರಿಸದೇ ಇದ್ದರೆ, ಮುಂದಿನ ವರ್ಷಗಳಲ್ಲಿ ಶೂನ್ಯ ದಾಖಲಾತಿ ಶಾಲೆಗಳ ಪಟ್ಟಿಗೆ ಈ ಶಾಲೆಗಳೂ ಸೇರಬಹುದು. ಶಾಲಾ ಮೂಲಸೌಕರ್ಯವನ್ನು ಖಾತರಿಪಡಿಸುವುದರ ಜೊತೆಗೆ ವಿದ್ಯಾರ್ಥಿಗಳನ್ನು ಆಕರ್ಷಿಸುವ ಕ್ರಮಗಳನ್ನೂ ಸರ್ಕಾರ ಕೈಗೊಳ್ಳಲೇಬೇಕಿದೆ. ಮಧ್ಯಾಹ್ನದ ಬಿಸಿಯೂಟ, ಶಾಲಾ ದತ್ತು ಯೋಜನೆ, ವಿದ್ಯಾರ್ಥಿಗಳಿಗೆ ಬೈಸಿಕಲ್ ವಿತರಣೆಯಂತಹ ಉಪಕ್ರಮಗಳಲ್ಲಿ ಹಲವು ಕರ್ನಾಟಕದಿಂದಲೇ ಆರಂಭಗೊಂಡಂತಹವು. ಇತರ ರಾಜ್ಯಗಳೂ ಇಂತಹ ಯೋಜನೆಗಳನ್ನು ಆ ಬಳಿಕ ಅಳವಡಿಸಿಕೊಂಡಿವೆ. ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕುಸಿತವು ಕಳವಳ ಮೂಡಿಸುವ ಮತ್ತೊಂದು ಸಂಗತಿಯಾಗಿದೆ. ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಲು ಶಿಕ್ಷಕರ ಕೊರತೆ ಮತ್ತು ಗುಣಮಟ್ಟದ ಶಿಕ್ಷಣ ಸಿಗದಿರುವುದು ಕೆಲವು ಪ್ರಮುಖ ಕಾರಣಗಳು. ಶಿಕ್ಷಕರಿಗೆ ಬೋಧನೆಯ ಜೊತೆಗೆ ಇತರ ಹಲವು ಜವಾಬ್ದಾರಿಗಳನ್ನು ವಹಿಸಲಾಗಿದೆ. ಇವುಗಳನ್ನು ಪೂರೈಸುವುದಕ್ಕಾಗಿಯೇ ಶಿಕ್ಷಕರ ಹೆಚ್ಚಿನ ಸಮಯ ವ್ಯಯವಾಗುತ್ತದೆ. ಶಿಕ್ಷಕರನ್ನು ಬೋಧನೆಗೆ ಹೊರತಾದ ಉದ್ದೇಶಗಳಿಗೆ ಬಳಸಿಕೊಳ್ಳಬಾರದು ಎಂಬುದನ್ನು ಅಧಿಕಾರಸ್ಥರೂ ಒಪ್ಪುತ್ತಾರೆ. ಆದರೆ, ಅದು ಕಾರ್ಯರೂಪಕ್ಕೆ ಬರುತ್ತಿಲ್ಲ. ಸರ್ಕಾರಿ ಶಾಲೆಗಳನ್ನು ಉಳಿಸಿ–ಬೆಳೆಸುವುದನ್ನು ಸರ್ಕಾರವು ಆದ್ಯತೆಯ ವಿಷಯವಾಗಿ ಪರಿಗಣಿಸಬೇಕು. ಸರ್ಕಾರಿ ಶಾಲೆಗಳನ್ನು ಹೆಚ್ಚಾಗಿ ನೆಚ್ಚಿಕೊಂಡಿರುವವರು ದುರ್ಬಲ ಸಮುದಾಯಗಳ ಮಕ್ಕಳು. ಆ ಸಮುದಾಯಗಳ ಸಬಲೀಕರಣದ ಕೀಲಿಕೈ ಸರ್ಕಾರಿ ಶಾಲೆಗಳ ಶಿಕ್ಷಕರ ಕೈಯಲ್ಲಿದೆ. ಈ ಶಾಲೆಗಳನ್ನು ಎಲ್ಲ ರೀತಿಯಲ್ಲೂ ಸಶಕ್ತಗೊಳಿಸಲು ಬೇಕಾದ ಸಮಗ್ರ ಯೋಜನೆ ರೂಪಿಸಿ, ಅದನ್ನು ಕಾಲಮಿತಿಯೊಳಗೆ ಕಾರ್ಯರೂಪಕ್ಕೆ ತರುವ ಬದ್ಧತೆಯನ್ನು ಸರ್ಕಾರ ಈಗಲಾದರೂ ಪ್ರದರ್ಶಿಸಬೇಕು. ಶಿಕ್ಷಕರ ನೇಮಕಾತಿಯು ಕಾಲಕಾಲಕ್ಕೆ ನಡೆಯುವಂತೆ ನೋಡಿಕೊಳ್ಳಬೇಕು. ಬೋಧನೆಯ ಗುಣಮಟ್ಟ ಖಾತರಿಪಡಿಸಲು ನಿಗಾ ವ್ಯವಸ್ಥೆ ನಿರಂತರವಾಗಿ ಇರುವಂತೆ ಮಾಡಬೇಕು.

ದಿನದ ಟ್ವೀಟ್

ಚರ್ಚೆಗಿರಲಿ ಆದ್ಯತೆ

2001ರಲ್ಲಿ ಸಂಸತ್ ಮೇಲೆ ದಾಳಿ: ಸಂಸತ್ತಿನಲ್ಲಿ ಸಂಪೂರ್ಣವಾಗಿ ಮೂರು ದಿನ ಚರ್ಚೆ. ರಾಜ್ಯಸಭೆಯಲ್ಲಿ ಪ್ರಧಾನಿಯಿಂದ, ಲೋಕಸಭೆಯಲ್ಲಿ ಗೃಹ ಸಚಿವರಿಂದ ಹೇಳಿಕೆ. 2023ರಲ್ಲಿ ಸಂಸತ್ತಿನಲ್ಲಿ ಭದ್ರತೆ ಉಲ್ಲಂಘನೆ: ಸರ್ಕಾರದ ಮೌನ. ಸಂಸತ್ತಿನಲ್ಲಿ ಈ ಕುರಿತು ಚರ್ಚೆ ಹಾಗೂ ಗೃಹ ಸಚಿವರಿಂದ ಹೇಳಿಕೆಗೆ ಆಗ್ರಹಿಸಿದ 146 ಸಂಸದರ ಅಮಾನತು. ಸಂಸತ್ತು ಕತ್ತಲಕೂಪದಂತಾಗಿದೆ.

ಡೆರೆಕ್ ಒಬ್ರಾಯನ್, ರಾಜ್ಯಸಭಾ ಸದಸ್ಯ, ಟಿಎಂಸಿ ನಾಯಕ

ಕಿಡಿನುಡಿ

ನಾನು, ಪಕ್ಷದ ರಾಜ್ಯ ಘಟಕದ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದ ಜಿ.ಜನಾರ್ದನ ರೆಡ್ಡಿ ಮತ್ತು ಬಸನಗೌಡ ಪಾಟೀಲ ಯತ್ನಾಳ ಅವರನ್ನು ಅಮಾನತು ಮಾಡಿದ್ದೆ. ಯತ್ನಾಳರ ಅಮಾನತು ಆದೇಶ ಹಿಂಪಡೆಯಲು ಯಡಿಯೂರಪ್ಪ ಸೂಚಿಸಿದ್ದರು. ಅದರ ಪರಿಣಾಮವನ್ನು ಈಗ ಅನುಭವಿಸುತ್ತಿದ್ದೇವೆ.

ಡಿ.ವಿ.ಸದಾನಂದಗೌಡ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಸೋಮವಾರ, 28-12-1998

• ಅಖೈರುಗೊಳ್ಳುತ್ತಿರುವ ರಾಷ್ಟ್ರೀಯ ಕೃಷಿ ನೀತಿ ಕರಡು

ನವದೆಹಲಿ, ಡಿ. 27– ರಾಷ್ಟ್ರೀಯ ಕೃಷಿ ನೀತಿಯ ಕರಡನ್ನು ಕೇಂದ್ರ ಸರ್ಕಾರ ಅಖೈರುಗೊಳಿಸುತ್ತಿದೆ.

ನೈಸರ್ಗಿಕ ಮೂಲಗಳು ಮತ್ತು ಜಲಸಂಪನ್ಮೂಲದ ಸಮರ್ಥ ಬಳಕೆ ಮೂಲಕ ಆಹಾರ ಸ್ವಾವಲಂಬನೆ, ಕೃಷಿಗೆ ಉದ್ಯಮಸ್ಥಾನ ನೀಡಿಕೆ ಮತ್ತು ರೈತರ ಬೆಳೆಗಳಿಗೆ ನ್ಯಾಯವಾದ ಬೆಲೆ ಲಭ್ಯವಾಗಿಸುವ ಹಲವಾರು ಅಂಶಗಳನ್ನು ಇದು ಒಳಗೊಂಡಿದೆ.

ಈಗ ಸಿದ್ಧವಾಗುತ್ತಿರುವ ನೀತಿಯ ಪ್ರಕಾರ, ಭೂಮಿ ಮತ್ತು ಜಲಸಂಪನ್ಮೂಲವನ್ನು ಸಮರ್ಥವಾಗಿ ನಿರ್ವಹಣೆ ಮಾಡುವ ಮೂಲಕ ನೈಸರ್ಗಿಕ ಮೂಲಗಳು ಮತ್ತು ಜೀವವೈವಿಧ್ಯ ಸಂರಕ್ಷಣೆ, ಹೆಚ್ಚುತ್ತಿರುವ ಜನಸಂಖ್ಯೆಯನ್ನು ಗಮನದಲ್ಲಿ ಇಟ್ಟುಕೊಂಡು ಆಹಾರ ಸ್ವಾವಲಂಬನೆಗೆ ಆದ್ಯತೆ ನೀಡಲಾಗುತ್ತಿದೆ.

• ದಳ ಬಿಕ್ಕಟ್ಟು: ಶರದ್ ಮಾತುಕತೆ ಇಂದು ಪ್ರಾರಂಭ

ನವದೆಹಲಿ, ಡಿ. 27 – ಮುಖ್ಯಮಂತ್ರಿ ಜೆ.ಎಚ್.ಪಟೇಲ್ ನಾಯಕತ್ವ ಬದಲಾವಣೆಯ ವಿವಾದ ಸೇರಿದಂತೆ ಕಳೆದ ಮೂರು ತಿಂಗಳಿಂದ ನನೆಗುದಿಗೆ ಬಿದ್ದಿರುವ ಕರ್ನಾಟಕ ಜನತಾದಳದ ಬಿಕ್ಕಟ್ಟಿಗೆ ಪರಿಹಾರ ಕಂಡು ಹಿಡಿಯಲು ಜನತಾದಳದ ರಾಷ್ಟ್ರೀಯ ಅಧ್ಯಕ್ಷ ಶರದ್ ಯಾದವ್ ನಾಳೆಯಿಂದ ಮೂರು ದಿನಗಳ ಕಾಲ ರಾಜ್ಯ ಮತ್ತು ರಾಷ್ಟ್ರೀಯ ನಾಯಕರ ಜತೆ ಚರ್ಚಿಸಲಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 28-12-1973

• ಕೆಲಸ ಮಾಡಿದಷ್ಟೂ ಹಣ; ಕನ್ನಡ ಸಾಹಿತ್ಯಕ್ಕೆ ಘೋರ್ಪಡೆ ಭರವಸೆ

ಬೆಂಗಳೂರು, ಡಿ. 27 – ಕನ್ನಡ ಸಾಹಿತ್ಯದ ಕಾರ್ಯಕ್ಕೆ ಹಣದ ಅಭಾವದ ಪ್ರಶ್ನೆಯೇ ಇಲ್ಲವೆಂದು ಇಂದು ಭರವಸೆ ನೀಡಿದ ಅರ್ಥ ಸಚಿವ ಎಂ.ವೈ.ಘೋರ್ಪಡೆಯವರು 'ಕಾರ್ಯ ಮಾಡಿ ತೋರಿಸಿದಷ್ಟೂ ಹಣ ಬರುತ್ತದೆ' ಎಂದರು.

ಸಾಹಿತ್ಯ ಪರಿಷತ್ತಿನ ಪಂಚವಾರ್ಷಿಕ ಯೋಜನೆಯನ್ನು ಉದ್ಘಾಟಿಸಿದ ಸಚಿವರು, ರಾಜ್ಯದ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿಯೇ ಕನ್ನಡದ ಬೆಳವಣಿಗೆಗಾಗಿ ಒಂದೂವರೆ ಕೋಟಿ ರೂ.ನಷ್ಟು ಹಣ ಒದಗಿಸಲಾಗಿದೆ ಎಂದರು.

ಪರಿಷತ್ತಿನ ಪಂಚವಾರ್ಷಿಕ ಯೋಜನೆಯ ಐವತ್ತು ಲಕ್ಷ ರೂ. ವೆಚ್ಚದಲ್ಲಿ ಅರ್ಧದಷ್ಟನ್ನು ಸರ್ಕಾರ ನಿರ್ವಹಿಸುವುದಲ್ಲದೆ ಕನ್ನಡದ ಅಭಿವೃದ್ಧಿಗಾಗಿ 75 ಲಕ್ಷ ರೂ. ಒದಗಿಸಿದೆ.

ಕನ್ನಡ ನಿಘಂಟಿಗಾಗಿ 18 ಲಕ್ಷ ರೂ. ನೀಡುವುದರ ಜೊತೆಗೆ ಮೈಸೂರು ವಿಶ್ವವಿದ್ಯಾನಿಲಯ ತಯಾರಿಸುವ 'ವಿಷಯ ವಿಶ್ವಕೋಶ'ಕ್ಕಾಗಿ 30 ಲಕ್ಷ ರೂ. ಒದಗಿಸಲಾಗುವುದು ಎಂದು ಸಚಿವರು ತಿಳಿಸಿದರು.

• ನಾಗಭೂಷಣ ಪಟ್ನಾಯಕ್‌ಗೆ ಮರಣದಂಡನೆ ರದ್ದು

ನವದೆಹಲಿ, ಡಿ. 27 – ನಕ್ಸಲೀಯ ನಾಯಕ ನಾಗಭೂಷಣ ಪಟ್ನಾಯಕ್ ಅವರಿಗೆ ವಿಧಿಸಿದ್ದ ಮರಣದಂಡನೆಯನ್ನು ಜೀವಾವಧಿ ಶಿಕ್ಷೆಗೆ ಇಳಿಸಲು ಕೇಂದ್ರ ಸಂಪುಟ ಇಂದು ನಿರ್ಧರಿಸಿತು.

ಪಟ್ನಾಯಕ್ ಅವರ ಪತ್ನಿ, ತಾಯಿ ಸಲ್ಲಿಸಿದ್ದ ಕ್ಷಮೆಯಾಚನೆ ಪತ್ರ ಹಾಗೂ ರಾಜಕೀಯ ಪಕ್ಷಗಳ ಮನವಿಗಳಿಗೆ ಉತ್ತರವಾಗಿ ಶಿಕ್ಷೆಯನ್ನು ಪರಿವರ್ತನೆ ಮಾಡಲಾಗಿದೆ.

ಸಮಾಜ ಹಿಂದಕ್ಕೆ ಚಲಿಸುತ್ತಿದೆಯೇ? ಹೊಸ ಪಾಳೇಗಾರರಿಗೆ ಶರಣಾಗುತ್ತಿರುವ ಸೂಚನೆಗಳೇ?

ಸೋರುತಿಹುದು ಮನೆಯ ಮಾಳಿಗೆ

ವಿಶ್ಲೇಷಣೆ

ಸಬಿತಾ ಬನ್ನಾಡಿ

'ಕತ್ತಿ ಪರದೇಶಿಯಾದರೆ ಮಾತ್ರ ನೋವೆ? ನಮ್ಮವರೆ ಹದಹಾಕಿ ತಿವಿದರದು ಹೂವೆ?' ಕುವೆಂಪು ಅವರ ಕವಿತೆಯ ಸಾಲು, ನಾಡು ಸ್ವತಂತ್ರವಾಗುವುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದುದು ಅದು ನಿರ್ಮಿಸಿಕೊಳ್ಳುವ ಸಾಮಾಜಿಕ ಬದುಕು ಎಂಬುದನ್ನು ಅತ್ಯಂತ ಖಚಿತವಾಗಿ ಹೇಳುತ್ತದೆ. ಸಾಮಾಜಿಕ ಬದುಕೇ ಅಸಮತೆಯ ಕೆಸರಿನಲ್ಲಿ ಮುಳುಗಿದ್ದರೆ ಯಾವ ರಾಜಕೀಯ ಸ್ವಾತಂತ್ರ್ಯ ಇದ್ದು ಏನು ಫಲ? ಒಲಿಂಪಿಕ್ ಕೂಟದಲ್ಲಿ ದೇಶದ ಕೀರ್ತಿಪತಾಕೆ ಹಾರಿಸಿದ ಸಾಧಕರ ಅಹವಾಲುಗಳನ್ನೇ ಕೇಳದ ಮೇಲೆ ಇನ್ನು ಉಳಿದವರ ಪಾಡೇನು? ಕೊನೆಗೂ ಸಾಕ್ಷಿ ಮಲಿಕ್ ಒಬ್ಬ 'ಹೆಣ್ಣು' ಮಾತ್ರ ಆಗುತ್ತಾ, ಹೆಣ್ಣು ಬಾಯಿಬಿಟ್ಟರೆ ಮಣ್ಣಾಗುತ್ತಾಳೆ ಎಂಬ ಎಚ್ಚರಿಕೆಯನ್ನು ಇಡೀ ದೇಶಕ್ಕೇ ಕೊಡುತ್ತಿರುವ ಅಪಾಯವನ್ನು ಅರಿಯದ ನಮ್ಮ ಅಸಂಖ್ಯ 'ಮುಗ್ಧರು' ಒಂದೋ ಬಾಯಿ ಮುಚ್ಚಿಕೊಂಡಿದ್ದಾರೆ, ಇಲ್ಲವೇ ಅವಳ ವಿರುದ್ಧ ವಾದ ಮಾಡುವ 'ಸೇವೆ'ಯಲ್ಲಿ ತೊಡಗಿಕೊಂಡಿದ್ದಾರೆ.

ಸಾಕ್ಷಿ ಮತ್ತಿತರರು ಎತ್ತಿರುವ ಪ್ರಶ್ನೆ ಯಾವ ಕಾರಣಕ್ಕೂ ವೈಯಕ್ತಿಕವಾದುದಲ್ಲ. ಯಾವುದೇ ಆಟದಲ್ಲಿ ತೊಡಗಿಸಿಕೊಂಡಿರುವ ಯಾವುದೇ ಮಗುವಿನ ಕೂದಲೂ ಕೊಂಕದಂತೆ ನೋಡಿಕೊಳ್ಳುವ ಹೊಣೆಗಾರಿಕೆ ದೇಶದ ಆಳುವವರದು ಮತ್ತು ಪ್ರಜೆಗಳದೂ ಆಗಿದೆ. ಇಲ್ಲವಾದಲ್ಲಿ ಎಲ್ಲಿ ನಮ್ಮ ರಾಷ್ಟ್ರಗೀತೆ ಮೊಳಗಿದರೇನು? ಅದರ ಹಿಂದೊಂದು ಶೋಕಗೀತೆ ಇರುವುದಾದರೆ? ಇಷ್ಟು ಜನಸಂಖ್ಯೆಯ ಅಪಾರ ಪ್ರತಿಭಾವಂತರ ಈ ನೆಲದಲ್ಲಿ ಅಂಜಿಕೆ, ಅಡೆತಡೆ, ತರತಮಗಳಿಲ್ಲದ ಸಾಮಾಜಿಕತೆಯು ಇದ್ದಿದ್ದೇ ಆಗಿದ್ದರೆ ಭಾರತ ಸದಾ ಮೊದಲ ಸ್ಥಾನದಲ್ಲೇ ಇರುತ್ತಿರಲಿಲ್ಲವೇ? ಮೆಡಲು ತಂದುಕೊಡುತ್ತಿರುವ ಈ ಬಡಮಕ್ಕಳ ಕತ್ತಿನ ಮೇಲೆ ಕಾಲಿಟ್ಟಿರುವ ಮತಿಹೀನರ ಬಗೆಗೆ ಇಡೀ ದೇಶಕ್ಕೇ ಭಯವೇ? ಪ್ರಚಂಡ ನಾಯಕರಿಗೂ ನಡುಕವೇ?

ದೇಶಭಕ್ತಿಯನ್ನು ಕಾರ್ಡಿನಂತೆ ಚಲಾಯಿಸುವವರಿಗೆ ದೇಶೀಯರನ್ನೇ ದೇಶದ್ರೋಹಿಗಳಾಗಿಸುವಲ್ಲಿರುವ ಅಮಿತ ಉತ್ಸಾಹದ ಹಿಂದಿರುವುದು ದೇಶಹಿತವಲ್ಲ, ಸ್ವಹಿತ ಎಂಬುದಿನ್ನೂ ಯಾಕೆ ಅರಿವಿಗೆ ಬರುತ್ತಿಲ್ಲ? 'ಮಾನವೀಯತೆಯಿಲ್ಲದ ರಾಷ್ಟ್ರೀಯತೆಯನ್ನು ನಾನು ಒಪ್ಪುವುದಿಲ್ಲ' ಎಂದು ರವೀಂದ್ರನಾಥ ಟ್ಯಾಗೋರ್ ಹೇಳುತ್ತಾರೆ. ಇದೊಂದು ಸರಳ ಹೇಳಿಕೆಯಲ್ಲ ಎಂಬುದಕ್ಕೆ ಇಂದು ಜಗತ್ತಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳೇ ನಿದರ್ಶನ.

ರಾಷ್ಟ್ರೀಯತೆಯು ಅಸ್ತ್ರವಾದಾಗ ಅದು ಎಲ್ಲರ ಕೈಗೆ ಸಿಗುವ ಯಜಮಾನಿಕೆಯಾಗಿ ಬದಲಾಗುತ್ತದೆ. ಆ ಯಜಮಾನಿಕೆಯ ಮತ್ತು ಏರಿದಾಗ ಅಲ್ಲಿ ಕರುಣೆ, ಮೈತ್ರಿಗೆ ಅವಕಾಶವಾಗಲೀ ಅರ್ಥವಾಗಲೀ ಇರುವುದಿಲ್ಲ. ಎಲ್ಲೋ ಕೆಲವರು ಅಂತಃಕರಣದಿಂದ ಮಿಡಿಯುವ, ಸಹಾಯ ಮಾಡುವ ಸಂಗತಿಗಳು ಅಪರೂಪದಲ್ಲಿ ಕಾಣಿಸಬಹುದು. ಉಳಿದಂತೆ ಜನಸಾಮಾನ್ಯರೂ ದಡ್ಡುಗಟ್ಟಿ ಹೋಗುತ್ತಾರೆ. ಹೆಂಗಸರೂ ಈ ಉನ್ಮಾದವನ್ನು ಆಘ್ರಾಣಿಸತೊಡಗುತ್ತಾರೆ. ಸಮೂಹ ಸನ್ನಿಯ ಸನ್ನಿವೇಶ ನಿರ್ಮಾಣವಾಗಿ ಅದು ಅವರಿಗೆ ಭದ್ರತೆಯ ಭ್ರಮೆಯನ್ನು ಹುಟ್ಟುಹಾಕತೊಡಗುತ್ತದೆ. ಈಗಷ್ಟೇ ಹುಟ್ಟಿದ ಮಗುವೂ ಅವರಲ್ಲಿ ಮೃದುತ್ವವನ್ನು ಹುಟ್ಟಿಸಲಾರದಷ್ಟು ಅಮಾನುಷತೆಯು ರಕ್ತಗತವಾಗುವ ಪರಿಯ ಅಗಾಧತೆಯನ್ನು ಅಂದಾಜಿಸಬಹುದು.

ಪ್ಯಾಲೆಸ್ಟೀನ್ ಸಿನಿಮಾ 'ಫರಾ'ದಲ್ಲಿ ಒಂದು ದೃಶ್ಯ ಬರುತ್ತದೆ. 1948ರಲ್ಲಿ ಪ್ಯಾಲೆಸ್ಟೀನಿಯನ್ನರ ಮನೆ ಮನೆಯನ್ನೂ ಆಕ್ರಮಿಸಿ, ನಿಶ್ಶಸ್ತ್ರಗೊಳಿಸಿ ಅಟ್ಟಲಾಗುತ್ತದೆ. ದಾಳಿಗೆ ಸಿಲುಕಿದ ತುಂಬು ಗರ್ಭಿಣಿಯು ತನ್ನ ಗಂಡ, ಇಬ್ಬರು ಹೆಣ್ಣುಮಕ್ಕಳೊಂದಿಗೆ ಓಡುವಾಗ ಹೆರಿಗೆ ನೋವು ಕಾಣಿಸಿಕೊಳ್ಳುತ್ತದೆ. ಸುರಕ್ಷಿತ ಎನಿಸಿದ ಖಾಲಿ ಮನೆಯೊಂದರೊಳಗೆ ಗಂಡನ ಸಹಾಯದಿಂದ ಹೆರಿಗೆಯಾಗಿ ಗಂಡುಮಗುವೊಂದು ಜನಿಸುತ್ತದೆ. ಇಸ್ರೇಲ್ ಪಡೆ ಅಲ್ಲಿಗೂ ನುಗ್ಗುತ್ತದೆ. ಅವರು ಅಡಗಿಕೊಂಡರೂ ಉಪಯೋಗವಾಗದೆ ಸಾಲಾಗಿ ನಿಲ್ಲಿಸಿ ಶೂಟ್ ಮಾಡುತ್ತಾರೆ. ಅವರಲ್ಲಿ ಒಬ್ಬ ಹೆಂಗಸೂ ಇರುತ್ತಾಳೆ. ಅವಳಿಗೆ ಕರುಣೆಯ ಪಸೆಯೂ ಇರುವುದಿಲ್ಲ.

ಹುಟ್ಟಿದ ಮಗುವಿಗೇಕೆ ಒಂದು ಬುಲೆಟ್ ವೇಸ್ಟ್ ಮಾಡುವುದು, ಹಾಗೇ ಕೊಲ್ಲು ಎಂದು ಸೈನಿಕನಿಗೆ ಸೀನಿಯರ್ ಆದೇಶಿಸುತ್ತಾನೆ. ಅವನಿಗೆ ಕಷ್ಟವೆನಿಸಿ ಮಗುವಿನ ಮೇಲೆ ತನ್ನ ಕರ್ಚೀಫ್ ಹೊದೆಸಿ ಹಾಗೇ ಬಿಟ್ಟು ಹೋಗುತ್ತಾನೆ. ಅದು ಅಲ್ಲೇ ಬಿಸಿಲಲ್ಲಿ ಅತ್ತು ಅತ್ತು ಸತ್ತುಹೋಗುತ್ತದೆ. ಅವರದೇ ದೇಶದಲ್ಲಿ, ಅವರುಗಳದೇ ಮನೆಗಳಲ್ಲಿ ಅವರುಗಳೇ ಅನಾಥರಾದ 'ನಕ್ಬಾ' ಎಂಬ ಹೆಸರಿನ ಆಕ್ರಮಣದ ಸಂದರ್ಭವಿದು. ಈ ಆಕ್ರಮಣ ಮಾಡಿದ ಇಸ್ರೇಲಿಗರಿಗೆ ಜಗತ್ತು ಇಂದು ಹೆದರುತ್ತಿದೆ! ಅವರು ಕೇಳದಿದ್ದರೂ, ಯಾಚಿಸದಿದ್ದರೂ ಸಹಾಯಹಸ್ತ ಚಾಚಿ ನಿಂತಿದೆ! ಇಂತಹ ಮನಃಸ್ಥಿತಿಯಲ್ಲಿ ನಾವೂ ಇರುವಾಗ ಸಾಕ್ಷಿ ಮಲಿಕ್, ಬಜರಂಗ್ ಪೂನಿಯಾ ಅವರಿಗೆ ಬೆಂಬಲ ಬರುವುದಾದರೂ ಎಲ್ಲಿಂದ?

ನಾವು ಸದಾ ಸುಳ್ಳುಗಳನ್ನೇ ವೈಭವೀಕರಿಸಿ ಬದುಕುವುದನ್ನು ಇಷ್ಟಪಡುತ್ತೇವೆ. ಆದರೆ ಸತ್ಯ ಹೇಳಿದ ಕೂಡಲೇ ಶತ್ರುಗಳಾಗಿಬಿಡುತ್ತೇವೆ. ಸಮಾಜದಲ್ಲಿನ ಅಧಿಕಾರದ ಸ್ಥಾನಗಳನ್ನು ಹಿಡಿದಿದ್ದ ಕೆಲವೇ ಕೆಲವು ಜಾತಿಯ ಜನರು ಅಧಿಕಾರಹೀನ ಜಾತಿಯ ಹೆಂಗಸರನ್ನು ಹೇಗೆ ನಡೆಸಿಕೊಂಡಿದ್ದರು ಎಂಬ ಇತಿಹಾಸವನ್ನೇ ಮರೆಮಾಚಿ, ಇನ್ನೊಂದು ಧರ್ಮದ ಕತೆಗಳನ್ನು ಮುನ್ನೆಲೆಗೆ ತರುತ್ತೇವೆ. ದೇವನೂರ ಮಹಾದೇವ ಅವರ 'ಮಾರಿಕೊಂಡವರು' ಕತೆಯನ್ನು ಮತ್ತೊಮ್ಮೆ ಓದಿ ನೋಡಿ. ಬಡತನದ ದಳ್ಳುರಿಯಲ್ಲಿ ಬೆಂದ ಜನ ಹಸಿವಿನಲ್ಲಿ ಬೇಯುವುದಷ್ಟೇ ಅಲ್ಲ ಜೊತೆಗೇ ಹೆಂಗಸರ ದೇಹದ ಮೇಲೆ ಅಧಿಕಾರಸ್ಥ ಜಾತಿಗಳ ಗಂಡಸರು ಮಾಡುವ ಆಕ್ರಮಣಗಳನ್ನೂ ಮೌನವಾಗಿ ಸಹಿಸಿಕೊಳ್ಳಬೇಕಾದ ಅಸಹಾಯಕತೆಯನ್ನು ಬಡ ಹೆಂಗಸರು ಮತ್ತು ಗಂಡಸರ ಮೇಲೆ ಹೇರಿರುತ್ತಾರೆ. ತಮ್ಮ ಸ್ವಾಭಿಮಾನವನ್ನೇ ಮಾರಿಕೊಳ್ಳುವ ಒತ್ತಡದಲ್ಲಿದ್ದವರು ಕಾಲಾಂತರದಲ್ಲಿ ಸರ್ಕಾರದ ಕೆಲವು ಯೋಜನೆಗಳ ಫಲವಾಗಿ ಅಕ್ಷರವನ್ನೂ ಅನ್ನವನ್ನೂ ಆ ಮೂಲಕ ತಕ್ಕಮಟ್ಟಿನ ಸ್ವಾವಲಂಬನೆಯನ್ನೂ ಸಾಧಿಸಲು ಸಾಧ್ಯವಾಯಿತು.

ಹಿಂದೂ ಹೆಂಗಸರ ಮೇಲಿನ ಈ ಹಿಂದೂ ಗಂಡಸರ ಆಕ್ರಮಣಗಳ ಇತಿಹಾಸವನ್ನು ಮರೆಮಾಚಿ ಹೊಸ ಕತೆ ಕಟ್ಟುತ್ತಿರುವವರು ಧರ್ಮವನ್ನು ಮತ್ತೆ ಯಜಮಾನಿಕೆಯ ಅಸ್ತ್ರವಾಗಿಸಿ, ಇದೇ ಬಡ ಹಿಂದೂಗಳನ್ನು ತಮ್ಮ ದಾಳಗಳಾಗಿಸಿಕೊಳ್ಳಲು, ಕಾಲಾಳುಗಳನ್ನಾಗಿಸಿಕೊಳ್ಳಲು ಬಲೆ ಹೆಣೆಯುತ್ತಿದ್ದು ಅದರಲ್ಲಿ ಯಶಸ್ವಿಯೂ ಆಗುತ್ತಿದ್ದಾರೆ. ಇಂದು ಇವರು ಇದಕ್ಕಾಗಿ ಬೇರೆ ಧರ್ಮದವರನ್ನು ಶತ್ರು ಸ್ಥಾನದಲ್ಲಿ ನಿಲ್ಲಿಸುತ್ತಿದ್ದಾರೆ.

ಮಣಿಪುರ ಎಂಬ ಪುರಾತನ ಪರಂಪರೆಯ ನಾಡು ಇವರಿಗೀಗ ನೆನಪಿಗೇ ಬರುವುದಿಲ್ಲ. ಮಣಿಪುರವಾದರೇನು? ಬೆಳಗಾವಿಯ ಹೊಸ ವಂಟಮೂರಿ ಆದರೇನು? ಎರಡೂ ಅಕ್ಷಮ್ಯ, ನಾಚಿಕೆಗೇಡಿನ ಪ್ರಕರಣಗಳೇ. ಆದರೆ ಬೆಳಗಾವಿಗೆ ಓಡೋಡಿ ಬಂದು ಅಲ್ಲಿನ ಲೈಟುಕಂಬಗಳನ್ನು ಪರಿಶೀಲಿಸುವ, ಉಡುಪಿಗೆ ಬಂದು ಶೌಚಾಲಯದಲ್ಲಿ ಕ್ಯಾಮೆರಾ ಹುಡುಕುವ ಟಾಸ್ಕ್‌ಗಳನ್ನು ತಲೆಮೇಲೆ ಹೊತ್ತ ಸೊಫಿಸ್ಟಿಕೇಟೆಡ್ ಹೆಂಗಸರನ್ನು ನೋಡುವಾಗ ನನಗೆ ಇನ್ನೊಂದು ಪ್ಯಾಲೆಸ್ಟೀನಿ ಸಿನಿಮಾ ನೆನಪಾಗುತ್ತಿದೆ. '3000 ನೈಟ್ಸ್' ಎಂಬ ಈ ಸಿನಿಮಾದಲ್ಲಿ ನವವಿವಾಹಿತ ನಿಷ್ಪಾಪಿ ಪ್ಯಾಲೆಸ್ಟೀನ್ ಯುವತಿಯನ್ನು ಜೈಲಿಗೆ ತಳ್ಳುತ್ತಾರೆ. ಅವಳು ಗರ್ಭಿಣಿ ಎಂಬುದು ಆ ನಂತರ ಗೊತ್ತಾಗುತ್ತದೆ. ಗರ್ಭಪಾತಕ್ಕೆ ಒಪ್ಪದೆ ಅಲ್ಲಿಯೇ ಹೆತ್ತು ಬೆಳೆಸಲು ಆಕೆ ನಿರ್ಧರಿಸುತ್ತಾಳೆ. ಗಂಡುಮಗು ಜನಿಸಿದಾಗ ಜೈಲಿನ ಹೆಂಗಳೆಯರಲ್ಲೊಂದು ಸಂಚಲನ ಆಗುತ್ತದೆ. ಆದರೆ ಇಸ್ರೇಲಿ ಕೈದಿ ಹೆಂಗಸರು, 'ಇನ್ನೊಬ್ಬ ಭಯೋತ್ಪಾದಕನನ್ನು ಹುಟ್ಟಿಸಿದೆಯಾ?' ಎಂದು ಅರಚುವುದನ್ನೂ ಇಸ್ರೇಲ್ ಸ್ತ್ರೀ ಪೊಲೀಸ್ ಅಧಿಕಾರಿಗಳು ಅತ್ಯಂತ ಕ್ರೂರವಾಗಿ ಹೆಂಗಸರನ್ನು ನಡೆಸಿಕೊಳ್ಳುವುದನ್ನೂ ನೋಡಿದಾಗ, ಮಾನವೀಯತೆ ಎಂಬುದರ ಅರ್ಥವಾದರೂ ಏನು ಎಂಬ ದೊಡ್ಡ ಪ್ರಶ್ನೆ ಹುಟ್ಟಿಕೊಳ್ಳುತ್ತದೆ.

ನಮ್ಮಲ್ಲೇ ಮುಸ್ಲಿಂ ಹೆಂಗಸರನ್ನು ಅತ್ಯಂತ ಹೀನಾಯವಾಗಿ ಲೇವಡಿ ಮಾಡುವ ಅಸಹ್ಯ ಭಾಷಣಕಾರರು ತಮ್ಮದೇ ಧರ್ಮದ ಹೆಂಗಸರನ್ನು ಗೌರವಿಸಲು ಸಾಧ್ಯವೇ? ಸಾಕ್ಷಿ ಮಲಿಕ್ ವ್ಯವಸ್ಥೆಗೆ ಶರಣಾಗಬೇಕೆಂದು ಬಯಸುವವರು ಹೆಣ್ಣಿನ ದೇಹದ ಘನತೆಯನ್ನು ಗೌರವಿಸುತ್ತಾರೆ ಎಂದು ನಿರೀಕ್ಷಿಸಬಹುದೇ? ಇವೆಲ್ಲವೂ ಇವರಿಗೆ ಜಾತಿ, ಧರ್ಮ, ಪ್ರದೇಶ, ಪಕ್ಷದಂತಹ 'ಲಾಭ'ಗಳೊಂದಿಗೆ ತಗಲುಹಾಕಿಕೊಂಡಿರುವ ಅಂತಃಸಾಕ್ಷಿಯಿಲ್ಲದ ಬಾಹ್ಯ ಚರ್ಮಗಳು ಅಷ್ಟೇ. ಆದರೆ ದೇಶದ ಕೀರ್ತಿಪತಾಕೆಯನ್ನು ಬಾನೆತ್ತರಕ್ಕೆ ಏರಿಸಲು ಸಾಕ್ಷಿ ಮಲಿಕ್‌ಳ ಪಾದಗಳನ್ನು ಪೊರೆದ ಬೂಟುಗಳು ಈ ದೇಶ ಎಚ್ಚರಿಕೆಯಿಂದ ಗಮನಿಸಬೇಕಾದ ಹೊಸ ರೂಪಕಗಳು. ಈ ಅರಿವು ನಮ್ಮನ್ನು ಪೊರೆಯಲಿ.



ಚುರುಮುರಿ

ಸರ್ಕಾರಿ ಸೌಭಾಗ್ಯ

• ಮಣ್ಣೆ ರಾಜು

'ಡ್ಯಾಡಿ, ಯುವನಿಧಿಗೆ ಅರ್ಜಿ ಸಲ್ಲಿಸಿದ್ವಿ. ಇನ್ಮೇಲೆ ಸರ್ಕಾರ ನಮಗೆ ದುಡ್ಡು ಕೊಡುತ್ತದೆ' ಮಗ, ಮಗಳು ಸಂಭ್ರಮಪಟ್ಟರು.

'ಯುವನಿಧಿಗೆ ಅರ್ಜಿ ಸಲ್ಲಿಸುವ ಉತ್ಸಾಹವನ್ನು ಉದ್ಯೋಗಕ್ಕೆ ಅರ್ಜಿ ಸಲ್ಲಿಸಲು ತೋರಿಸಿದ್ದರೆ ನಿಮಗೆ ಒಳ್ಳೆಯ ಕೆಲಸ, ಕೈ ತುಂಬಾ ಸಂಬಳ ಸಿಗ್ತಿತ್ತು' ಅಂದ ಶಂಕ್ರಿ.

'ಯುವನಿಧಿ ಗ್ಯಾರಂಟಿ ಯೋಜನೆ, ಉದ್ಯೋಗ ಸಿಗುವುದು ಗ್ಯಾರಂಟಿ ಇಲ್ಲ' ಅಂದ ಮಗ.

'ಸರ್ಕಾರ 'ನಿಧಿ' ಕೊಡುವ ಬದಲು ನಿಮಗೆ ಉದ್ಯೋಗ ಕೊಡಬೇಕಾಗಿತ್ತು'.

'ಈಗಿರುವ ಉದ್ಯೋಗಿಗಳಿಗೇ ಸಂಬಳ ಕೊಡಲಾಗದೆ ಇಲಾಖೆಗಳ ಖಾಲಿ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗ್ತಿದೆ. ಸರ್ಕಾರದ ಕಷ್ಟವನ್ನೂ ಅರ್ಥ ಮಾಡಿಕೊಳ್ರೀ' ಎಂದಳು ಸುಮಿ.

'ಡ್ಯಾಡಿ, ಇನ್ಮೇಲೆ ನಾವು ನಿಮ್ಮ ಬಳಿ ಪಾಕೆಟ್ ಮನಿ ಕೇಳಲ್ಲ, ಸರ್ಕಾರವೇ ನಮ್ಮ ಬ್ಯಾಂಕ್ ಅಕೌಂಟಿಗೆ ದುಡ್ಡು ಜಮಾ ಮಾಡುತ್ತೆ' ಮಗಳು ಹೇಳಿದಳು.

'ದುಡ್ಡು ಕೇಳಿದರೆ ನೀವು ಹತ್ತಾರು ಪ್ರಶ್ನೆ ಕೇಳ್ತೀರಿ, ಖರ್ಚಿನ ಕಾರಣ ಕೇಳದೇ ಸರ್ಕಾರ ದುಡ್ಡು ಕೊಡುತ್ತದೆ' ಎಂದ ಮಗ.

'ಹೌದು, ಡ್ಯಾಡಿಗಿಂತ ಸರ್ಕಾರವೇ ಉತ್ತಮ'.

'ನನಗೆ ಗೃಹಲಕ್ಷ್ಮಿ ಹಣ, ಪದವೀಧರ ಮಗನಿಗೆ, ಡಿಪ್ಲೊಮಾ ಮಗಳಿಗೆ ಯುವನಿಧಿ ಭಾಗ್ಯ ದೊರೆಯುತ್ತದೆ. ಇನ್ಮೇಲೆ ನಾವು ಸ್ವಾವಲಂಬಿಯಾಗಿರುತ್ತೇವೆ. ನಾನು ಗಂಡಾವಲಂಬಿ ಆಗೊಲ್ಲ, ಮಕ್ಕಳು ಅಪ್ಪಾವಲಂಬಿ ಆಗೊಲ್ಲ' ಅಂದಳು ಸುಮಿ.

'ನೀವು ಸರ್ಕಾರಿ ಸೌಭಾಗ್ಯವಂತರು. ಹೆಂಡತಿಗೆ ಗೃಹಲಕ್ಷ್ಮಿ, ಮಕ್ಕಳಿಗೆ ಯುವನಿಧಿ ಕೊಡುವ ಸರ್ಕಾರ ಗಂಡಂದಿರ ಮೇಲೆ ಕರುಣೆ ತೋರಿ ನಮಗೆ 'ದಯಾನಿಧಿ' ನೀಡಿ ನೆರವಾಗಲಿ' ಶಂಕ್ರಿ ಆಸೆಪಟ್ಟ.

'ಗಂಡಂದಿರಿಗೆ ದಯಾನಿಧಿ ಯೋಜನೆ ಜಾರಿ ಮಾಡಿದರೆ ಸರ್ಕಾರಕ್ಕೆ ಮುಡಿ ಕೊಟ್ಟು ಹರಕೆ ತೀರಿಸುತ್ತೇನೆ ಎಂದು ಪ್ರಾರ್ಥನೆ ಮಾಡಿಕೊಳ್ಳಿ ಡ್ಯಾಡಿ!' ಎಂದು ಮಗಳು ಕಿಸಕ್ಕನೆ ನಕ್ಕಳು.

ಚರ್ಚೆ

ಸ್ವಾಯತ್ತೆ ಮರೆತ ವಿಶ್ವವಿದ್ಯಾಲಯ

ಹೆಚ್ಚಿನ ವಿಶ್ವವಿದ್ಯಾಲಯಗಳು ಸರ್ಕಾರದ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುವುದಷ್ಟೇ ತಮ್ಮ ಕೆಲಸ ಎಂದುಕೊಂಡಿವೆ

• ವಸಂತ ರಾಜು ಎನ್.

ಸರ್ಕಾರಿ ವಿಶ್ವವಿದ್ಯಾಲಯಗಳು ಅನುದಾನದ ಕೊರತೆಯಿಂದ ಪ್ರಪಾತಕ್ಕೆ ಜಾರುತ್ತಿರುವುದರ ಕುರಿತ ವಿಶೇಷ ವರದಿ (ಪ್ರ.ವಾ., ಡಿ. 10) ಹಲವು ಸಂಗತಿಗಳ ಮೇಲೆ ಬೆಳಕು ಚೆಲ್ಲಿದೆ. ವಿಶ್ವವಿದ್ಯಾಲಯಗಳು ಹೊಸ ಸಂಶೋಧನೆ ಹಾಗೂ ಆಲೋಚನೆಗಳನ್ನು ಉತ್ತೇಜಿಸುವ ಜ್ಞಾನ ತಾಣಗಳು. ಆದರೆ ಅವು ಇತ್ತೀಚೆಗೆ ಅಧ್ಯಾಪಕರು ಹಾಗೂ ಆರ್ಥಿಕ ಸಂಪನ್ಮೂಲಗಳ ತೀವ್ರ ಕೊರತೆ, ಭ್ರಷ್ಟಾಚಾರ, ಅಕ್ರಮ ನೇಮಕಾತಿಯಂತಹ ಸಲ್ಲದ ವಿಷಯಗಳಿಗಾಗಿ ಸುದ್ದಿ ಆಗುತ್ತಿವೆ. ಇದಕ್ಕೆ ಮೂಲ ಕಾರಣ, ವಿಶ್ವವಿದ್ಯಾಲಯಗಳ ಸ್ವಯಂಕೃತ ತಪ್ಪುಗಳೆನ್ನದೇ ವಿಧಿ ಇಲ್ಲ.

ವಿಶ್ವವಿದ್ಯಾಲಯಗಳ ಹಿತಾಸಕ್ತಿ ರಕ್ಷಿಸುವ ವಿಷಯದಲ್ಲಿ ಸರ್ಕಾರ ವ್ಯತಿರಿಕ್ತವಾಗಿ ನಡೆದುಕೊಂಡಾಗ ಕುಲಪತಿಗಳು ಯಾವುದೇ ಪ್ರತಿಕ್ರಿಯೆ ನೀಡದೆ ಮೌನ ವಹಿಸುವುದು ಸಾಮಾನ್ಯವಾಗಿದೆ. ವಿಶ್ವವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳಾಗಿದ್ದರೂ ಸರ್ಕಾರದ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುವುದಷ್ಟೇ ತಮ್ಮ ಕೆಲಸ ಎಂದು ತಿಳಿದುಕೊಂಡಿವೆ. ಉದಾಹರಣೆಗೆ, ಮೈಸೂರು ವಿಶ್ವವಿದ್ಯಾಲಯದ ವಿಶೇಷ ಹಣಕಾಸು ಸಭೆಯಲ್ಲಿ, ವಿಶ್ವವಿದ್ಯಾಲಯವನ್ನು ವಿಭಜಿಸಿದರೆ ಎದುರಾಗಬಹುದಾದ ಆರ್ಥಿಕ ಸಂಪನ್ಮೂಲದ ತೀವ್ರ ಕೊರತೆಯನ್ನು ಹೇಗೆ ಎದುರಿಸುವಿರಿ ಎಂಬ, ಆರ್ಥಿಕ ಇಲಾಖೆಯ ಅಧಿಕಾರಿಗಳ ಪ್ರಶ್ನೆಗೆ ಸಂಬಂಧಪಟ್ಟವರಿಂದ ಯಾವುದೇ ಉತ್ತರ ಬರಲಿಲ್ಲ.

ಮೈಸೂರು, ಕರ್ನಾಟಕ, ಮಂಗಳೂರು ವಿಶ್ವವಿದ್ಯಾಲಯಗಳಲ್ಲಿ ಶೇ 60ಕ್ಕಿಂತಲೂ ಹೆಚ್ಚು ಹುದ್ದೆಗಳು ಅನೇಕ ವರ್ಷಗಳಿಂದ ಖಾಲಿ ಉಳಿದಿವೆ. ವರ್ಷಂಪ್ರತಿ ನಿವೃತ್ತರ ಸಂಖ್ಯೆ ಕೂಡ ಹೆಚ್ಚುತ್ತಿದೆ. ಮೈಸೂರು ವಿಶ್ವವಿದ್ಯಾಲಯದಲ್ಲಿ 2007ರಲ್ಲಿ ನಡೆದ ಅಧ್ಯಾಪಕರ ನೇಮಕಾತಿಯಲ್ಲಿ ಕೇಳಿಬಂದ ಅಕ್ರಮದ ಆರೋಪ ಇನ್ನೂ ಬಗೆಹರಿದಿಲ್ಲ. ಮೀಸಲಾತಿ ನೀತಿ ಅನುಸರಿಸದಿರುವುದು, ಯುಜಿಸಿ ನಿಯಮಗಳನ್ನು ಗಾಳಿಗೆ ತೂರುವುದು, ಸ್ವಜನಪಕ್ಷಪಾತ, ಭ್ರಷ್ಟಾಚಾರದ ಕಾರಣಕ್ಕೆ ಮುನ್ನೆಲೆಗೆ ಬರುವ ವಿಶ್ವವಿದ್ಯಾಲಯಗಳು, ಇತ್ತೀಚೆಗೆ ಗೊಂದಲರಹಿತ ನೇಮಕಾತಿ ಮಾಡಿರುವ ಪ್ರಕರಣಗಳು ತೀರಾ ವಿರಳ.

2016ರಲ್ಲಿ ಮೈಸೂರು ವಿಶ್ವವಿದ್ಯಾಲಯಕ್ಕೆ ಸರ್ಕಾರವು ಅಧ್ಯಾಪಕರ ನೇಮಕಾತಿಗೆ ಅನುಮತಿ ನೀಡಿತ್ತಾದರೂ ಸೂಕ್ತ ರೋಸ್ಟರ್ ಪದ್ಧತಿ ಪಾಲನೆಯಾಗಿಲ್ಲ ಎನ್ನುವ ಕಾರಣಕ್ಕೆ ನೇಮಕಾತಿಯನ್ನು ತಡೆಹಿಡಿಯಲಾಯಿತು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ಕೆಎಸ್‌ಒಯು) ಮತ್ತು ಜಾನಪದ ವಿಶ್ವವಿದ್ಯಾಲಯದ ಕತೆಯೂ ಇದೇ ಆಗಿದೆ. ಇದಕ್ಕೆ ವಿಶ್ವವಿದ್ಯಾಲಯಗಳಲ್ಲದೇ ಯಾರು ಹೊಣೆ?

ಬೋಧಕೇತರ ವರ್ಗದ ತಾತ್ಕಾಲಿಕ ನೇಮಕಾತಿಗಳದ್ದು ಮತ್ತೊಂದು ಬ್ರಹ್ಮಾಂಡ ಭ್ರಷ್ಟಾಚಾರ. ಕುಲಪತಿಗಳು ಬದಲಾದಂತೆ, ಈ ನೇಮಕಾತಿ ಮನಬಂದ ರೀತಿಯಲ್ಲಿ ನಡೆಯುತ್ತದೆ. ತನ್ನ ಅನುಮತಿ ಇಲ್ಲದೆ ತಾತ್ಕಾಲಿಕ ನೇಮಕಾತಿ ಮಾಡಿಕೊಳ್ಳುವಂತಿಲ್ಲ ಎಂದು ಸರ್ಕಾರ ಹೇಳಿದೆಯಾದರೂ ಸ್ವಾಯತ್ತತೆಯನ್ನು ಮುನ್ನೆಲೆಗೆ ತಂದು, ಅಗತ್ಯಕ್ಕಿಂತ ಹೆಚ್ಚು ನೇಮಕಾತಿಗಳನ್ನು ವಿಶ್ವವಿದ್ಯಾಲಯಗಳು ಮಾಡಿಕೊಳ್ಳುತ್ತಿವೆ. ಕುಲಪತಿಗಳು ಬದಲಾದಂತೆ ವಿಶ್ವವಿದ್ಯಾಲಯಗಳ ಕಟ್ಟಡಗಳು ಕೂಡ ಹೊಸ ಬಣ್ಣಗಳಿಂದ ಕಂಗೊಳಿಸುತ್ತವೆ. ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖ ಆಗುತ್ತಿದ್ದರೂ ವಿಶ್ವವಿದ್ಯಾಲಯಗಳಲ್ಲಿ ಅನಗತ್ಯವಾದ ಕಟ್ಟಡಗಳ ನಿರ್ಮಾಣ ಕಾರ್ಯಕ್ಕೆ ಮಾತ್ರ ಧಕ್ಕೆಯಾಗಿಲ್ಲ.

ಉನ್ನತ ಶಿಕ್ಷಣ ಇಂದು ಅಧಿಕಾರಿಗಳ ನಿಯಂತ್ರಣಕ್ಕೆ ಸಿಲುಕಿ ನಲುಗುತ್ತಿದೆ. ಕೋವಿಡ್‌ನಿಂದ ಚೇತರಿಸಿಕೊಳ್ಳುತ್ತಿದ್ದ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ, 'ದೇಶದಲ್ಲೇ ಮೊದಲು' ಎನ್ನುವ ಖ್ಯಾತಿ ಪಡೆಯಲು, ಸೂಕ್ತ ತಯಾರಿಯಿಲ್ಲದೇ ರಾಜ್ಯದಲ್ಲಿ ಈ ಹಿಂದಿನ ಸರ್ಕಾರವು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ತರಾತುರಿಯಲ್ಲಿ ಜಾರಿಗೊಳಿಸಿತು. ವಿಶ್ವವಿದ್ಯಾಲಯಗಳನ್ನು ಹೊರಗಿಟ್ಟು, ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಮೂಲಕ ಪಠ್ಯಕ್ರಮವನ್ನು ರೂಪಿಸಲಾಯಿತು. ಪ್ರವೇಶಾತಿ, ಫಲಿತಾಂಶ ಪ್ರಕಟಣೆಯಂತಹ ಕಾರ್ಯಗಳಿಗೆ ಏಕೀಕೃತ ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು. ಇದರಿಂದ ವಿದ್ಯಾರ್ಥಿಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಬಹಳಷ್ಟು ಸಮಸ್ಯೆ ಆಯಿತಾದರೂ ವಿಶ್ವವಿದ್ಯಾಲಯಗಳಿಂದ ಯಾವುದೇ ಪ್ರತಿರೋಧ ವ್ಯಕ್ತವಾಗಲಿಲ್ಲ.

ರಾಜ್ಯ ಶಿಕ್ಷಣ ನೀತಿ ರೂಪಿಸುವ ಸಂಬಂಧ ರಾಜ್ಯ ಸರ್ಕಾರ ಮೈಸೂರಿನಲ್ಲಿ ಇತ್ತೀಚೆಗೆ ಕರೆದಿದ್ದ ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಮಂಗಳೂರು ವಲಯದ ವಿಶ್ವವಿದ್ಯಾಲಯಗಳ ಕುಲಪತಿಗಳು ಮತ್ತು ಕಾಲೇಜು ಪ್ರಾಂಶುಪಾಲರ ಸಭೆಯಲ್ಲಿ ಮಾತನಾಡಿದ ಕುಲಪತಿಗಳು, ವಿಶ್ವವಿದ್ಯಾಲಯಗಳಿಗೆ ಈಗ ಶೈಕ್ಷಣಿಕ ಸ್ವಾಯತ್ತತೆ ಇಲ್ಲವಾಗಿದೆ ಎನ್ನುವುದನ್ನು ಒತ್ತಿ ಹೇಳಿದರು. ಆದರೆ ಅಧಿಕಾರಿಶಾಹಿ ವ್ಯವಸ್ಥೆ ತಮ್ಮ ಮೇಲೆ ಸವಾರಿ ಮಾಡುವಾಗ ಅನೇಕರು ಮೌನ ವಹಿಸಿದ್ದರು. ವಿಶ್ವವಿದ್ಯಾಲಯಗಳಿಗೆ ಕೊಡುವ ಅನುದಾನವನ್ನು ಸರ್ಕಾರ ಮತ್ತು ಯುಜಿಸಿ ಇತ್ತೀಚೆಗೆ ಬಹಳಷ್ಟು ಕಡಿಮೆ ಮಾಡಿವೆ. ಸಂಶೋಧನೆಗಾಗಿ ದೇಶದ ವಿಶ್ವವಿದ್ಯಾಲಯಗಳಿಗೆ ಕೇಂದ್ರ ಸರ್ಕಾರ ನೀಡುವ ಅನುದಾನದ ಪ್ರಮಾಣವೂ ಬಹಳಷ್ಟು ಕಡಿಮೆಯಾಗಿದೆ.

ಕೇಂದ್ರವು ಖಾಸಗಿ ಮತ್ತು ವಿದೇಶಿ ವಿಶ್ವವಿದ್ಯಾಲಯಗಳಿಗೆ ಮಣೆ ಹಾಕುತ್ತಿರುವ ಈ ಸಂದರ್ಭದಲ್ಲಿ, ರಾಜ್ಯ ಸರ್ಕಾರಗಳು ತಮ್ಮ ವಿಶ್ವವಿದ್ಯಾಲಯಗಳಿಗೆ ಭ್ರಷ್ಟಾಚಾರರಹಿತ ಅನುಭವಿಗಳು, ಸಂಶೋಧನೆ ಮತ್ತು ಆಧುನಿಕ ಕಲಿಕಾ ಕ್ರಮಗಳ ಬಗ್ಗೆ ಆಳವಾದ ಜ್ಞಾನ ಇರುವಂತಹವರನ್ನು ಕುಲಪತಿಗಳನ್ನಾಗಿ ಮತ್ತು ಅಧ್ಯಾಪಕರನ್ನಾಗಿ ನೇಮಿಸಬೇಕಾಗಿದೆ. ಈ ಮೂಲಕ, ಯುಜಿಸಿ ನಿಯಮದಡಿ ಶೈಕ್ಷಣಿಕ ಸ್ವಾಯತ್ತೆಯೊಂದಿಗೆ ಅವುಗಳಿಗೆ ಹೊಸ ಸ್ವರೂಪ ನೀಡಬೇಕಾಗಿದೆ.

ವಾಚಕರ ವಾಣಿ

ಯತ್ನಾಳ ಆರೋಪ: ಸೂಕ್ತ ತನಿಖೆಯಾಗಲಿ

ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಕೋವಿಡ್ ಹೆಸರಿನಲ್ಲಿ ₹ 40 ಸಾವಿರ ಕೋಟಿ ಅವ್ಯವಹಾರ ನಡೆದಿದೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಆರೋಪಿಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಡಿ. 27). ಈ ರೀತಿ ಅಕ್ರಮದ ಆಪಾದನೆ ಹೊತ್ತವರು ಪ್ರಾಮಾಣಿಕರಾಗಿದ್ದರೆ ಹೇಳಿಕೆದಾರರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಬಹುದಲ್ಲವೇ? ತನಿಖಾ ಸಂಸ್ಥೆಗಳು ಸಹ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ತನಿಖೆಗೆ ಮುಂದಾಗಬಹುದು. ಬಿಜೆಪಿ ನೇತೃತ್ವದ ಸರ್ಕಾರದ ಮೇಲೆ ಹಿಂದೆ ಶೇ 40ರ ಕಮಿಷನ್ ಆರೋಪ ಮಾಡಿದ್ದ ಕಾಂಗ್ರೆಸ್ ಸದ್ಯ ಆಡಳಿತ ನಡೆಸುತ್ತಿದೆ. ಯತ್ನಾಳ ಅವರು ತಮ್ಮ ಆರೋಪಕ್ಕೆ ಪೂರಕವಾಗಿ ದಾಖಲೆ ಒದಗಿಸಬೇಕೆಂದು ಕೇಳುವ ಬದಲು, ವ್ಯವಸ್ಥಿತ ತನಿಖೆ ನಡೆಸಿ ಭ್ರಷ್ಟರಿಗೆ ಶಿಕ್ಷೆ ಕೊಡಿಸಬಹುದಲ್ಲವೇ? ಯತ್ನಾಳರು ನಿಜವಾಗಿಯೂ ಭ್ರಷ್ಟಾಚಾರ ವಿರೋಧಿಯಾಗಿದ್ದರೆ ಇಂತಹ ವಿಷಯವನ್ನು ಇಷ್ಟು ದಿನ ಮುಚ್ಚಿಟ್ಟಿದ್ದೇಕೆ? ಅಕ್ರಮದ ಬಗ್ಗೆ ಗೊತ್ತಿದ್ದರೂ ಅದನ್ನು ಮುಚ್ಚಿಡುವುದು ಸಹ ಕಾನೂನಿನಡಿ ಅಪರಾಧವಲ್ಲವೇ?

ಎಸ್.ನಾಗರಾಜ ನಾಗೂರ, ಬಾಗಲಕೋಟೆ

ಸ್ಥಳ ನಿಯುಕ್ತಿ: ವಿಳಂಬ ತರವಲ್ಲ

ಪರಿಚಿತರಾದ ಸರ್ಕಾರಿ ಮಹಿಳಾ ಅಧಿಕಾರಿಯೊಬ್ಬರು ಸುಮಾರು ಆರು ತಿಂಗಳಿನಿಂದ ಮನೆಯಲ್ಲಿಯೇ ಇದ್ದುದನ್ನು ಗಮನಿಸಿದ ನನಗೆ, ಬಹುಶಃ ಸರ್ಕಾರಿ ಉದ್ಯೋಗಿಗಳಿಗೆ ಲಭ್ಯವಿರುವ ರಜೆಗಳ ದುರ್ಬಳಕೆ ಆಗುತ್ತಿರಬಹುದೇನೋ ಅನ್ನಿಸಿತು. ಆದರೆ ಎಂದಿನಂತೆ ಲವಲವಿಕೆಯಿಲ್ಲದೆ ಉತ್ಸಾಹ ಕುಂದಿದ ಆಕೆಯ ಮುಖವನ್ನು ಗಮನಿಸಿದಾಗ, ಬಹುಶಃ ಯಾವುದೋ ತಪ್ಪಿಗಾಗಿ ಅಮಾನತಿಗೆ ಒಳಗಾಗಿರಬಹುದು ಅಂದುಕೊಂಡೆ. ಆದರೆ ಅವರ ಸನ್ನಡತೆ ಬಗ್ಗೆ ಅರಿವಿದ್ದರಿಂದ, ಅನ್ಯರ ತಪ್ಪಿನ ಹೊಣೆ ಇವರ ಮೇಲೆ ಬಂದಿರಬಹುದು ಅಂತಲೂ ಅನ್ನಿಸಿತು. ಆದರೆ ಕಾಲಾನಂತರದಲ್ಲಿ ತಿಳಿದ ವಾಸ್ತವ ಇದ್ಯಾವುದೂ ಆಗಿರಲಿಲ್ಲ. ಈಕೆ ಜಲಸಂಪನ್ಮೂಲ ಇಲಾಖೆಯಲ್ಲಿ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದು, ಆರು ತಿಂಗಳ ಹಿಂದೆ ಬಡ್ತಿ ನೀಡಲಾಗಿತ್ತು. ಆದರೆ ಸ್ಥಳ ನಿಯುಕ್ತಿಗೊಳಿಸಿರಲಿಲ್ಲ. ಈ ರೀತಿಯ ಸಂಬಳರಹಿತ ಕಡ್ಡಾಯ ಕಾಯುವಿಕೆಯು ತನ್ನದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುವಂತೆ ಮಾಡುತ್ತದಲ್ಲದೆ ಅಧಿಕಾರಿಗಳ ಉತ್ಸಾಹವನ್ನೂ ಕುಗ್ಗಿಸುತ್ತದೆ. ಇದರಿಂದ ಜೀವನ ನಿರ್ವಹಣೆ ಕಷ್ಟವಾಗಿ, ಪ್ರಾಮಾಣಿಕ ಅಧಿಕಾರಿಗಳು ಸಹ ಅನಿವಾರ್ಯವಾಗಿ ಅಡ್ಡದಾರಿ ಹಿಡಿಯಲು ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಮುಂದೆ ಒಂದು ದಿನ ಸ್ಥಳ ನಿಯುಕ್ತಿಗೊಳಿಸಿದಾಗ ಸರ್ಕಾರ ಬಾಕಿ ಸಂಬಳ ಪಾವತಿಸಬೇಕಾಗುತ್ತದೆ. ಇದರಿಂದ ಸರ್ಕಾರ ತನ್ನ ನೌಕರರಿಂದ ಕೆಲಸ ಪಡೆಯದೇ ಸಂಬಳ ನೀಡುವಂತಾಗಿ, ಪ್ರಜೆಗಳ ತೆರಿಗೆ ಹಣದ ದುರುಪಯೋಗ ಆದಂತಾಗುತ್ತದೆ.

ಇಂತಹ ಹಲವಾರು ಪ್ರಕರಣಗಳು ವಿವಿಧ ಇಲಾಖೆಗಳಲ್ಲಿ ಇರಬಹುದು. ಈ ಬಗ್ಗೆ ಉನ್ನತ ಅಧಿಕಾರಿಗಳು ಹಾಗೂ ಸಚಿವರು ಗಮನಹರಿಸಬೇಕು. ಖಾತೆರಹಿತ ಸಚಿವ ಸ್ಥಾನ ಕೊಟ್ಟು ಖಾತೆ ಹಂಚಿಕೆ ಮಾಡಲು ದೀರ್ಘಕಾಲ ಕಾಯಿಸಿದರೆ ನಮ್ಮ ರಾಜಕಾರಣಿಗಳಿಗೆ ಹೇಗಾಗಬಹುದು?

ಕೆ.ಎಂ.ನಾಗರಾಜು, ಮೈಸೂರು

ನಾಮಫಲಕ: ಗಡುವು ನೀಡಿ, ದಂಡ ವಿಧಿಸಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ವಾಣಿಜ್ಯ ಸಂಸ್ಥೆಗಳ ಕಾಯ್ದೆ ಪ್ರಕಾರ, ಅಂಗಡಿ, ಹೋಟೆಲ್, ಕಂಪನಿ ಮತ್ತು ಇತರ ಎಲ್ಲ ಬಗೆಯ ವ್ಯಾಪಾರಿಗಳು ನಾಮಫಲಕದಲ್ಲಿ ಕನ್ನಡದಲ್ಲಿ ಬರೆಯುವುದನ್ನು ಕಡ್ಡಾಯಗೊಳಿಸಲಾಗಿದೆ. 2019ರಲ್ಲಿಯೇ ಬಿಬಿಎಂಪಿ ಆಯುಕ್ತರು ಈ ಸಂಬಂಧ ಆದೇಶ ಹೊರಡಿಸಿದ್ದರೂ ಅದು ಇನ್ನೂ ಸಮರ್ಪಕವಾಗಿ ಜಾರಿಗೆ ಬಂದಿಲ್ಲ. ಕರ್ನಾಟಕದಲ್ಲಿ ವ್ಯಾಪಾರ ವಹಿವಾಟು ನಡೆಸುವವರು ಕನ್ನಡದಲ್ಲಿ ನಾಮಫಲಕ ಬರೆಸದೆ, ಕನ್ನಡದ ಬಗ್ಗೆ ಅಸಡ್ಡೆ ತೋರುವುದು ಖಂಡನೀಯ.

ಬೆಂಗಳೂರು ಮಾತ್ರವಲ್ಲ ರಾಜ್ಯದ ಎಲ್ಲ ಕಡೆಯೂ ವ್ಯಾಪಾರ ವಹಿವಾಟು ನಡೆಸುವವರಿಗೆ ಕನ್ನಡದಲ್ಲಿ ನಾಮಫಲಕ ಹಾಕುವುದನ್ನು ಕಡ್ಡಾಯಗೊಳಿಸಲಾಗಿದೆ. ಆದರೆ ಎಲ್ಲಿಯೂ ಸರಿಯಾಗಿ ಅದು ಜಾರಿಗೆ ಬಂದಿಲ್ಲ. ಸರ್ಕಾರ ಇಂತಹವರಿಗೆ ಸಮಯದ ಗಡುವು ನೀಡಿ ಒಂದು ಅವಕಾಶ ನೀಡಬೇಕು. ಆಮೇಲೆ ಭಾರಿ ಮೊತ್ತದ ದಂಡ ವಿಧಿಸಲು ಮುಂದಾಗಬೇಕು.

ಲಕ್ಷ್ಮೀಕಾಂತ್ ಕೊಟ್ಟೂರ ಚೌಕಿ, ಮಂಗಳೂರು

ದೇಶಕ್ಕೊಂದು ರಾಷ್ಟ್ರಭಾಷೆ ಪೂರಕ

ಹಿಂದಿ ಭಾಷೆಗೆ ಸಂಬಂಧಿಸಿದಂತೆ ಗೊಂದಲದ ಹೇಳಿಕೆ ಸಲ್ಲದು ಎಂಬ ನನ್ನ ಪತ್ರಕ್ಕೆ (ವಾ.ವಾ., ಡಿ. 22) ಗುರು ಜಗಳೂರು ಅವರು 'ಹಿಂದಿಯಲ್ಲಿ ಹಿಂದುಳಿಯುವುದೇಕೆ?' ಎಂಬ ಶಿರೋನಾಮೆಯಡಿ ಬರೆದ ಪತ್ರದಲ್ಲಿ (ವಾ.ವಾ., ಡಿ. 25), 'ಹಿಂದಿಯು ರಾಷ್ಟ್ರಭಾಷೆ ಹೌದೋ ಅಲ್ಲವೋ ಎಂಬ ವಾದಗಳ ನಡುವೆ ಹಿಂದಿ ಭಾಷೆಯನ್ನು ಕಲಿಯುವುದರಿಂದ ಆಗುವ ಅನುಕೂಲಗಳ ಬಗ್ಗೆ ನಾವು ಕುರುಡರಾಗಿದ್ದೇವೆ' ಎಂದಿದ್ದಾರೆ. ಈ ಹೇಳಿಕೆ ಸಂಪೂರ್ಣವಾಗಿ ಒಪ್ಪುವಂತಹದ್ದು. ನಾನು ನನ್ನ 58ನೇ ವಯಸ್ಸಿನಲ್ಲಿ ಹಿಂದಿ ಭಾಷೆಯ ಪರೀಕ್ಷೆಗಳನ್ನು ಎದುರಿಸಿದ್ದೇನೆ ಮತ್ತು ಸಂಸ್ಕೃತದಲ್ಲಿ ಒಂದು ಪರೀಕ್ಷೆಯನ್ನು ಬರೆದಿದ್ದೇನೆ. ಎರಡರಲ್ಲೂ ಮೊದಲ ದರ್ಜೆಯಲ್ಲಿ ತೇರ್ಗಡೆಯಾಗಿದ್ದೇನೆ.

ಪ್ರಪಂಚದ ಬಹುತೇಕ ರಾಷ್ಟ್ರಗಳು ತಮ್ಮದೇ ಆದ ರಾಷ್ಟ್ರಭಾಷೆಯನ್ನು ಹೊಂದಿವೆ. ಭಾರತದಲ್ಲಿ ಹಿಂದಿ ಮತ್ತು ಇಂಗ್ಲಿಷ್ ಆಡಳಿತ ಭಾಷೆಗಳಾಗಿದ್ದವು. ಭಾರತಕ್ಕೆ ರಾಷ್ಟ್ರಭಾಷೆ ಇಲ್ಲದ ಕಾರಣ, ಬ್ರಿಟಿಷರ ಕೊಡುಗೆಯಾದ ಇಂಗ್ಲಿಷ್ ಬದಲಿಗೆ ಬಹುಜನರ ಭಾಷೆಯಾಗಿರುವ ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿಸಬೇಕೆಂದು, ಮೊದಲ ಹಿಂದಿ ಸಾಹಿತ್ಯ ಸಮ್ಮೇಳನದಲ್ಲಿ ಮಹಾತ್ಮ ಗಾಂಧಿ ಹೇಳಿದ್ದರು. ನೆಹರೂ ಪ್ರಧಾನಿಯಾಗಿದ್ದ ಕಾಲದಲ್ಲಿ 'ಹಿಂದಿ ದಿವಸ್' ಆಚರಣೆಯನ್ನು ಆರಂಭಿಸಲಾಯಿತು. ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿಸುವ ದಿಸೆಯಲ್ಲಿ ಆ ಭಾಷೆಯನ್ನು ಹಂತ ಹಂತವಾಗಿ ಕಲಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಹಿಂದಿ ಭಾಷಾ ಬೆಳವಣಿಗೆಗೆ ಶ್ರಮಿಸಿದವರಿಗೆ ಪ್ರಶಸ್ತಿ, ಪುರಸ್ಕಾರಗಳನ್ನು ನೀಡುತ್ತಾ ಬರಲಾಯಿತು. ಸ್ವಾತಂತ್ರ್ಯ ಗಳಿಸಿದ ನಂತರ ಅತಿ ಹೆಚ್ಚು ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷವೂ ಹಿಂದಿ ಭಾಷೆಯನ್ನು ರಾಷ್ಟ್ರಭಾಷೆಯನ್ನಾಗಿಸಲು ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿತ್ತು. ಕೇಂದ್ರದಲ್ಲಿ ಬಿಜೆಪಿ ಆಡಳಿತಕ್ಕೆ ಬಂದ ನಂತರ, ಕಾಂಗ್ರೆಸ್ ಪಕ್ಷವು ಕರ್ನಾಟಕದಲ್ಲಿ ಮಾತ್ರ ಹಿಂದಿ ಭಾಷೆಯ ಬಗ್ಗೆ ವಿರೋಧ ವ್ಯಕ್ತಪಡಿಸುತ್ತಿರುವುದು ವಿಪರ್ಯಾಸ. ತಮಿಳು ಭಾಷಿಕರಂತೂ ಹಿಂದಿಯನ್ನು ಸ್ವೀಕರಿಸದಿರಲು ದಶಕಗಳ ಹಿಂದೆಯೇ ನಿರ್ಧರಿಸಿದ್ದಾರೆ. ಯಾವುದೇ ದೇಶವಾಗಲಿ ತನ್ನದೇ ಆದ ರಾಷ್ಟ್ರಭಾಷೆಯನ್ನು ಹೊಂದಿರಬೇಕು ಮತ್ತು ಆ ಭಾಷೆಯು ದೇಶವನ್ನು ಒಗ್ಗೂಡಿಸಲು ಸಹಕಾರಿ ಆಗುವಂತಿರಬೇಕು.

ಜಿ.ನಾಗೇಂದ್ರ ಕಾವೂರು, ಸಂಡೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸ್ಥಿರತೆ ಕಾಣದ ಹಣದುಬ್ಬರ
ಗ್ರಾಹಕರಿಗೆ ಬೆಲೆ ಏರಿಕೆ ಬಿಸಿ

2023, ದೇಶದ ಆರ್ಥಿಕತೆಗೆ ಹೂವಿನ ಹಾದಿಯಾಗಿರಲಿಲ್ಲ. ವಿವಿಧ ಕಾರಣಗಳಿಂದಾಗಿ ಷೇರುಪೇಟೆ ಭಾರಿ ಏರಿಳಿತಕ್ಕೆ ಕಂಡಿದ್ದರೆ, ಅದರಿಂದ ನಷ್ಟ ಅನುಭವಿಸಿದವರೂ ಇದ್ದಾರೆ ಲಾಭ ಮಾಡಿಕೊಂಡವರೂ ಇದ್ದಾರೆ. ವರ್ಷವಿಡೀ ಏರಿಳಿಯುತ್ತಲೇ ಇದ್ದ ಹಣದುಬ್ಬರವು ಶ್ರೀಸಾಮಾನ್ಯನ ದೈನಂದಿನ ಬದುಕನ್ನು ಬಿಗಡಾಯಿಸಿದ್ದಂತೂ ಸುಳ್ಳಲ್ಲ. ಬೆಲೆ ಏರಿಕೆ ಜನ ಸಾಮಾನ್ಯರನ್ನು ಬಾಧಿಸಿದೆ. ಇವೆಲ್ಲವುಗಳ ಮಧ್ಯೆ ವರ್ಷಾಂತ್ಯದ ವೇಳೆಗೆ ಷೇರುಪೇಟೆ ಹೊಸ ದಾಖಲೆಗಳನ್ನು ಬರೆಯುತ್ತಿದೆ

● ಕೆ.ಎಚ್. ಓಬಳೇಶ್

ಈ ವರ್ಷ ಗ್ರಾಹಕರ ದರ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರವು ಸ್ಥಿರತೆ ಕಾಯ್ದುಕೊಳ್ಳಲಿಲ್ಲ. ಜನವರಿ ತಿಂಗಳ ಆರಂಭದಿಂದಲೂ ಗ್ರಾಹಕರ ದಿನಬಳಕೆಯ ಪಟ್ಟಿಯಲ್ಲಿರುವ ಸರಕುಗಳ ದರ ಹೆಚ್ಚಳವಾಯಿತು. ವರ್ಷ ಮುಗಿಯುವ ಹಂತದಲ್ಲಿಯೂ ದಿನಕ್ಕೊಂದು ಹೊಸ ಸರಕು ಈ ಪಟ್ಟಿಗೆ ಸೇರ್ಪಡೆಯಾಗುತ್ತಿದೆ.

ಜನವರಿಯಲ್ಲಿ ಚಿಲ್ಲರೆ ಹಣದುಬ್ಬರ ಶೇ 6.52ರಷ್ಟು ಗರಿಷ್ಠ ಮಟ್ಟದಲ್ಲಿ ದಾಖಲಾಯಿತು. ಫೆಬ್ರುವರಿಯಲ್ಲಿ ಶೇ 6.44ಕ್ಕೆ ಇಳಿಯಿತು. ಮಾರ್ಚ್‌ನಲ್ಲಿ ಶೇ 5.66ರಷ್ಟು ದಾಖಲಾದ ಹಣದುಬ್ಬರವು ಏಪ್ರಿಲ್‌ನಲ್ಲಿ ಶೇ 4.70ರಷ್ಟಕ್ಕೆ ಇಳಿಯಿತು. ಮೇ ತಿಂಗಳಿನಲ್ಲಿ ಶೇ 4.25, ಜೂನ್‌ನಲ್ಲಿ ಶೇ 4.81ರಷ್ಟು ದಾಖಲಾಯಿತು. ಜುಲೈನಲ್ಲಿ ಶೇ 7.44ರಷ್ಟಕ್ಕೆ ಜಿಗಿದು ಗ್ರಾಹಕರಿಗೆ ದರ ಏರಿಕೆಯ ಬಿಸಿ ಮುಟ್ಟಿಸಿತು.

ಆಗಸ್ಟ್‌ನಲ್ಲಿ ಶೇ 6.83ರಷ್ಟಕ್ಕೆ ಇಳಿದರೂ ಗ್ರಾಹಕರು ಆಹಾರ ಪದಾರ್ಥಗಳ ದರ ಏರಿಕೆಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಸೆಪ್ಟೆಂಬರ್‌ನಲ್ಲಿ ಶೇ 5.02ಕ್ಕೆ ಇಳಿದ ಹಣದುಬ್ಬರವು, ಅಕ್ಟೋಬರ್‌ನಲ್ಲಿ ಶೇ 4.87ರಷ್ಟು ದಾಖಲಾಗುವ ಮೂಲಕ ಮೂರು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಯಿತು. ಆದರೆ, ನವೆಂಬರ್‌ನಲ್ಲಿ ಶೇ 5.55ರಷ್ಟು ದಾಖಲಾಗಿದೆ.

ದೇಶದಲ್ಲಿ ಈ ಬಾರಿ ಮುಂಗಾರು ಹಂಗಾಮಿನ ಕೊರತೆ ತಲೆದೋರಿದೆ. ಬರ ಪರಿಸ್ಥಿತಿಯಿಂದಾಗಿ ಆಹಾರದ ಉತ್ಪಾದನೆಯೂ ಕುಸಿದಿದೆ. ಹಾಗಾಗಿ, ಡಿಸೆಂಬರ್‌ನಲ್ಲಿಯೂ ಚಿಲ್ಲರೆ ಹಣದುಬ್ಬರ ಏರಿಕೆಯಾಗಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ.



ಸಗಟು ಹಣದುಬ್ಬರವೂ ಏರಿಕೆ: ದೇಶದಲ್ಲಿ ಮಾರ್ಚ್ ತಿಂಗಳಿನಿಂದ ಅಕ್ಟೋಬರ್‌ವರೆಗೆ ಸಗಟು ಹಣದುಬ್ಬರವು ಶೂನ್ಯಕ್ಕಿಂತ ಕಡಿಮೆ ಇತ್ತು. ನವೆಂಬರ್‌ನಲ್ಲಿ ಶೇ 0.26ಕ್ಕೆ ಏರಿಕೆಯಾಯಿತು. ಆಹಾರ ಪದಾರ್ಥಗಳು, ಖನಿಜಗಳು, ಯಂತ್ರಗಳು ಮತ್ತು ಉಪಕರಣಗಳು, ಕಂಪ್ಯೂಟರ್‌ಗಳು, ಎಲೆಕ್ಟ್ರಾನಿಕ್ಸ್ ಮತ್ತು ಆಪ್ಟಿಕಲ್ ಉತ್ಪನ್ನಗಳು, ಮೋಟಾರು ವಾಹನಗಳು ಸೇರಿದಂತೆ ಸಾರಿಗೆ ಉಪಕರಣಗಳ ಬೆಲೆ ಏರಿಕೆ ಇದಕ್ಕೆ ಕಾರಣವಾಯಿತು.

ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವೂ (ಸಿಎಫ್‌ಪಿಐ) ಏರಿಕೆಯಾಗಿದೆ. ಜುಲೈನಲ್ಲಿ ಶೇ 11.51ರಷ್ಟು ಇದ್ದಿದ್ದು, ಅಕ್ಟೋಬರ್‌ನಲ್ಲಿ ಶೇ 6.61ಕ್ಕೆ ಇಳಿಕೆಯಾಗಿತ್ತು. ನವೆಂಬರ್‌ನಲ್ಲಿ ಮತ್ತೆ ಶೇ 8.70ಕ್ಕೆ ತಲುಪಿದೆ.

ಬದಲಾಗದ ರೆಪೊ ದರ: ಫೆಬ್ರುವರಿ 8ರಂದು ನಡೆದ ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯಲ್ಲಿ ರೆಪೊ ದರವನ್ನು ಶೇ 6.50ಕ್ಕೆ ಹೆಚ್ಚಿಸಲಾಗಿತ್ತು. ಡಿಸೆಂಬರ್ 8ರಂದು ನಡೆದ ಸಭೆಯಲ್ಲೂ ಇದು ಇಳಿಕೆಯಾಗಲಿಲ್ಲ. ಹಣದುಬ್ಬರ ತಗ್ಗಿಸಲು ಈ ನಿಲುವು ಅನಿವಾರ್ಯ ಎಂದು ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ. ಆದರೆ, ಗೃಹ ಸಾಲದ ಇಎಂಐ ಇಳಿಕೆಯ ನಿರೀಕ್ಷೆಯಲ್ಲಿದ್ದ ಗೃಹ ಸಾಲಗಾರರು ನಿರಾಶೆ ಅನುಭವಿಸುವಂತಾಯಿತು.

ಹಣದುಬ್ಬರದ ಸ್ಥಿರತೆ ಕಷ್ಟಕರ: ಬಿಗಿಯಾದ ಹಣಕಾಸು ನೀತಿ ಹಾಗೂ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡರೂ ದೇಶದಲ್ಲಿ ಹಣದುಬ್ಬರವನ್ನು ಶೇ 4ಕ್ಕೆ ಸ್ಥಿರಗೊಳಿಸುವುದು ಕಷ್ಟಸಾಧ್ಯ. ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 5.4ರಲ್ಲಿಯೇ ಮುಂದುವರಿಯಲಿದೆ ಎಂದು ಡಿಸೆಂಬರ್‌ನಲ್ಲಿ ಬಿಡುಗಡೆಯಾದ ಆರ್‌ಬಿಐ ವರದಿ ಹೇಳಿದೆ.

ತಲ್ಲಣ ಸೃಷ್ಟಿಸಿದ ಟೊಮೆಟೊ ದರ: ಮೇ ತಿಂಗಳಿನಲ್ಲಿ ಟೊಮೆಟೊ ಧಾರಣೆ ಏರಿಕೆಯ ಹಾದಿ ಹಿಡಿಯಿತು. ಜುಲೈ ತಿಂಗಳ ಮಧ್ಯದ ವೇಳೆಗೆ ಒಂದು ಕೆ.ಜಿ ದರ ₹ 200ಕ್ಕೆ ಏರಿಕೆಯಾಗಿ ಗ್ರಾಹಕರ ಜೇಬಿಗೆ ಕತ್ತರಿ ಹಾಕಿತು. ಕೋಲಾರದ ಮಾರುಕಟ್ಟೆಯಲ್ಲಿ 15 ಕೆ.ಜಿ ತೂಕದ ಟೊಮೆಟೊ ಬಾಕ್ಸ್‌ನ ಸಗಟು ದರ ₹2,200ಕ್ಕೆ ಮುಟ್ಟಿ ದಾಖಲೆ ಬರೆಯಿತು. ಸೆಪ್ಟೆಂಬರ್ 6ಕ್ಕೆ ಒಂದು ಬಾಕ್ಸ್ ಟೊಮೆಟೊ ಸಗಟು ದರವು ₹100ರಿಂದ ₹150ಕ್ಕೆ ಇಳಿಯಿತು. ಇದೇ ತಿಂಗಳ ಅಂತ್ಯದಲ್ಲಿ ಚಿಲ್ಲರೆ ಮಾರಾಟ ದರ ₹10ರಿಂದ ₹8ಕ್ಕೆ ಕುಸಿಯಿತು.

ಕಣ್ಣೀರು ತರಿಸಿದ ಈರುಳ್ಳಿ: ದೇಶದಲ್ಲಿ ಉತ್ಪಾದನೆ ಕುಸಿತದಿಂದಾಗಿ ಅಕ್ಟೋಬರ್ ಕೊನೆಯ ವಾರದಲ್ಲಿ ಈರುಳ್ಳಿ ಧಾರಣೆ ಏರಿಕೆಯಾಯಿತು. ದೆಹಲಿಯಲ್ಲಿ ಒಂದು ಕೆ.ಜಿ ಈರುಳ್ಳಿ ಬೆಲೆ ₹80 ದಾಟಿತು. ಕೊನೆಗೆ, ಡಿಸೆಂಬರ್ 8ರಂದು ಮಧ್ಯಪ್ರವೇಶಿಸಿದ ಕೇಂದ್ರ ಸರ್ಕಾರವು, 2024ರ ಮಾರ್ಚ್ 31ರವರೆಗೆ ಈರುಳ್ಳಿ ರಫ್ತು ನಿಷೇಧಿಸಿ ಆದೇಶ ಹೊರಡಿಸಿತು.

ಬೆಳ್ಳುಳ್ಳಿ ಬೆಲೆಯೂ ದುಬಾರಿ: ಡಿಸೆಂಬರ್ ಎರಡನೇ ವಾರದಲ್ಲಿ ಬೆಳ್ಳುಳ್ಳಿ ಬೆಲೆ ಏರಿಕೆ ಕಂಡಿತು. ನಾಟಿ ಬೆಳ್ಳುಳ್ಳಿ ಒಂದು ಕೆ.ಜಿ ₹400ರ ವರೆಗೆ ಮಾರಾಟವಾದರೆ, ಹೈಬ್ರಿಡ್ ಬೆಳ್ಳುಳ್ಳಿ ದರ ₹300 ದಾಟಿತು. ವರ್ಷಾಂತ್ಯದಲ್ಲಿ ಗ್ರಾಹಕರು ತೊಂದರೆಗೆ ಸಿಲುಕುವಂತಾಯಿತು.

ಹಿಂಡನ್‌ಬರ್ಗ್ ವರದಿ ಸೃಷ್ಟಿಸಿದ ವಿವಾದ

ಅದಾನಿ ಸಮೂಹದ ಪಾಲಿಗೆ ಜನವರಿ 24 ಮರೆಯಲಾಗದ ದಿನ. ಅಂದು ಅಮೆರಿಕ ಮೂಲದ ಶಾರ್ಟ್ ಸೆಲ್ಲರ್ ಕಂಪನಿ 'ಹಿಂಡನ್‌ಬರ್ಗ್ ರಿಸರ್ಚ್' ಬಿಡುಗಡೆಗೊಳಿಸಿದ ವರದಿಯು ಭಾರತೀಯ ಷೇರುಪೇಟೆ ಹಾಗೂ ಕಾರ್ಪೊರೇಟ್ ವಲಯದಲ್ಲಿ ತಲ್ಲಣ ಸೃಷ್ಟಿಸಿತು.

ವಾಸ್ತವಿಕ ಬೆಲೆಗಿಂತ ಶೇ 80ರಷ್ಟು ಹೆಚ್ಚು ಕೃತಕ ಬೆಲೆಯಲ್ಲಿ ಅದಾನಿ ಸಮೂಹದ ಷೇರುಗಳು ಮಾರಾಟವಾಗುತ್ತಿವೆ. ಷೇರುಪೇಟೆಯಲ್ಲಿ ಆ ಸಮೂಹ ನಡೆಸಿರುವ ಅವ್ಯವಹಾರವೇ ಇದಕ್ಕೆ ಕಾರಣ ಎನ್ನುವುದು 32 ಸಾವಿರ ಪದಗಳಿದ್ದ ಈ ವರದಿಯ ಸಾರವಾಗಿತ್ತು.

ಈ ವರದಿಯಿಂದಾಗಿ ಹೂಡಿಕೆದಾರರ ಸಂಪತ್ತಿನಲ್ಲಿ ₹11.8 ಲಕ್ಷ ಕೋಟಿ ಕರಗಿತು. ಅದಾನಿ ಕಂಪನಿಗಳ ಷೇರು ಮೌಲ್ಯವು ₹8 ಲಕ್ಷ ಕೋಟಿಯಷ್ಟು ನಷ್ಟಕ್ಕೀಡಾಯಿತು. ಅದಾನಿಗೆ ಸಾಲ ನೀಡಿದ್ದ ಬ್ಯಾಂಕ್‌ಗಳ ಷೇರು ಮೌಲ್ಯವೂ ಕುಸಿಯಿತು.

ಮತ್ತೆ ಅದಾನಿ ಸಮೂಹವು ಸರಿಯಾದ ಹಳಿಗೆ ಮರಳಲು ಡಿಸೆಂಬರ್ 5ರವರೆಗೂ ಕಾಯಬೇಕಾಯಿತು. ಶ್ರೀಲಂಕಾದ ಕೊಲಂಬೊ ಬಂದರಿನಲ್ಲಿ ಕಂಟೇನರ್ ಟರ್ಮಿನಲ್ ನಿರ್ಮಿಸಲು ಅದಾನಿ ಪೋರ್ಟ್ ಎಸ್‌ಇಝಡ್ ಮುಂದಾಗಿತ್ತು. ಈ ಯೋಜನೆಗಾಗಿ ಅಮೆರಿಕದ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ ಫೈನಾನ್ಸ್ ಕಾರ್ಪೋರೇಷನ್‌ನಿಂದ (ಡಿಎಫ್‌ಸಿ) ಸಾಲದ ನೆರವು ಕೋರಿತ್ತು. ಹಿಂಡನ್‌ಬರ್ಗ್ ವರದಿ ಪರಿಶೀಲಿಸಿದ್ದ ಈ ಸಾಲದಾತ ಸಂಸ್ಥೆಯು ಅದೊಂದು 'ಆಧಾರರಹಿತ' ವರದಿ ಎಂದಿದ್ದು, ಅದಾನಿ ಸಮೂಹದ ಪಾಲಿಗೆ ವರದಾನವಾಯಿತು. ವರ್ಷಾಂತ್ಯಕ್ಕೆ ಅದಾನಿ ಕಂಪನಿಯ ಷೇರುಗಳು ಚೇತರಿಕೆಯ ಹಾದಿಗೆ ಮರಳಿವೆ.



ಪ್ರಮುಖ ಒಪ್ಪಂದಗಳು

- ಫೆಬ್ರುವರಿ ತಿಂಗಳ ಮೊದಲ ವಾರದಲ್ಲಿ ಅಂಬುಜಾ ಸಿಮೆಂಟ್ ಮತ್ತು ಅಸೋಸಿಯೇಟೆಡ್ ಸಿಮೆಂಟ್ ಕಂಪನಿಯಲ್ಲಿ (ಎಸಿಸಿ) ಅತಿಹೆಚ್ಚಿನ ಷೇರು ಖರೀದಿ ಸಂಬಂಧ ಅದಾನಿ ಸಮೂಹ ಮತ್ತು ಹೋಲಿಮ್ಸ್ ಗ್ರೂಪ್ ನಡುವೆ ಒಪ್ಪಂದ ಏರ್ಪಟ್ಟಿತು. ಸುಮಾರು ₹85 ಸಾವಿರ ಕೋಟಿ ಮೊತ್ತದ ಈ ಒಪ್ಪಂದ ಪ್ರಕ್ರಿಯೆಯು ಸೆಪ್ಟೆಂಬರ್ 16ರಂದು ಪೂರ್ಣಗೊಂಡಿತು
- ಫೆಬ್ರುವರಿ 10ರಂದು ಸೊನಾಟಾ ಫೈನಾನ್ಸ್ ಪ್ರೈವೆಟ್ ಲಿಮಿಟೆಡ್‌ನ ಶೇ 100ರಷ್ಟು ಪಾಲನ್ನು ₹537 ಕೋಟಿಗೆ ಖರೀದಿಸುವುದಾಗಿ ಕೋಟಕ್ ಮಹೀಂದ್ರಾ ಬ್ಯಾಂಕ್ ಘೋಷಿಸಿತ್ತು. ಅಕ್ಟೋಬರ್ 20ರಂದು ಭಾರತೀಯ ರಿಸರ್ವ್ ಬಾಂಕ್ ಇದಕ್ಕೆ ಹಸಿರು ನಿಶಾನೆ ನೀಡಿತು
- ಫೆಬ್ರುವರಿ 15ರಂದು ಟಾಟಾ ಗ್ರೂಪ್ ಒಡೆತನದ ಏರ್ ಇಂಡಿಯಾವು ಫ್ರಾನ್ಸ್‌ನ ಏರ್‌ಬಸ್ ಕಂಪನಿಯಿಂದ 250 ವಿಮಾನ ಹಾಗೂ ಅಮೆರಿಕದ ಬೋಯಿಂಗ್ ಕಂಪನಿಯಿಂದ 220 ವಿಮಾನಗಳ ಖರೀದಿಗೆ ಒಪ್ಪಂದ ಘೋಷಿಸಿತು. ಇದು ಜಾಗತಿಕ ವಿಮಾನಯಾನ ಕ್ಷೇತ್ರದಲ್ಲಿನ ಅತಿದೊಡ್ಡ ವಿಮಾನ ಖರೀದಿ ಒಪ್ಪಂದ ಎಂದು ಹೇಳಲಾಗಿದೆ. ಇದರ ಒಟ್ಟು ಮೊತ್ತ ₹6.40 ಲಕ್ಷ ಕೋಟಿ
- ಜುಲೈ 10ರಂದು ಒಎಲ್‌ಎಕ್ಸ್ ಆಟೋಸ್ ಬ್ರ್ಯಾಂಡ್‌ನಡಿ ಹಳೆಯ ಕಾರುಗಳ ಮಾರಾಟದ ಸೇವೆ ನೀಡುವ ಸೊಬೆಕ್ ಆಟೊ ಇಂಡಿಯಾವನ್ನು ಮುಂಬೈ ಮೂಲದ ಕಾರ್ ಟ್ರೇಕ್ ಟೆಕ್ ಒಟ್ಟು ₹537.43 ಕೋಟಿಗೆ ಖರೀದಿಸಿತು
- ಮೇ 17ರಂದು ಪಿವಿಆರ್ ಮತ್ತು ಐನಾಕ್ಸ್ ಕಂಪನಿಗಳು ವಿಲೀನವನ್ನು ಘೋಷಿಸಿದವು. ಕೋವಿಡ್ ಕಾಲಘಟ್ಟದಲ್ಲಿ ಭಾರತದ ಸಿನಿಮಾ ಪ್ರದರ್ಶನ ವಲಯ ಬಿಕ್ಕಟ್ಟು ಎದುರಿಸಿತ್ತು. ಒಟಿಟಿ ವೇದಿಕೆಗಳ ಬೆಳವಣಿಗೆಯಿಂದಾಗಿ ತೊಂದರೆಗೆ ಸಿಲುಕಿದ್ದ ಎರಡೂ ಕಂಪನಿಗಳು ಈ ವಿಲೀನಕ್ಕೆ ಅಂಕಿತ ಹಾಕಿದವು ಐನಾಕ್ಸ್ ಆಸ್ತಿ ಮೌಲ್ಯ ಸುಮಾರು ₹3,784 ಕೋಟಿ ಇದ್ದರೆ, ಪಿವಿಆರ್ ₹7,450 ಕೋಟಿ ಮೌಲ್ಯ ಹೊಂದಿದೆ
- ಬಾಲಿವುಡ್ ನಟಿ ಆಲಿಯಾ ಭಟ್ ಸ್ಥಾಪಿಸಿದ ಸಿದ್ಧಉಡುಪುಗಳ ಕಂಪನಿಯಾದ 'ಎಡ್-ಎ-ಮಮ್ಮಾ' ಜತೆಗೆ ರಿಲಯನ್ಸ್ ರಿಟೇಲ್ ವೆಂಚರ್ಸ್ ಕಂಪನಿಯು (ಆರ್‌ಆರ್‌ವಿಎಲ್) ಸೆಪ್ಟೆಂಬರ್ 6ರಂದು ಜಂಟಿ ಉದ್ಯಮಕ್ಕೆ ಸಹಿ ಹಾಕಿತು. ಶೇ 51ರಷ್ಟು ಷೇರುಗಳನ್ನು ರಿಲಯನ್ಸ್ ಖರೀದಿಸಿದೆ. 'ಎಡ್ ಎ ಮಮ್ಮಾ' ಕಂಪನಿಯು 2ರಿಂದ 12 ವರ್ಷ ವಯಸ್ಸಿನವರ ಉಡುಪುಗಳನ್ನು ಸಿದ್ಧಪಡಿಸುತ್ತದೆ
- ಡಿಸೆಂಬರ್ 17ರಂದು ಅದಾನಿ ಸಮೂಹದ ಅಂಗಸಂಸ್ಥೆಯಾದ ಎಎಂಜಿ ಮೀಡಿಯಾ ನೆಟ್‌ವರ್ಕ್ಸ್ ಕಂಪನಿಯು ಸುದ್ದಿಸಂಸ್ಥೆಯಾದ ಐಎಎನ್‌ಎಸ್ ಇಂಡಿಯಾ ಪ್ರೈವೆಟ್ ಲಿಮಿಟೆಡ್‌ನಲ್ಲಿ ಶೇ 50.50ರಷ್ಟು ಷೇರುಗಳ ಮೇಲೆ ಒಡೆತನ ಸ್ಥಾಪಿಸಿತು

ಲಾಭ ತಂದುಕೊಟ್ಟ ಷೇರುಪೇಟೆ



ಜನವರಿ 2ರಂದು 61,000 ಅಂಶ ದಾಟುವ ಮೂಲಕ ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ ಶುಭಾರಂಭ ಮಾಡಿತು. ಡಿಸೆಂಬರ್ 15ರಂದು 71,000 ಅಂಶಗಳನ್ನು ದಾಟಿ ಸಾರ್ವಕಾಲಿಕ ದಾಖಲೆ ಬರೆಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಕೂಡ ಈ ವರ್ಷ 21,000 ಅಂಶ ದಾಟಿದೆ.

ಪ್ರಸಕ್ತ ವರ್ಷದಲ್ಲಿ ಷೇರು ಮಾರುಕಟ್ಟೆಯು ಹೂಡಿಕೆದಾರರ ಪಾಲಿಗೆ ಒಳ್ಳೆಯ ಫಲ ನೀಡಿದೆ. ಲಾರ್ಜ್ ಕ್ಯಾಪ್‌ಕ್ಕಿಂತ ಸ್ಮಾಲ್ ಕ್ಯಾಪ್ ಮತ್ತು ಮಿಡ್ ಕ್ಯಾಪ್ ಷೇರುಗಳು ಹೆಚ್ಚು ಲಾಭ ತಂದುಕೊಟ್ಟಿವೆ. ನಿಫ್ಟಿಯು ಹೂಡಿಕೆದಾರರಿಗೆ ಶೇ 17ರಷ್ಟು ಲಾಭ ತಂದುಕೊಟ್ಟಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ. ಸಂಪತ್ತು ವೃದ್ಧಿಯಲ್ಲಿ ಮ್ಯೂಚುವಲ್ ಫಂಡ್‌ಗಳು ಅತಿದೊಡ್ಡ ಚಾಲನಾ ಶಕ್ತಿಯಾಗಿವೆ. ವ್ಯವಸ್ಥಿತ ಹೂಡಿಕೆ ಯೋಜನೆಯಡಿ (ಎಸ್‌ಐಪಿ) ಹೂಡಿಕೆ ಏರುಗತಿಯಲ್ಲಿದೆ. ಜನವರಿಯಿಂದ ನವೆಂಬರ್‌ವರೆಗೆ ₹1.66 ಲಕ್ಷ ಕೋಟಿ ಹೂಡಿಕೆಯಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ ₹1.5 ಲಕ್ಷ ಕೋಟಿ ಹೂಡಿಕೆಯಾಗಿತ್ತು.

ಮಿನುಗಿದ ಬಂಗಾರ: ಚಿನಿವಾರ ಪೇಟೆಯ ಅಂಕಿ–ಅಂಶದ ಪ್ರಕಾರ ಹಿಂದಿನ ವರ್ಷಕ್ಕೆ ಹೋಲಿಸಿದರೆ ಚಿನ್ನವು ಶೇ 13ರಷ್ಟು ವರಮಾನ ತಂದುಕೊಟ್ಟರೆ, ಬೆಳ್ಳಿಯು ಶೇ 5ರಷ್ಟು ಲಾಭ ತಂದು ಕೊಟ್ಟಿದೆ.

ರೂಪಾಯಿ ಸ್ಥಿರತೆ: ರೂಪಾಯಿ ಮೌಲ್ಯದ ಸ್ಥಿರತೆಗೆ ಭಾರತೀಯ ರಿಸರ್ವ್ ಬ್ಯಾಂಕ್ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಅನಗತ್ಯವಾಗಿ ಮಧ್ಯಪ್ರವೇಶಿಸಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ (ಐಎಂಎಫ್) ಆಕ್ಷೇಪಿಸಿತು. ಈ ಆರೋಪವನ್ನು ಆರ್‌ಬಿಐ ತಳ್ಳಿಹಾಕಿತು. ಈ ವರ್ಷ ರೂಪಾಯಿ ಮೌಲ್ಯ ಸ್ಥಿರತೆ ಕಾಯ್ದುಕೊಂಡಿದ್ದು ಮಾರುಕಟ್ಟೆಯಲ್ಲಿ ಸಕಾರಾತ್ಮಕ ಬೆಳವಣಿಗೆಗೆ ಕಾರಣವಾಯಿತು.

ಆಧಾರ: ಪಿಟಿಐ, ನಿಫ್ಟಿ, ಸೆನ್ಸೆಕ್ಸ್, ಕೇಂದ್ರ ಕೈಗಾರಿಕಾ ಹಾಗೂ ವಾಣಿಜ್ಯ ಸಚಿವಾಲಯದ ಆದೇಶಗಳು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಕುಸ್ತಿಪಟು ಬಜರಂಗ್ ಪೂನಿಯಾ ಅವರು ಮೋದಿ ಸರ್ಕಾರ ನೀಡಿರುವ ಪದ್ಮಶ್ರೀ ಪ್ರಶಸ್ತಿಯನ್ನೇನೋ ವಾಪಸ್ ಮಾಡಿದ್ದಾರೆ. ಅದೇ ಮೋದಿ ಸರ್ಕಾರವು ಪದ್ಮಶ್ರೀ ಪ್ರಶಸ್ತಿ ಜತೆಗೆ ನೀಡಿರುವ ₹10 ಲಕ್ಷ ನಗದನ್ನು ವಾಪಸ್ ನೀಡಿಲ್ಲ. ಅವರಿಗೆ ಸರ್ಕಾರದ ಹಣ ಬೇಕು, ಪ್ರಶಸ್ತಿ ಬೇಡ. ಪ್ರಶಸ್ತಿ ವಾಪಸ್ ಮಾಡುವುದಾದರೆ ಅದರ ಜತೆಗೆ ನೀಡಲಾಗಿರುವ ನಗದನ್ನೂ ವಾಪಸ್ ಮಾಡಬೇಕು. ಇವರದೆಲ್ಲಾ ನಕಲಿ ಪ್ರತಿಭಟನೆ' ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಕೆಲವು ಪೋಸ್ಟ್‌ಗಳಲ್ಲಿ ಪದ್ಮಶ್ರೀ ಪ್ರಶಸ್ತಿ ಜತೆಗೆ ₹15 ಲಕ್ಷ ನಗದು ನೀಡಲಾಗುತ್ತದೆ ಎಂದು ಇದ್ದರೆ, ಇನ್ನೂ ಕೆಲವು ಪೋಸ್ಟ್‌ಗಳಲ್ಲಿ ₹1 ಕೋಟಿ ನಗದು ನೀಡಲಾಗಿದೆ ಎಂದು ಹೇಳಲಾಗಿದೆ. ಆದರೆ ಪ್ರಶಸ್ತಿ ಜತೆಗೆ ನಗದು ನೀಡಲಾಗುತ್ತದೆ ಎಂದು ಈ ಎಲ್ಲಾ ಪೋಸ್ಟ್‌ಗಳಲ್ಲಿ ಇರುವುದು ತಪ್ಪು ಮಾಹಿತಿ.

ಕೇಂದ್ರ ಸರ್ಕಾರದ ಗೃಹ ಸಚಿವಾಲಯವು ಪದ್ಮ ಪುರಸ್ಕಾರಗಳನ್ನು ನೀಡುತ್ತದೆ. ಈ ಪುರಸ್ಕಾರಗಳಿಗೆ ಸಂಬಂಧಿಸಿದಂತೆ ಸಚಿವಾಲಯವು ಪ್ರತ್ಯೇಕ ಜಾಲತಾಣವನ್ನು ಹೊಂದಿದೆ. ಅವುಗಳಲ್ಲಿ ಪದ್ಮ ಪುಸರಸ್ಕಾರಗಳು, ಅವುಗಳನ್ನು ಯಾರಿಗೆ ನೀಡಲಾಗುತ್ತದೆ, ಆಯ್ಕೆ ಪ್ರಕ್ರಿಯೆ ಮತ್ತು ಆಯ್ಕೆ ಮಾನದಂಡಗಳು ಏನು ಎಂಬ ವಿವರಗಳೂ ಇವೆ. ಪ್ರಶಸ್ತಿಯು ಪದಕ, ರಾಷ್ಟ್ರಪತಿಯ ಸಹಿ ಇರುವ ಪ್ರಶಸ್ತಿ ಪತ್ರ ಹೊಂದಿರುತ್ತದೆ. ಜತೆಗೆ ಪದಕದ ಪ್ರತಿಕೃತಿಯೊಂದನ್ನೂ ನೀಡಲಾಗುತ್ತದೆ. ಪುರಸ್ಕೃತರು ಆ ಪ್ರತಿಕೃತಿಯನ್ನು ಸರ್ಕಾರಿ ಕಾರ್ಯಕ್ರಮಗಳಲ್ಲಿ ಧರಿಸಬಹುದು ಎಂಬ ವಿವರಗಳಿವೆ. ಈ ಪುರಸ್ಕಾರಗಳ ಜತೆಗೆ ನಗದು ನೀಡಲಾಗುತ್ತದೆ ಎಂಬ ಮಾಹಿತಿ ಇಲ್ಲ. ಹೀಗಾಗಿ ಪದ್ಮಶ್ರೀ ಪ್ರಶಸ್ತಿ ಜತೆಗೆ ಬಜರಂಗ್ ಪೂನಿಯಾ ಅವರಿಗೆ ನಗದು ನೀಡಲಾಗಿತ್ತು ಮತ್ತು ಅವರು ಅದನ್ನು ವಾಪಸ್ ಮಾಡಿಲ್ಲ ಎಂಬುದು ಸುಳ್ಳು ಮಾಹಿತಿ.

ಗುಂಡಣ್ಣ



ಪೂರ್ವತಯಾರಿಯ ಮಹತ್ವ

ನುಡಿ ಬೆಳಗು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ರೈತನೊಬ್ಬನ ಹತ್ತಿರ ಕೆಲಸ ಕೇಳಿಕೊಂಡು ಒಬ್ಬ ಯುವಕ ಬಂದ. ಕಟ್ಟುಮಸ್ತಾದ ಯುವಕನ ಹತ್ತಿರ ರೈತ ಕೇಳಿದ, 'ಇಲ್ಲಿ ಕೆಲಸ ಮಾಡಲು ನಿನಗಿರುವ ಅರ್ಹತೆ ಏನು?' ಆಗ ಆ ಯುವಕ 'ನಾನು ಎಂತಹ ಬಿರುಗಾಳಿಯಲ್ಲಿಯೂ ಆರಾಮವಾಗಿ ನಿದ್ದೆ ಮಾಡಬಲ್ಲೆ' ಅಂದ.

ರೈತನಿಗೆ ಅಚ್ಚರಿಯಾಯಿತು, ಅರೇ ಬಿರುಗಾಳಿಯಲ್ಲಿ ಮೈಯೆಲ್ಲ ಕಣ್ಣಾಗಿ ಎಷ್ಟು ಕೆಲಸ ಮಾಡಿದರೂ ಸಾಲದು, ಈ ಹುಡುಗ ಹೀಗನ್ನುತ್ತಿದ್ದಾನಲ್ಲ ಅಂದುಕೊಂಡ. ಆದರೂ ಆ ಯುವಕನ ವ್ಯಕ್ತಿತ್ವ ಇಷ್ಟವಾಗಿ ಅವನನ್ನು ಕೆಲಸಕ್ಕೆ ತೆಗೆದುಕೊಂಡ. ಕೆಲವು ವಾರಗಳ ನಂತರ ಒಂದು ದಿನ ನಡುರಾತ್ರಿಯಲ್ಲಿ ರೈತ ಹಾಗೂ ಅವನ ಹೆಂಡತಿಗೆ ಎಚ್ಚರವಾಯಿತು. ಭೀಕರ ಬಿರುಗಾಳಿ ಕಣಿವೆಯೊಳಗಿಂದ ಭೂಮಿಯನ್ನೇ ಅಲ್ಲಾಡಿಸುವಂತೆ ಬೀಸುತ್ತಿತ್ತು. ಗಾಬರಿಯಾಗಿ ಯುವಕನನ್ನು ಕರೆದರು. ಅವನು ಬರಲಿಲ್ಲ. ಹೋಗಿ ನೋಡಿದರೆ ಯುವಕ ಆರಾಮಾಗಿ ನಿದ್ದೆ ಮಾಡುತ್ತಿದ್ದಾನೆ.

ಯಾವ ಗಲಾಟೆಗೂ ಅವನಿಗೆ ಎಚ್ಚರವಾಗುವ ಹಾಗೆ ಕಾಣಲಿಲ್ಲ. ರೈತ ಮತ್ತು ಅವನ ಹೆಂಡತಿ ಇಬ್ಬರೂ ಬೇಗ ಬೇಗ ಎಲ್ಲವನ್ನೂ ಸರಿಮಾಡಲು ಹೊರಟರು. ಸರಿ ಮಾಡಲೇನಿದೆ? ತೋಟದ ಮನೆಯ ಬೇಲಿ ಬಂದೋಬಸ್ತಾಗಿತ್ತು. ಸೌದೆಯನ್ನು ಅಚ್ಚುಕಟ್ಟಾಗಿ ಜೋಡಿಸಿಡಲಾಗಿತ್ತು. ಶೆಡ್ಡಿನಲ್ಲಿ ವ್ಯವಸಾಯದ ಎಲ್ಲ ಉಪಕರಣಗಳನ್ನೂ ಅವುಗಳ ಸ್ಥಳದಲ್ಲೇ ಇಡಲಾಗಿತ್ತು. ಧಾನ್ಯದ ದಾಸ್ತಾನನ್ನು ಟಾರ್ಪಾಲಿನ್‌ನಿಂದ ಭದ್ರವಾಗಿ ಕಟ್ಟಿ ರಕ್ಷಿಸಿಡಲಾಗಿತ್ತು. ಟ್ರ್ಯಾಕ್ಟರ್ ಗ್ಯಾರೇಜಿನೊಳಗೆ ಸುರಕ್ಷಿತವಾಗಿತ್ತು. ಕೊಟ್ಟಿಗೆಯಲ್ಲಿ ಸಹ ಬೇಕಾದಷ್ಟು ನೀರು ಮೇವು ಇಟ್ಟು ಗಟ್ಟಿಯಾಗಿ ಬಾಗಿಲು ಕಿಟಕಿ ಹಾಕಿದ್ದರಿಂದ ದನಕರುಗಳು ಆರಾಮಾಗಿದ್ದವು. ಯಾವ ಕೆಲಸವನ್ನೂ ಗಡಿಬಿಡಿಯಿಂದ ಮಾಡಬೇಕೆಂದಿರಲಿಲ್ಲ. ಬಿರುಗಾಳಿಯಲ್ಲಿ ನಿದ್ದೆ ಮಾಡುವುದು ಒಂದು ಅರ್ಹತೆ ಎಂದ ಯುವಕನ ಮಾತು ಅರ್ಥವಾಗಿ ರೈತ ಮತ್ತವನ ಹೆಂಡತಿ ಇಬ್ಬರೂ ಮುಖಮುಖ ನೋಡಿಕೊಂಡು ಮುಗುಳ್ನಕ್ಕರು.

ಈ ಪುಟ್ಟ ಕಥೆಯಲ್ಲಿರುವ ನೀತಿ ಬಹು ಮುಖ್ಯವಾದದ್ದು. ವಾತಾವರಣ ಚೆನ್ನಾಗಿರುವಾಗ ಯುವಕ ತನ್ನ ಕೆಲಸವನ್ನು ಶ್ರದ್ಧೆಯಿಂದ, ಪ್ರಾಮಾಣಿಕತೆಯಿಂದ ಮಾಡಿದ್ದ. ಯಾವ ಬಿರುಗಾಳಿ ಮಳೆಗೂ ಏನೂ ಆಗದಂತೆ ತಯಾರಿ ನಡೆಸಿದ್ದ. ಹಾಗಾಗಿ ಬಿರುಗಾಳಿ ಬಂದಾಗ ಅವನಿಗೆ ತಲೆಕೆಡಿಸಿಕೊಳ್ಳುವ ಅಗತ್ಯವೇ ಬರಲಿಲ್ಲ. ಅದಕ್ಕಾಗಿಯೇ ನೆಮ್ಮದಿಯ ನಿದ್ದೆ ಮಾಡಿದ. ನಾವೂ ಅಷ್ಟೇ. ನಮ್ಮ ನಮ್ಮ ಪಾಲಿನ ಕೆಲಸವನ್ನು ಅಚ್ಚುಕಟ್ಟಾಗಿ ಆಯಾ ಸಮಯದಲ್ಲಿಯೇ ಮಾಡಿದರೆ ಯಾವ ಸಂದರ್ಭದಲ್ಲೂ ಒತ್ತಡಕ್ಕೊಳಗಾಗಬೇಕಿಲ್ಲ. ಕೊನೆಯ ಕ್ಷಣದಲ್ಲಿ ಹತಾಶರಾಗಬೇಕಿಲ್ಲ. ಅದು ಅಂದಂದೇ ಓದಬೇಕಾದ ಪಾಠವಿರಬಹುದು, ಪ್ರತೀ ತಿಂಗಳು ಕಷ್ಟಪಟ್ಟಾದರೂ ಉಳಿಸಬೇಕಾದ ಹಣವಿರಬಹುದು. ಬದುಕಿನಲ್ಲಿ ಪೂರ್ವತಯಾರಿ ಬಹುಮುಖ್ಯ. ಅದಿಲ್ಲದೇ ಮನೆಗೆ ಬೆಂಕಿ ಬಿದ್ದಾಗ ಬಾವಿ ತೋಡಿದರೆ ಮನೆಯೂ ಉಳಿಯದು, ಬಾವಿ ತೋಡಿದ್ದೂ ಪ್ರಯೋಜನವಾಗದು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಡಿಸೆಂಬರ್ 28, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಪ್ರತಿಪದ್ ಗಂ. 06-47 ನಕ್ಷತ್ರ: ಪುನರ್ವಸು ಗಂ. 25-05 ಯೋಗ: ಇಂದ್ರ ಗಂ 26-23 ಕರಣ: ಕೌಲವ ಗಂ. 06-47, ಧನು ಮಾಸದ 12 ನೇ ದಿನ, ಮಳೆನಕ್ಷತ್ರ: ಮೂಲಾ 4. ರಾಹುಕಾಲ : ಮಧ್ಯಾಹ್ನ 01-30 – 03-00,
ಸೂರ್ಯೋದಯ : 06-55 ಸೂರ್ಯಾಸ್ತ : 06-08 ಮುಸ್ಲಿಂ ದಿನಾಂಕ : 14 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 7, 3

ಮೇಷ: ಮನೆಯಲ್ಲಿ ಎಲ್ಲರ ಮನಮುಟ್ಟುವಂತೆ ಸ್ಪಷ್ಟ ಮಾತುಗಳಲ್ಲಿ ನಿರ್ಧಾರವನ್ನು ತಿಳಿಯಪಡಿಸಿ. ತಂದೆ ಮಕ್ಕಳಲ್ಲಿ ಅನ್ಯೋನ್ಯತೆ ಕಡಿಮೆ ಯಾಗದಂತೆ ಜಾಗ್ರತೆವಹಿಸಿ. ಅತಿಯಾದ ಸೋಮಾರಿತನ ಆವರಿಸಿಕೊಳ್ಳಲಿದೆ.

ವೃಷಭ: ತಾಂತ್ರಿಕ ಕ್ಷೇತ್ರದಲ್ಲಿ ಹೆಚ್ಚಿನ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳ ಜತೆಗೆ ಸ್ವಂತ ಉದ್ಯಮ ಸ್ಥಾಪಿಸುವ ಚೈತನ್ಯ ಮೂಡಿಬರಲಿದೆ. ಸಂಗಾತಿಯೊಂದಿಗೆ ಬಾಂಧವ್ಯ ವೃದ್ಧಿಯಾಗಲಿದೆ.

ಮಿಥುನ: ತಪ್ಪನ್ನು ಮಾಡದಿದ್ದರೂ ಅದರ ಅಪವಾದ ನಿಮ್ಮನ್ನು ಸುತ್ತುಕೊಳ್ಳುವ ಪ್ರಸಂಗ ನಡೆಯಬಹುದು. ವಸ್ತ್ರ ವ್ಯಾಪಾರಿಗಳಿಗೆ ಈ ದಿನ ಅಧಿಕ ಲಾಭ ಸಿಗಲಿದೆ. ದುಂದುವೆಚ್ಚ ಮಾಡುವುದು ಸರಿಯಲ್ಲ.

ಕರ್ಕಾಟಕ: ದೇವರ ಆಶೀರ್ವಾದದಿಂದ ಆರ್ಥಿಕ ಆದಾಯ ಉತ್ತಮವಾಗಿರುವುದು. ಆದರೆ ನಿಮ್ಮ ಸೋಮಾರಿತನವು ನಿಮಗೆ ಶತ್ರುವಾಗಿ ಪರಿಣಮಿಸಲಿದೆ. ಅಭಿವೃದ್ಧಿಗೆ ಅಡೆತಡೆಗಳು ಉಂಟಾಗಬಹುದು.

ಸಿಂಹ: ಆಫೀಸಿನಲ್ಲಿ ಸ್ವಪ್ರಯತ್ನದ ಜೊತೆಯಲ್ಲಿ ಅಧಿಕಾರಿಗಳ ಬೆಂಬಲದಿಂದ ಬಡ್ತಿ ಹೊಂದುವ ಸಂಭವಿದೆ. ಯಂತ್ರೋಪಕರಣಗಳ ಮಾರಾಟದಿಂದ ಹೆಚ್ಚಿನ ಲಾಭ. ತೈಲ ಉತ್ಪನ್ನಗಳ ಮಾರಾಟದಿಂದ ಲಾಭ ಪಡೆಯುವಿರಿ.

ಕನ್ಯಾ: ಮನೆಯಲ್ಲಿ ದೊಡ್ಡವರಾದ್ದರಿಂದ ಹೆಚ್ಚಿನ ಕಾರ್ಯಭಾರ ಮತ್ತು ಸೌಲಭ್ಯ ಪಡೆಯುವಿರಿ. ಹಣಕಾಸು ಪರಿಸ್ಥಿತಿ ಉತ್ತಮವಿರುವುದರಿಂದ ಆಸ್ತಿ ಕೊಳ್ಳುವ ಬಗ್ಗೆ ಹಿರಿಯರೊಂದಿಗೆ ಸಮಾಲೋಚನೆ ನಡೆಸುವಿರಿ.

ತುಲಾ: ವ್ಯಾಪಾರದಲ್ಲಿ ಲಾಭಾಂಶ ಇಳಿಕೆಯಾಗದಂತೆ ಎಚ್ಚರಿಕೆ ವಹಿಸುವಿರಿ. ಧಾರ್ಮಿಕ ವೃತ್ತಿ ನಡೆಸುವ ವ್ಯಕ್ತಿಗಳಿಗೆ ಸಾಧಿಸಿದ ಖುಷಿ ಸಿಗಲಿದೆ. ಕೌಟುಂಬಿಕ ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳುವಿರಿ.

ವೃಶ್ಚಿಕ: ರಾಜಕೀಯ ವ್ಯಕ್ತಿಗಳಿಗೆ ನಿಕಟವರ್ತಿಗಳ ಪ್ರೋತ್ಸಾಹದಿಂದ ಸಾಮಾಜಿಕ ಬದುಕು ಸುಗಮವಾಗಲಿದೆ. ಭೂ ಸಂಬಂಧದ ವ್ಯವಹಾರದಲ್ಲಿ ಅನಿಸಿಕೆಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದಲ್ಲಿ ವ್ಯವಹಾರಗಳು ಕೈಗೂಡಲಿದೆ.

ಧನು: ಪದವಿ ವಿದ್ಯಾರ್ಥಿಗಳಿಗೆ ಯಶಸ್ಸು ದೊರೆತು ಹೆಚ್ಚಿನ ಆನಂದ ವಿರುವುದು. ಹೋರಾಟ ನಡೆಸಿದ ನಂತರದಲ್ಲಿ ಗೆಲುವನ್ನಾಗಲೀ ಸೋಲನ್ನಾಗಲಿ ಒಪ್ಪಿಕೊಳ್ಳಲು ತೀರ್ಮಾನಿಸಿ. ವಾದ ವಿವಾದ ಸ್ಪರ್ಧೆಗಳಲ್ಲಿ ಜಯ.

ಮಕರ: ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವಿರಿ. ಶುಭ ಸಮಾರಂಭಗಳು ಇರುವುದರಿಂದ ಮನೆಯಲ್ಲಿ ಸಂಭ್ರಮದ ವಾತಾವರಣವಿರುವುದು. ಸಾಲ ಮಾಡುವ ಪರಿಸ್ಥಿತಿ ತಂದುಕೊಳ್ಳಬೇಡಿ. ವಿಶ್ವಾಸದಲ್ಲಿ ಹಣ ನೀಡಬೇಡಿ.

ಕುಂಭ: ಜವಾಬ್ದಾರಿಯಿಂದ ನಡೆಯುತ್ತಿರುವ ಸಂಘ ಸಂಸ್ಥೆಯಲ್ಲಿ ಭಿನ್ನಾಭಿಪ್ರಾಯ ಬರಬಹುದು, ಎಚ್ಚರವಿರಲಿ. ಮೆಕ್ಯಾನಿಕಲ್ ಎಂಜಿನಿಯರ್‌ಗಳಿಗೆ ಉದ್ಯೋಗದಲ್ಲಿ ಉತ್ತಮ ಬದಲಾವಣೆ ಸಾಧ್ಯತೆ ಕಂಡುಬರಲಿದೆ.

ಮೀನ: ಮಾದರಿಯಾಗುವ ವ್ಯಕ್ತಿತ್ವವನ್ನು ಸಹಿಸಲಾರದ ಜನರು ಎದುರಾಗಬಹುದು. ತೆರೆಮರೆಯ ಸಂಧಾನದ ಮಾತುಕತೆಗಳು ಯಶಸ್ವಿಯಾಗುವುದು. ಸಗಟು ವ್ಯಾಪಾರಿಗಳಿಗೆ ಇಂದು ಶುಭ ದಿನ.

ಪದಬಂಧ 5543

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬಟ್ಟೆಗಳನ್ನು ಮಡಿ ಮಾಡುವವನು (4)
3.ಈತ ಲೆಕ್ಕ ಬರೆಯುವವನು (4)
5.ಕೊನೆಗೆ ಕರವನ್ನಿಟ್ಟರೆ ಗಣಿ ಕಾಣುವುದೇ? (3)
6.ದೇವಾಲಯದ ಸಭಾಮಂಟಪ (4)
8.ಭವಿತವ್ಯದಲ್ಲಿರುವ ಉತ್ಕೃಷ್ಟತೆ! (2)
9.ಬಿದಿರು ಕಬ್ಬು ಮುಂತಾದವುಗಳ ಕೋಲು (2)
10. ಮಾನ ಹೊಂದಿರುವ ಒಡೆಯ (4)
13.ಹೊಲಗದ್ದೆಯಲ್ಲಿ ಹೆಂಟೆಯನ್ನು ಒಡೆಯುವ ಸಾಧನ (3)
16.ಅಂತರಂಗದ ವಿರುದ್ಧ ಪದ (4)
17.ಪುಷ್ಪದಲ್ಲಿರುವ ಸಿಹಿ ರಸ (4)

ಮೇಲಿಂದ ಕೆಳಕ್ಕೆ
1.ಬೆಟ್ಟವನ್ನು ಆವರಿಸಿರುವ ಕಾಡು (2)
2.ವಾದ್ಯವನ್ನು ನುಡಿಸುವವನು (3)
3.ಮಧುರವಾದ ಧ್ವನಿಯಿದು (4)
4.ಮೆಟ್ಟಿಲುಗಳಿರುವ ಚೌಕಾಕಾರದ ಕೊಳ (3)
5.ಆದಾಯ ಮತ್ತು ಖರ್ಚು (4)
6.ನಯವಾಗಿ ಹೊಳೆಯುವ ಕಣ್ಣು (3)
7.ದೊಡ್ಡ ಗಾತ್ರದ ನಿಂಬೆ (4)
11.ಆನೆಯನ್ನು ನಡೆಸುವವನು ಮಾವನೊಟ್ಟಿಗೆ ಬಂದಿಹನಲ್ಲಾ (4)
12.ಬೇಸಾಯಕ್ಕೊಂದು ಪರ್ಯಾಯ ಪದ (3)
14.ಈತ ಲೋಭಿ (3)
15.ಮುನಿದವನಲ್ಲಿ ಈ ಆನಂದವೇ? (2)



5542ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಟ್ಟಹಾಸ
2.ನವನಟ 4.ನಾಮಧೇಯಾ
6.ಸಂತತಿ 7.ವನ
9.ಕಣಜ 11.ಣಪ
13.ವದಂತಿ 14.ನವನೀತ
16.ಅತಿರೇಕ 17.ಹಸುಗೂಸು

ಮೇಲಿಂದ ಕೆಳಕ್ಕೆ:
1.ಅವಿನಾಭಾವ
2.ನಶ್ಯ 3.ನವತರುಣ
5.ಯಾಚಕ 8.ನವದಂಪತಿ
10.ಜತನ 12.ಪರಿತಪಿಸು
15.ಸುಂಕ

ಸುಡೊಕು 5928

	4	2			7			
8			1			2		7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8	9	6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5927 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

ಮ್ಯೂಚುವಲ್ ಫಂಡ್, ಡಿಮ್ಯಾಟ್ ನಾಮಿನಿ ಪ್ರಕ್ರಿಯೆ ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): ಮ್ಯೂಚುವಲ್ ಫಂಡ್ ಮತ್ತು ಡಿಮ್ಯಾಟ್ ಖಾತೆಯಲ್ಲಿ ನಾಮಿನಿ ಪ್ರಕ್ರಿಯೆ ಪೂರ್ಣಗೊಳಿಸುವ ಗಡುವನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) 2024ರ ಜೂನ್ 30ರ ವರೆಗೆ ವಿಸ್ತರಿಸಿದೆ.

ಈ ಪ್ರಕ್ರಿಯೆ ಪೂರ್ಣಗೊಳಿಸಲು ಡಿಸೆಂಬರ್ 31ರ ವರೆಗೆ ಕಾಲಾವಕಾಶ ನೀಡಲಾಗಿತ್ತು. ಈ ಅವಧಿಯಲ್ಲಿ ನಾಮಿನಿ ಪ್ರಕ್ರಿಯೆ ಪೂರ್ಣಗೊಳಿಸದಿದ್ದರೆ ಮ್ಯೂಚುವಲ್ ಫಂಡ್ ಮತ್ತು ಡಿಮ್ಯಾಟ್ ಖಾತೆಯು ನಿಷ್ಕ್ರಿಯಗೊಳ್ಳಲಿದೆ. ನಾಮಿನಿ ಸೇರ್ಪಡೆಗೊಳಿಸಿದ ಬಳಿಕ ಮತ್ತೆ ಖಾತೆಗಳು ಸಕ್ರಿಯಗೊಳ್ಳಲಿವೆ ಎಂದು ಹೇಳಿತ್ತು.

ಷೇರು ಮಾರುಕಟ್ಟೆಯ ಪಾಲುದಾರರು ಹಾಗೂ ಹೂಡಿಕೆದಾರರ ಮನವಿ ಮೇರೆಗೆ, ಅವರಿಗೆ ಅನುಕೂಲ ಕಲ್ಪಿಸಲು ಅವಧಿ ವಿಸ್ತರಿಸಲಾಗಿದೆ ಎಂದು ಸೆಬಿ ತಿಳಿಸಿದೆ.

ಜಿಯೋದಿಂದ 'ಭಾರತ್ ಜಿಪಿಟಿ' ಅಭಿವೃದ್ಧಿ

ಮುಂಬೈ (ಪಿಟಿಐ): 'ಭಾರತ್ ಜಿಪಿಟಿ' ಅಭಿವೃದ್ಧಿ ಸಂಬಂಧ ಐಐಟಿ–ಬಾಂಬೆ ಜೊತೆಗೆ ರಿಲಯನ್ಸ್ ಜಿಯೋ ಸಂಸ್ಥೆಯು ಜೊತೆಯಾಗಿ ಕೆಲಸ ನಿರ್ವಹಿಸಲಿದೆ ಎಂದು ರಿಲಯನ್ಸ್ ಜಿಯೋ ಇನ್ಫೋಕಾಮ್ ಮುಖ್ಯಸ್ಥ ಆಕಾಶ್ ಅಂಬಾನಿ ಹೇಳಿದ್ದಾರೆ.

ಐಐಟಿ–ಬಾಂಬೆಯಲ್ಲಿ ಬುಧವಾರ ನಡೆದ ಟೆಕ್‌ಫೆಸ್ಟ್‌ನಲ್ಲಿ ಮಾತನಾಡಿದ ಅವರು, 'ಭಾರತ್ ಜಿಪಿಟಿ' ಅಭಿವೃದ್ಧಿಗಾಗಿ ಐಐಟಿ ಜೊತೆ ಕೈಜೋಡಿಸಲು ನಿರ್ಧರಿಸಲಾಗಿದೆ ಎಂದರು.

ಅಲ್ಲದೇ, ಜಿಯೋ ಇನ್ಫೋಕಾಮ್‌ನಿಂದ ಟಿ.ವಿಗಾಗಿ ಆಪರೇಟಿವ್ ಸಿಸ್ಟಂ ಅಭಿವೃದ್ಧಿಪಡಿಸುವುದಕ್ಕೂ ಚಿಂತಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಈಗಾಗಲೇ ಕೆಲಸ ನಿರ್ವಹಿಸಲಾಗುತ್ತಿದೆ ಎಂದು ತಿಳಿಸಿದರು.

ಪ್ರಸ್ತುತ ಎಲ್ಲಾ ಕ್ಷೇತ್ರಗಳಲ್ಲೂ ಕೃತಕ ಬುದ್ಧಿಮತ್ತೆಯು ಪರಿವರ್ತನೆ ತರುತ್ತಿದೆ. ಇದಕ್ಕೆ ಸಂಬಂಧಿಸಿದ ಅಪ್ಲಿಕೇಷನ್‌ಗಳ ಅಭಿವೃದ್ಧಿಗೆ ಕಂಪನಿ ಮುಂದಾಗಿದೆ ಎಂದು ತಿಳಿಸಿದರು. ಕಂಪನಿಯ ಅಭಿವೃದ್ಧಿಗೆ ಪೂರಕವಾದ ಪರಿಸರ ವ್ಯವಸ್ಥೆ ರೂಪಿಸುವುದು ಅತಿಮುಖ್ಯ. ಈ ನಿಟ್ಟಿನಲ್ಲಿ 'ಜಿಯೋ 2.0' ದೃಷ್ಟಿಯಲ್ಲಿ ಇಟ್ಟುಕೊಂಡು ಈಗಾಗಲೇ ಕೆಲಸ ಆರಂಭಿಸಲಾಗಿದೆ ಎಂದು ಹೇಳಿದರು.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹296-460

ದ್ವಿತಳಿ (ಬಿ.ವಿ) ₹277-587

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹635
12 ಮೊಟ್ಟೆಗೆ ₹82
ಮೈಸೂರು
100 ಮೊಟ್ಟೆಗೆ ₹635

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹151.00
ಆರ್‌ಎಸ್‌ಎಸ್-5 ₹147.00
ಗುಡ್ ಲಾಟ್ ₹130.00

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್. ಪೇಟೆ	₹8159-8200
ಪುತ್ತೂರು	₹7350-9200
ತಿಪಟೂರು	₹8200-8500
ತುರುವೇಕೆರೆ	₹8300-8300

ಷೇರುಪೇಟೆ ವಹಿವಾಟು



ಸುಧಾ, ಮಯೂರ ಓದಿರಿ

ಖರೀದಿ ಸ್ಥಗಿತ: ಕ್ವಿಂಟಲ್‌ಗೆ ₹7,500ಕ್ಕೆ ತಲುಪಿದ ಕೊಬ್ಬರಿ ದರ

ನಾಫೆಡ್ ಕೇಂದ್ರಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮುಂಗಾರು ಅವಧಿಯಲ್ಲೂ ಕುಸಿದಿದ್ದ ಧಾರಣೆ
- ರೈತರ ಒತ್ತಾಯಕ್ಕೆ ಸ್ಪಂದಿಸದ ಸರ್ಕಾರ ಹಾಗೂ ಜನಪ್ರತಿನಿಧಿಗಳು
- ತ್ವರಿತವಾಗಿ ಖರೀದಿ ಕೇಂದ್ರ ಆರಂಭಿಸಲು ಒತ್ತಾಯ

ತುಮಕೂರು: ಕೇಂದ್ರ ಸರ್ಕಾರ ಕೊಬ್ಬರಿಯ ಕನಿಷ್ಠ ಬೆಂಬಲ ಬೆಲೆಯನ್ನು ಕ್ವಿಂಟಲ್‌ಗೆ ₹250 ಹೆಚ್ಚಳ ಮಾಡಿ, ₹12 ಸಾವಿರಕ್ಕೆ ನಿಗದಿಪಡಿಸಿದರೂ ಅದರ ಪ್ರಯೋಜನ ತೆಂಗು ಬೆಳೆಗಾರರಿಗೆ ಇಲ್ಲವಾಗಿದೆ.

ಬೆಂಬಲ ಬೆಲೆ ಹೆಚ್ಚಳ ಮಾಡುವುದರ ಜತೆಗೆ ಸರ್ಕಾರ ಮಾರುಕಟ್ಟೆಗೆ ಪ್ರವೇಶ ಮಾಡಿ ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಮಹಾಮಂಡಳ (ನಾಫೆಡ್) ಮೂಲಕ ಕೊಬ್ಬರಿ ಖರೀದಿಸಲು ಆರಂಭಿಸಿದರಷ್ಟೇ ರೈತರಿಗೆ ಅನುಕೂಲವಾಗಲಿದೆ. ಇಲ್ಲವಾದರೆ ಬೆಂಬಲ ಬೆಲೆ ಹೆಚ್ಚಳ ಘೋಷಣೆಗಷ್ಟೇ ಸೀಮಿತವಾಗಲಿದೆ. ಈ ಹಿಂದೆ ಒಂದು ಕ್ವಿಂಟಲ್ ಉಂಡೆ ಕೊಬ್ಬರಿಗೆ ಬೆಂಬಲ ಬೆಲೆಯನ್ನು ₹11,750 ನಿಗದಿಪಡಿಸಿದರೂ ಮಾರುಕಟ್ಟೆಯಲ್ಲಿ ಧಾರಣೆ ತೀವ್ರವಾಗಿ ಕುಸಿತ ಕಂಡಿತ್ತು. ಮುಂಗಾರು ಹಂಗಾಮಿನ

ಸಮಯದಲ್ಲಿ ಬೆಲೆ ₹10ಸಾವಿರಕ್ಕಿಂತ ಕಡಿಮೆಯಾಗಿತ್ತು. ಆಗ ಕೇಂದ್ರ ಸರ್ಕಾರ ನಾಫೆಡ್ ಕೇಂದ್ರಗಳನ್ನು ತೆರೆದು ಕೊಬ್ಬರಿ ಖರೀದಿಸಿತ್ತು.

ಇದರಿಂದಾಗಿ ಮಾರುಕಟ್ಟೆಯಲ್ಲಿ ಧಾರಣೆ ಅಲ್ಪಮಟ್ಟಿಗೆ ಚೇತರಿಸಿಕೊಂಡಿತ್ತು. ಆದರೆ, ನಾಫೆಡ್ ಕೇಂದ್ರಗಳು ಖರೀದಿ ಸ್ಥಗಿತಗೊಳಿಸಿದ ನಂತರ ಬೆಲೆ ಕುಸಿಯುತ್ತಲೇ ಸಾಗಿದ್ದು, ಪ್ರಸ್ತುತ ದರ ಕ್ವಿಂಟಲ್‌ಗೆ ₹7,500ಕ್ಕೆ ತಲುಪಿದೆ.

ಬೆಂಬಲ ಬೆಲೆ ಹೆಚ್ಚಳ ಮಾಡಿ, ನಾಫೆಡ್ ಮೂಲಕ ಕೊಬ್ಬರಿ ಖರೀದಿಸುವಂತೆ ರೈತರು ಸತತವಾಗಿ ಒತ್ತಡ ಹಾಕುತ್ತಲೇ ಬಂದಿದ್ದಾರೆ. ಕಳೆದ ವಾರ ತುಮಕೂರು, ಹಾಸನ ಜಿಲ್ಲೆಯ ಜನಪ್ರತಿನಿಧಿಗಳು ಕೇಂದ್ರ ಕೃಷಿ ಸಚಿವರನ್ನು ಭೇಟಿ ಮಾಡಿ ಈ ಎರಡು ಬೇಡಿಕೆಗಳ ಈಡೇರಿಕೆಗೆ ಮನವಿ ಮಾಡಿದ್ದರು.

ಈಗ ಬೆಂಬಲ ಬೆಲೆಯಲ್ಲಿ ಹೆಚ್ಚಳ ಮಾಡಿದ್ದರೂ ಮಾರುಕಟ್ಟೆಯಲ್ಲಿ ಧಾರಣೆ ಸುಧಾರಿಸುವುದಿಲ್ಲ. ನಾಫೆಡ್ ಕೇಂದ್ರ ತೆರೆದು ಖರೀದಿಸಿದರಷ್ಟೇ ರೈತರಿಗೆ ಅನುಕೂಲವಾಗಲಿದೆ ಎಂಬುದು ಕೊಬ್ಬರಿ ಬೆಳೆಗಾರರ ಒತ್ತಾಯವಾಗಿದೆ.

ಸಮುದ್ರ ಮಾರ್ಗದ ಮೂಲಕ ಪ್ರಾಯೋಗಿಕ ರಫ್ತು ಯಶಸ್ವಿ: ಕೇಂದ್ರ

ನೆದರ್ಲೆಂಡ್ಸ್ ತಲುಪಿದ ಬಾಳೆಹಣ್ಣು

ನವದೆಹಲಿ (ಪಿಟಿಐ): ಸಮುದ್ರ ಮಾರ್ಗದ ಮೂಲಕ ನೆದರ್ಲೆಂಡ್ಸ್‌ಗೆ ಪ್ರಾಯೋಗಿಕವಾಗಿ ಬಾಳೆಹಣ್ಣು ರಫ್ತು ವಹಿವಾಟು ಯಶಸ್ವಿಯಾದ ಬೆನ್ನಲ್ಲೇ ಮಾವಿನ ಹಣ್ಣು, ದಾಳಿಂಬೆ ಹಾಗೂ ಹಲಸಿನ ಹಣ್ಣಿನ ರಫ್ತಿಗೂ ಉತ್ತೇಜನ ನೀಡಲು ಕೇಂದ್ರ ವಾಣಿಜ್ಯ ಸಚಿವಾಲಯ ನಿರ್ಧರಿಸಿದೆ.

ಹಣ್ಣುಗಳ ಮಾಗುವ ಅವಧಿಗೆ ಅನುಗುಣವಾಗಿ ಸಣ್ಣ ಪ್ರಮಾಣದಲ್ಲಿ ವಿಮಾನಗಳ ಮೂಲಕ ವಿದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಈಗ ಸಮುದ್ರ ಮಾರ್ಗದ ಮೂಲಕ ಬಾಳೆಹಣ್ಣು ರವಾನೆಯಾಗಿದೆ. ಹಾಗಾಗಿ, ಮುಂದಿನ ಐದು ವರ್ಷಗಳಲ್ಲಿ ತಾಜಾ ಬಾಳೆಹಣ್ಣಿನ ರಫ್ತು ವಹಿವಾಟನ್ನು ₹8,300 ಕೋಟಿಗೆ ಹೆಚ್ಚಿಸಲು ಸಚಿವಾಲಯ ತೀರ್ಮಾನಿಸಿದೆ.

ಸಮುದ್ರ ಮಾರ್ಗದ ಮೂಲಕ ಹಂತ ಹಂತವಾಗಿ ಈ ಹಣ್ಣುಗಳ ರಫ್ತು ಪ್ರಮಾಣ ಹೆಚ್ಚಿಸಲಾಗುತ್ತದೆ. ಜಲ ಮಾರ್ಗದ ಅವಧಿ, ಹಣ್ಣುಗಳ ಕೊಯ್ಲು, ಅವುಗಳನ್ನು ವೈಜ್ಞಾನಿಕವಾಗಿ ಮಾಗಿಸುವಿಕೆಗೆ ಸಂಬಂಧಿಸಿದಂತೆ ರೈತರಿಗೆ ತರಬೇತಿಯನ್ನೂ ನೀಡಲಾಗುತ್ತದೆ ಎಂದು ಹೇಳಿದೆ.

ಸಚಿವಾಲಯದ ಅಂಗಸಂಸ್ಥೆಯಾದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರವು (ಎಪಿಇಡಿಎ) ಬಾಳೆಹಣ್ಣು ಸೇರಿದಂತೆ ಇತರೆ ಹಣ್ಣುಗಳ ರಫ್ತು ಸಂಬಂಧ ನಿಯಮಾವಳಿಗಳನ್ನು ರೂಪಿಸಲಿದೆ.

ಮಹಾರಾಷ್ಟ್ರದ ಬಾರಾಮತಿಯಿಂದ ಬಾಳೆಹಣ್ಣನ್ನು ಹೊತ್ತ ಹಡಗು ಡಿಸೆಂಬರ್ 5ರಂದು ನೆದರ್ಲೆಂಡ್‌ನ ರೋಟರ್ ಡ್ಯಾಮ್ ನಗರಕ್ಕೆ ತಲುಪಿದೆ. ಇನ್ನು ಮುಂದೆ ಹಡಗಿನ ಮೂಲಕ ಹಣ್ಣುಗಳ ರಫ್ತು ಸುಗಮವಾಗಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಭಾರತವು ವಿಶ್ವದಲ್ಲಿಯೇ ಅತಿಹೆಚ್ಚು ಬಾಳೆಹಣ್ಣು ಉತ್ಪಾದಿಸುವ ರಾಷ್ಟ್ರವಾಗಿದೆ. ವಿಶ್ವದ ಉತ್ಪಾದನೆಯಲ್ಲಿ ಶೇ 26.45ರಷ್ಟು ಪಾಲು ಹೊಂದಿದೆ. ವಾರ್ಷಿಕವಾಗಿ 35.36 ದಶಲಕ್ಷ ಟನ್‌ನಷ್ಟು ಉತ್ಪಾದನೆಯಾಗುತ್ತದೆ.

ಕರ್ನಾಟಕದಲ್ಲೂ ಉತ್ಪಾದನೆ ಹೆಚ್ಚು

ದೇಶದಲ್ಲಿ ಅತಿಹೆಚ್ಚು ಬಾಳೆಹಣ್ಣುಗಳನ್ನು ಉತ್ಪಾದಿಸುವ ರಾಜ್ಯಗಳ ಪೈಕಿ ಕರ್ನಾಟಕವೂ ಒಂದಾಗಿದೆ. ಉಳಿದಂತೆ ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು ಮತ್ತು ಉತ್ತರಪ್ರದೇಶದಲ್ಲಿ ಅತಿಹೆಚ್ಚಾಗಿ ಬಾಳೆಹಣ್ಣು ಉತ್ಪಾದನೆಯಾಗುತ್ತದೆ.

ಆದರೆ, ಜಾಗತಿಕಮಟ್ಟದಲ್ಲಿ ರಫ್ತಿನ ಪಾಲು ಶೇ 1ರಷ್ಟಿದೆ. 2022–23ರಲ್ಲಿ ₹1,466 ಕೋಟಿ ಮೌಲ್ಯದ ಬಾಳೆಹಣ್ಣನ್ನು ರಫ್ತು ಮಾಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಯತ್ನಾಳ ವಿರುದ್ಧ ಕ್ರಮಕ್ಕೆ ಆಗ್ರಹ

ಒಂದನೇ ಪುಟದಿಂದ...

ಪದಾಧಿಕಾರಿಗಳಾಗಿರುವ ಹಾಲಿ ಶಾಸಕರು, ವಿಧಾನಮಂಡಲದ ಬೆಳಗಾವಿ ಅಧಿವೇಶನದಲ್ಲಿ ಯತ್ನಾಳ ಅವರಿಂದಾಗಿ ಬಿಜೆಪಿ ಅನುಭವಿಸಿದ ಮುಜುಗರದ ಕುರಿತು ಸಭೆಯಲ್ಲಿ ಪ್ರಸ್ತಾಪಿಸಿದರು. ಪ್ರಬಲ ವಿರೋಧ ಪಕ್ಷವಾಗಿ ಹೊರಹೊಮ್ಮಬೇಕಾದರೆ ಈ ರೀತಿ ಅಪಸ್ವರ ಎತ್ತುವವರ ವಿರುದ್ಧ ಬಿಗಿಯಾದ ಕ್ರಮ ಕೈಗೊಳ್ಳಬೇಕು ಎಂಬ ಆಗ್ರಹವನ್ನು ಅವರು ಮುಂದಿಟ್ಟರು ಎಂದು ಮೂಲಗಳು ಹೇಳಿವೆ.

'ಯತ್ನಾಳ ಕಾಂಗ್ರೆಸ್ ಪಕ್ಷದವರ ಜತೆ ಶಾಮೀಲಾಗಿ ಬಿಜೆಪಿ ನಾಯಕರ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಅವರು ಹೇಳಿಕೆ ನೀಡಿದ ತಕ್ಷಣ ಕಾಂಗ್ರೆಸ್‌ನವರು ಪ್ರತಿಕ್ರಿಯಿಸುತ್ತಾರೆ. ಇದೇ ಅವಕಾಶ ಬಳಸಿಕೊಂಡು ಯತ್ನಾಳ ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದಾರೆ' ಎಂದು ಕೆಲವು ಪದಾಧಿಕಾರಿಗಳು ದೂರಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

'ಯತ್ನಾಳ ಹೇಳಿಕೆ ಕುರಿತು ಸಭೆಯಲ್ಲಿ ಚರ್ಚೆಯಾಗಿದೆಯೆ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, 'ಪಕ್ಷದಲ್ಲಿನ ಇತ್ತೀಚಿನ ಎಲ್ಲ ಬೆಳವಣಿಗೆಗಳ ಕುರಿತು ಗಂಭೀರ ಚರ್ಚೆ ನಡೆಸಲಾಗಿದೆ. ಆ ಎಲ್ಲ ಮಾಹಿತಿಯನ್ನೂ ಬಹಿರಂಗಪಡಿಸಲು ಸಾಧ್ಯವಿಲ್ಲ. ರಾಜ್ಯದಲ್ಲಿ ಪಕ್ಷದ ಘನತೆಗೆ ಚ್ಯುತಿ ಬರುವಂಥ ಚಟುವಟಿಕೆ, ಹೇಳಿಕೆಗಳನ್ನು ಸಹಿಸುವುದಿಲ್ಲ. ಆ ಬಗ್ಗೆ ಚರ್ಚೆ ಆಗಿದೆ. ಕೇಂದ್ರದ ನಾಯಕರು ಸೂಕ್ತ ಸಂದರ್ಭದಲ್ಲಿ ಸರಿಯಾದ ನಿರ್ಧಾರ ತೆಗೆದುಕೊಳ್ಳುತ್ತಾರೆ' ಎಂದರು.

ಪದಾಧಿಕಾರಿಗಳ ನೇಮಕಕ್ಕೆ 60 ಮಂದಿ ವೀಕ್ಷಕರು

ಬೆಂಗಳೂರು: ಬಿಜೆಪಿ ಜಿಲ್ಲಾ ಘಟಕಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ನೇಮಕಾತಿ ಕುರಿತು ವರದಿ ಪಡೆಯಲು 60 ಮಂದಿ ಪ್ರಮುಖರ ತಂಡವನ್ನು ನಿಯೋಜಿಸಲು ಬುಧವಾರ ನಡೆದ ರಾಜ್ಯ ಘಟಕದ ಪದಾಧಿಕಾರಿಗಳ ಸಭೆಯಲ್ಲಿ ನಿರ್ಧರಿಸಲಾಗಿದೆ.

ಸಭೆಯ ಬಳಿಕ ವಿವರ ನೀಡಿದ ಪಕ್ಷದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, 'ಜಿಲ್ಲಾ ಘಟಕದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಆಯ್ಕೆಗೆ ಸಂಭವನೀಯರ ಪಟ್ಟಿ ಸಿದ್ಧಪಡಿಸಲು 60 ಜನರ ತಂಡ ಎರಡು ದಿನಗಳ ಕಾಲ ರಾಜ್ಯದಾದ್ಯಂತ ಪ್ರವಾಸ ಮಾಡಲಿದೆ' ಎಂದರು.

ಜಿಲ್ಲಾ ಘಟಕಗಳ ಹಾಲಿ ಅಧ್ಯಕ್ಷರು, ಸಂಸದರು, ಶಾಸಕರು, ಮಾಜಿ ಶಾಸಕರು, ಹಿರಿಯ ಮುಖಂಡರು ಮತ್ತು ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಿಸಿ ವರದಿ ಸಲ್ಲಿಸಲಾಗುವುದು. ಆ ಬಳಿಕ ಪದಾಧಿಕಾರಿಗಳ ನೇಮಕ ಮಾಡಲಾಗುವುದು ಎಂದು ತಿಳಿಸಿದರು.

ಎಲ್ಲ ಹಂತದ ಮುಖಂಡರು ಮತ್ತು ಕಾರ್ಯಕರ್ತರು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುವಂತೆ ರಾಜ್ಯ ಘಟಕದ ಅಧ್ಯಕ್ಷರು ಸೂಚಿಸಿದ್ದಾರೆ. ವಿಕಸಿತ ಭಾರತ ಸಂಕಲ್ಪ ಯಾತ್ರೆ ಮತ್ತು ನಮೋ ಆ್ಯಪ್‌ಗಳಲ್ಲಿ ಪದಾಧಿಕಾರಿಗಳಿಗೆ ಕೆಲಸ ಹಂಚಿಕೆ ಮಾಡಲಾಗುವುದು ಎಂದರು.

'ವಿಶ್ರಾಂತಿ ಇಲ್ಲದೆ ಕೆಲಸ ಮಾಡಿ'

'ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗಳಿಸುವ ಗುರಿಯೊಂದಿಗೆ ಕೆಲಸ ಮಾಡಬೇಕು. ಹಬ್ಬ, ವಾರಾಂತ್ಯದ ಹೆಸರಿನಲ್ಲಿ ವಿಶ್ರಾಂತಿ ಪಡೆಯುವುದನ್ನು ಬದಿಗಿಟ್ಟು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೂಚಿಸಿದರು.

ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, 'ಲೋಕಸಭಾ ಚುನಾವಣೆ ಕೆಲವೇ ತಿಂಗಳುಗಳು ಇರುವಾಗ ನಮಗೆ ಪಕ್ಷ ಸಂಘಟನೆಯ ಜವಾಬ್ದಾರಿ ಸಿಕ್ಕಿದೆ. ಇದು ಅತ್ಯಂತ ಸವಾಲಿನ ಕಾಲ. ಎಲ್ಲರೂ ಹೊಣೆ ಅರಿತು ಕೆಲಸ ಮಾಡಬೇಕು' ಎಂದರು.

ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಮೈತ್ರಿಕೂಟವು ರಾಜ್ಯದಲ್ಲಿ 28 ಲೋಕಸಭಾ ಕ್ಷೇತ್ರಗಳಲ್ಲೂ ಗೆಲುವಿನ ಗುರಿ ಹೊಂದಿದೆ. ಅದನ್ನು ಸಾಧಿಸುವ ನಿಟ್ಟಿನಲ್ಲಿ ಸಂಘಟನೆಯನ್ನು ಬಲಗೊಳಿಸಬೇಕು. ಪ್ರತಿಸ್ಪರ್ಧಿಗಳನ್ನು ಹಗುರವಾಗಿ ಪರಿಗಣಿಸಬಾರದು. ಎಲ್ಲ ಸವಾಲುಗಳನ್ನು ಎದುರಿಸುವುದಕ್ಕೆ ಸಿದ್ಧರಾಗಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಬಿಬಿಎಂಪಿ ಸೇರಿದಂತೆ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ವಿಧಾನ ಪರಿಷತ್ ಚುನಾವಣೆಗೆ ತಯಾರಿ ಆರಂಭಿಸಬೇಕು ಎಂದರು.

ಶಬರಿಮಲೆ: ಮಂಡಲ ಪೂಜೆಗೆ ಸಾಕ್ಷಿಯಾದ ಸಾವಿರಾರು ಭಕ್ತರು

ಶಬರಿಮಲೆ(ಪಿಟಿಐ): ಇಲ್ಲಿನ ಅಯ್ಯಪ್ಪ ದೇವಾಲಯಕ್ಕೆ ಬುಧವಾರ ಸಾವಿರಾರು ಮಂದಿ ಭಕ್ತರು ಭೇಟಿ ನೀಡಿ ಮಂಡಲ ಪೂಜೆಗೆ ಸಾಕ್ಷಿಯಾದರು.

ದೇವಾಲಯದ ತಂತ್ರಿ (ಮುಖ್ಯ ಅರ್ಚಕ) ಕಂಡರಾರು ಮಹೇಶ್ ಮೋಹನಾರು ಅವರ ನೇತೃತ್ವದಲ್ಲಿ ಅಯ್ಯಪ್ಪ ದೇವರ ವಿಗ್ರಹಕ್ಕೆ 'ತಂಗ ಅಂಗಿ'ಯ (ಚಿನ್ನಾಭರಣ) ಅಲಂಕಾರ ಮಾಡಿ, ಮಂಡಲ ಪೂಜೆಯನ್ನು ನೆರವೇರಿಸಲಾಯಿತು. 'ತಂಗ ಅಂಗಿ'ಯನ್ನು ಮಂಗಳವಾರ ಮೆರವಣಿಗೆಯ ಮೂಲಕ ದೇವಾಲಯಕ್ಕೆ ತರಲಾಗಿತ್ತು.

'ಕಳಶಾಭಿಷೇಕ ಸೇರಿದಂತೆ ವಿಶೇಷ ಧಾರ್ಮಿಕ ಆಚರಣೆಗಳು ನಡೆದವು. ನಾಗಾಲ್ಯಾಂಡ್ ರಾಜ್ಯಪಾಲ ಎಲ್. ಗಣೇಶ್, ಕೇರಳದ ಮುಜರಾಯಿ ಸಚಿವ ಕೆ. ರಾಧಾಕೃಷ್ಣನ್, ತಿರುವಾಂಕೂರು ದೇವಸ್ವಂ ಮಂಡಳಿ ಅಧ್ಯಕ್ಷ ಪಿ.ಎಸ್. ಪ್ರಶಾಂತ್ ಉಪಸ್ಥಿತರಿದ್ದರು' ಎಂದು ದೇವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯ ಹಾಗೂ ಹೊರರಾಜ್ಯಗಳಿಂದ ಬಂದಿದ್ದ ಸಾವಿರಾರು ಭಕ್ತರು ದೇವರ ದರ್ಶನಕ್ಕಾಗಿ ಗಂಟೆಗಟ್ಟಲೆ ಸರದಿಯಲ್ಲಿ ನಿಂತಿದ್ದರು ಎಂದು ಮೂಲಗಳು ತಿಳಿಸಿವೆ.

'ಕೆಲವು ದಿನಗಳಿಂದ ದೇವಾಲಯಕ್ಕೆ ಭೇಟಿ ನೀಡುವ ಭಕ್ತರ ಸಂಖ್ಯೆ ಹೆಚ್ಚಿದೆ. ಮಕರವಿಳಕ್ಕು ಸಂದರ್ಭದಲ್ಲೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುವ ನಿರೀಕ್ಷೆ ಇದೆ ಎಂದು ಸಚಿವ ರಾಧಾಕೃಷ್ಣನ್ ಹೇಳಿದ್ದಾರೆ.

ಮಂಡಲ ಪೂಜೆಯ ಬಳಿಕ ದೇವಾಲಯದ ಬಾಗಿಲು ಮುಚ್ಚಲಾಗಿದೆ. ಇದೇ 30ರಂದು ಮತ್ತೆ ತೆರೆಯಲಿದೆ.

₹ 241ಕೋಟಿ ಆದಾಯ: ಅಯ್ಯಪ್ಪ ದೇವಾಲಯದಲ್ಲಿ ಈ ವರ್ಷದ ಮಂಡಲ ಋತುವಿನ 41 ದಿನಗಳ ಅವಧಿಯಲ್ಲಿ ಒಟ್ಟು ₹241.71 ಕೋಟಿ ಆದಾಯ ಸಂಗ್ರಹವಾಗಿದೆ ಎಂದು ದೇವಾಲಯದ ಮೂಲಗಳು ತಿಳಿಸಿವೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ₹18.72 ಕೋಟಿ ಹೆಚ್ಚು ಸಂಗ್ರಹವಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ₹222.98 ಕೋಟಿ ಆದಾಯ ಸಂಗ್ರಹವಾಗಿತ್ತು ಎಂದಿವೆ.

ಸೇನಾ ಸಲಕರಣೆ ತಯಾರಿಕೆ ಭಾರತ–ರಷ್ಯಾ ಮಾತುಕತೆ

ಮಾಸ್ಕೊ (ರಾಯಿಟರ್ಸ್): 'ಸೇನಾ ಸಲಕರಣೆಗಳನ್ನು ಜಂಟಿಯಾಗಿ ತಯಾರಿಸುವ ಯೋಜನೆ ಕುರಿತ ರಷ್ಯಾ ಹಾಗೂ ಭಾರತ ಮಾತುಕತೆಗೆ ಸ್ಪಷ್ಟ ಚಿತ್ರಣ ದೊರೆತಿದೆ' ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲ್ಯಾವ್ರೊ ಅವರು ಬುಧವಾರ ಹೇಳಿದರು.

ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಐದು ದಿನಗಳ ಕಾಲ ರಷ್ಯಾಗೆ ಪ್ರವಾಸದಲ್ಲಿದ್ದಾರೆ. ಈ ವೇಳೆ ಸೆರ್ಗೆ ಅವರೊಂದಿಗೆ ಜೈಶಂಕರ್ ಮಾತುಕತೆ ನಡೆಸಿದರು. ಮಾತುಕತೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವ ಸೆರ್ಗೆ ಅವರು, 'ಸೇನಾ ಸಲಕರಣೆ ತಯಾರಿಕೆ ಕುರಿತ ಮಾತುಕತೆಯು ಎರಡೂ ದೇಶಗಳ ಹಿತಾಸಕ್ತಿಗಳ ಅನುಗುಣವಾಗಿಯೇ ಇತ್ತು' ಎಂದು ತಿಳಿಸಿದರು.

ನಿರಾಶ್ರಿತ ಶಿಬಿರಗಳ ಮೇಲೆ ಇಸ್ರೇಲ್ ದಾಳಿ

ರಫಾ (ಎಪಿ): ಇಸ್ರೇಲ್ ಪಡೆಗಳು, ಕೇಂದ್ರ ಮತ್ತು ದಕ್ಷಿಣ ಗಾಜಾ ಮೇಲೆ ತೀವ್ರ ದಾಳಿ ಆರಂಭಿಸಿದ್ದು, ಬುರೇಜಿ ನಿರಾಶ್ರಿತರ ಶಿಬಿರ, ಖಾನ್ ಯೂನಿಸ್ ಮತ್ತು ರಫಾ ನಗರಗಳ ಮೇಲೆ ಬಾಂಬ್‌ಗಳ ಸುರಿಮಳೆಗರೆದಿವೆ.

ಉತ್ತರ ಗಾಜಾ ಮೇಲೆ ದಾಳಿ ತೀವ್ರಗೊಳ್ಳುತ್ತಿದ್ದಂತೆಯೇ ಸುಮಾರು 10,000 ಜನರು ಇಲ್ಲಿ ಬಂದು ಆಶ್ರಯ ಪಡೆದಿದ್ದರು.

'ಮಂಗಳವಾರ ರಾತ್ರಿ ಇಡೀ ದುಃಸ್ವಪ್ನದಂತಿತ್ತು. ಯುದ್ಧ ಆರಂಭವಾದಾಗಿನಿಂದ ಇಷ್ಟೊಂದು ತೀವ್ರತರದ ಬಾಂಬ್ ದಾಳಿ ಕಂಡಿರಲಿಲ್ಲ' ಎಂದು ರಮಿ ಅಬು ಮೊಸಾಬ್ ಎಂಬವರು ಹೇಳಿದ್ದಾರೆ.

ಈ ಬೆನ್ನಲ್ಲೇ ಗಾಜಾದ ಪ್ರಮುಖ ಟೆಲಿಕಾಂ ಕಂಪನಿಗಳು, ಆಕ್ರಮಿತ ಪ್ರದೇಶಗಳಲ್ಲಿ ಮತ್ತೆ ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸುವುದಾಗಿ ಘೋಷಿಸಿದ್ದಾರೆ.

ಹಮಾಸ್ ಬಂಡುಕೋರರನ್ನು ಸದೆಬಡಿಯುವ ಉದ್ದೇಶದಿಂದ ಇಸ್ರೇಲ್, ಉತ್ತರ ಗಾಜಾ ಮತ್ತು ದಕ್ಷಿಣದ ಖಾನ್ ಯೂನಿಸ್ ನಗರದ ಮೇಲೆ ತೀವ್ರ ವಾಯುದಾಳಿ ಆರಂಭಿಸಿದಾಗ ಜನರು ಪ್ರಾಣ ಉಳಿಸಿಕೊಳ್ಳಲು ಪ್ಯಾಲೆಸ್ಟೀನ್‌ನ ಸಣ್ಣ ಸಣ್ಣ ಮೂಲೆಗಳಿಗೆ ಸ್ಥಳಾಂತರಗೊಂಡಿದ್ದರು. ಸದ್ಯ ಇಸ್ರೇಲ್‌ನಲ್ಲೂ ತನ್ನ ಕಬಂದಬಾಹುಗಳನ್ನು ಚಾಚಿ ದಾಳಿ ನಡೆಸುತ್ತಿದೆ.

ಇಸ್ರೇಲ್ ಪಡೆಗಳು ಯುದ್ಧ ವಾಹನಗಳ ಮೇಲೆ ನಿಂತು ಕಣ್ಗಾವಲು ನಡೆಸಿತು —ಎಎಫ್‌ಪಿ ಚಿತ್ರ

ಕ್ರಿಸ್‌ಮಸ್ ಮುನ್ನಾದಿನದಿಂದ ಈವರೆಗೆ ಕೇಂದ್ರ ಗಾಜಾದಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ 100ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಕಚೇರಿ ತಿಳಿಸಿದೆ.

ಕೇಂದ್ರ ಗಾಜಾದಿಂದ ಸ್ಥಳಾಂತರಗೊಳ್ಳುವಂತೆ ಅಲ್ಲಿನ ನಿವಾಸಿಗಳಿಗೆ ಇಸ್ರೇಲ್ ಆದೇಶಿಸಿದೆ. ಆದರೆ ಅಲ್ಲಿ ಯುದ್ಧಕ್ಕೂ ಮೊದಲು 90,000 ಜನರು ನೆಲೆಸಿದ್ದರು, ಸದ್ಯ ವಿವಿಧ ಪ್ರದೇಶಗಳಿಂದ ಸ್ಥಳಾಂತರಗೊಂಡಿದ್ದ 61,000 ಮಂದಿ ಅಲ್ಲಿ ಆಶ್ರಯ ಪಡೆದಿದ್ದಾರೆ ಎಂದು ತಿಳಿಸಿದೆ.

ಕದನ ವಿರಾಮ ಘೋಷಣೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಒತ್ತಡ ಹೆಚ್ಚುತ್ತಿದ್ದರೂ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ತಮ್ಮ ಪಟ್ಟು ಸಡಿಲಿಸದೆ, ಯುದ್ಧ ತೀವ್ರಗೊಳಿಸುವುದಾಗಿ ಪುನರುಚ್ಚರಿಸಿದ್ದಾರೆ.

ಯುದ್ಧದಲ್ಲಿ ಈವರೆಗೆ 20,900 ಪ್ಯಾಲೆಸ್ಟೀನಿಯನ್ನರು ಸಾವಿಗೀಡಾಗಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ತಿಳಿಸಿದೆ.

ಮಾನವೀಯ ನೆರವಿಗೆ ಸಮನ್ವಯಾಧಿಕಾರಿ ನೇಮಕ: ನೆದರ್‌ಲ್ಯಾಂಡ್‌ನ ಮಾಜಿ ಉಪ ಪ್ರಧಾನಿ ಸಿಗ್ರಿದ್ ಕಾಗ್ ಅವರನ್ನು ಯುದ್ಧಪೀಡಿತ ಗಾಜಾಗೆ ಮಾನವೀಯ ನೆರವು ಒದಗಿಸುವ ವಿಶ್ವಸಂಸ್ಥೆಯ ಸಮನ್ವಯಾಧಿಕಾರಿಯಾಗಿ ನೇಮಿಸಲಾಗಿದೆ ಎಂದು ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ತಿಳಿಸಿದರು.

ಜನವರಿ 8ರಿಂದ ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಗಾಜಾಗೆ ನೀಡುವ ವಿವಿಧ ಸ್ವರೂಪದ ಮಾನವೀಯ ನೆರವುಗಳ ಕುರಿತು ಸಮನ್ವಯ ಮತ್ತು ಮೇಲ್ವಿಚಾರಣೆ ನಡೆಸಲಿದ್ದಾರೆ ಎಂದು ಗುಟೆರಸ್ ಹೇಳಿದರು.

ಗಾಜಾದಲ್ಲಿ 20 ಲಕ್ಷಕ್ಕೂ ಅಧಿಕ ಜನರು ಆಹಾರ, ನೀರು ಮತ್ತು ಔಷಧ ಲಭ್ಯವಿಲ್ಲದೆ ಪರದಾಡುತ್ತಿದ್ದಾರೆ.

ಸುದ್ದಿ 2 ನಿಮಿಷ

ವಿಜಯಪುರ: 300 ಮೆಗಾವಾಟ್ ಪವನ ವಿದ್ಯುತ್ ಉತ್ಪಾದನೆ

ಬೆಂಗಳೂರು (ಪಿಟಿಐ): ರಾಜ್ಯದ ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಅಸ್ಕಿ ಗ್ರಾಮದಲ್ಲಿ 300 ಮೆಗಾವಾಟ್ ಸಾಮರ್ಥ್ಯದ ಪವನ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸುವುದಾಗಿ ಅಪ್ರವ ಎನರ್ಜಿ ಕಂಪನಿ ತಿಳಿಸಿದೆ.

ಭಾರತೀಯ ಸೌರ ಶಕ್ತಿ ನಿಗಮದ (ಎಸ್‌ಇಸಿಐ) ಅಂತರ-ರಾಜ್ಯಗಳ ಪ್ರಸರಣ ವ್ಯವಸ್ಥೆಯಡಿ (ಐಎಸ್‌ಟಿಎಸ್) ಮಾಡಿಕೊಂಡಿರುವ ಒಪ್ಪಂದ ಅನ್ವಯ ಈ ಘಟಕ ಸ್ಥಾಪನೆಯಾಗುತ್ತಿದೆ ಎಂದು ತಿಳಿಸಿದೆ.

ನಿಗಮದ ಜೊತೆಗಿನ ವಿದ್ಯುತ್ ಖರೀದಿ ಒಪ್ಪಂದದ ಅನ್ವಯ ನಿಗದಿಪಡಿಸಿರುವ ಕಾಲಮಿತಿಯಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು ಎಂದು ಹೇಳಿದೆ.

ಒಪ್ಪಂದದ ಪ್ರಕಾರ ಯೋಜನೆಗೆ ಅಗತ್ಯವಿರುವ ಭೂಸ್ವಾಧೀನ, ಪವನ ಉತ್ಪಾದನಾ ಘಟಕ ನಿರ್ಮಾಣ ಸೇರಿದಂತೆ ಇಂಧನ ಸಚಿವಾಲಯ ಸೂಚಿಸಿರುವ ಅಂತರರಾಜ್ಯ ಪ್ರಸರಣ ವ್ಯವಸ್ಥೆಯವರೆಗೆ ವಿದ್ಯುತ್ ಸರಬರಾಜು ಗ್ರಿಡ್‌ಗಳನ್ನು ನಿರ್ಮಿಸುವುದು ಕಂಪನಿಯ ಹೊಣೆಯಾಗಿದೆ.

'ಕರ್ನಾಟಕದಲ್ಲಿ ಇದು ಕಂಪನಿಯ ಮೂರನೇ ಪವನ ವಿದ್ಯುತ್ ಘಟಕವಾಗಿದೆ' ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ರಾಜೀವ್ ರಂಜನ್ ಮಿಶ್ರಾ ತಿಳಿಸಿದ್ದಾರೆ.



ಅಮೆರಿಕದಲ್ಲಿ ಅಪಘಾತ: ಆಂಧ್ರ ಶಾಸಕನ 6 ಸಂಬಂಧಿಕರ ಸಾವು

ಅಮಲಾಪುರಂ (ಎಪಿ): ಅಮೆರಿಕದ ಟೆಕ್ಸಾಸ್‌ನಲ್ಲಿ ಮಂಗಳವಾರ ಸಂಜೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಆಂಧ್ರಪ್ರದೇಶದ ವೈಎಸ್‌ಆರ್‌ಸಿಪಿ ಶಾಸಕ ಪಿ.ವೆಂಕಟ ಸತೀಶ್ ಕುಮಾರ್ ಅವರ ಆರು ಮಂದಿ ಸಂಬಂಧಿಕರು ಮೃತಪಟ್ಟಿದ್ದಾರೆ.

ಮೃತದೇಹಗಳನ್ನು ಭಾರತಕ್ಕೆ ತರಲು ಉತ್ತರ ಅಮೆರಿಕದ ತೆಲುಗು ಅಸೋಸಿಯೇಷನ್ (ಟಿಎಎನ್‌ಎ) ಸಂಘಟನೆ ಸಹಾಯ ಮಾಡುತ್ತಿದೆ ಎಂದು ಶಾಸಕ ವೆಂಕಟ ಸತೀಶ್ ಮಾಹಿತಿ ನೀಡಿದ್ದಾರೆ.

ಉದ್ಯಾನವನಕ್ಕೆ ಹೋಗಿ ವಾಪಸ್ ಬರುತ್ತಿದ್ದಾಗ ಟೆಕ್ಸಾಸ್‌ನ ಕ್ಲೆಬೂರ್ನ್ ನಗರದಲ್ಲಿ ಎದುರಿನಿಂದ ಬಂದ ಟ್ರಕ್, ಕಾರಿಗೆ ಡಿಕ್ಕಿ ಹೊಡೆದಿದೆ. ಈ ಘಟನೆಯಲ್ಲಿ ಕಾರಿನಲ್ಲಿದ್ದ ಏಳು ಮಂದಿ ಪೈಕಿ ಆರು ಮಂದಿ ಮೃತಪಟ್ಟಿದ್ದು, ತೀವ್ರವಾಗಿ ಗಾಯಗೊಂಡ ಲೋಕೇಶ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದರು.

ಟ್ರಕ್‌ನಲ್ಲಿದ್ದ ಇಬ್ಬರೂ ಗಾಯಗೊಂಡಿದ್ದು, ಟ್ರಕ್ ಚಾಲನೆ ಮಾಡುತ್ತಿದ್ದವರ ಅಚಾತುರ್ಯದಿಂದಲೇ ಅಪಘಾತ ಸಂಭವಿಸಿದೆ ಎಂದು ಅಮೆರಿಕದ ಮಾಧ್ಯಮಗಳು ವರದಿ ಮಾಡಿವೆ.

ಸೆನ್ಸೆಕ್ಸ್, ನಿಫ್ಟಿ ಸಾರ್ವಕಾಲಿಕ ದಾಖಲೆ

ನವದೆಹಲಿ (ಪಿಟಿಐ): ಬುಧವಾರ ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 701 ಅಂಶ ಏರಿಕೆಯಾಗುವ ಮೂಲಕ 72038 ಅಂಶಗಳಲ್ಲಿ ದಿನದ ವಹಿವಾಟನ್ನು ಪೂರ್ಣಗೊಳಿಸಿ ಸಾರ್ವಕಾಲಿಕ ದಾಖಲೆ ಬರೆಯಿತು.

ಸತತ ನಾಲ್ಕು ದಿನಗಳ ಕಾಲ ಷೇರುಪೇಟೆ ಏರಿಕೆ ದಾಖಲಿಸಿದೆ. ಹಾಗಾಗಿ, ಷೇರು ಹೂಡಿಕೆದಾರರು ₹11.11 ಲಕ್ಷ ಕೋಟಿ ಲಾಭಗಳಿಸಿದ್ದಾರೆ. ದೇಶದ ಸ್ಥೂಲ ಆರ್ಥಿಕತೆಯ ಅಂಶಗಳು ಹಾಗೂ ಜಾಗತಿಕ ಮಾರುಕಟ್ಟೆಯಲ್ಲಿನ ವಿದ್ಯಮಾನಗಳ ಮೇಲೆ ಹೂಡಿಕೆದಾರರು ವಿಶ್ವಾಸ ಇಟ್ಟಿರುವುದೇ ಸೆನ್ಸೆಕ್ಸ್ ಏರಿಕೆಗೆ ಕಾರಣವಾಗಿದೆ.

ನಿಫ್ಟಿ ಕೂಡ 213 ಅಂಶ ಏರಿಕೆಯಾಗುವ ಮೂಲಕ 21654 ಅಂಶಗಳಿಗೆ ತಲುಪಿ ಗರಿಷ್ಠ ಮಟ್ಟ ದಾಖಲಿಸಿದೆ.

ರೂಪಾಯಿ 15 ಪೈಸೆ ಕುಸಿತ: ಡಾಲರ್ ಎದುರಿನ ರೂಪಾಯಿ ವಿನಿಮಯ ದರವು 15 ಪೈಸೆಗೆ ಕುಸಿತ ಕಂಡು ₹83.34ಕ್ಕೆ ಇಳಿಯಿತು.

ವಿದೇಶಿ ನಿಧಿಯ ನಿರಂತರ ಹೊರಹರಿವು, ರಫ್ತುದಾರರು ಹಾಗೂ ಬ್ಯಾಂಕ್‌ಗಳಿಂದ ಅಮೆರಿಕದ ಕರೆನ್ಸಿಗೆ ಬೇಡಿಕೆ ಹೆಚ್ಚಿದ್ದರಿಂದ ರೂಪಾಯಿ ಕುಸಿತದ ಹಾದಿ ಹಿಡಿಯಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	590
ಅಡಿಕೆ	
ಬಂಟ್ವಾಳ	
ಕೋಕ	15000-27500
ಹೊಸತು	27500-36000
ಹಳತು	41500-44000
ಚಿತ್ರದುರ್ಗ	
ಅಪಿ	47919-48329
ಬೆಟ್ಟೆ	36939-37369
ಕೆಂಪುಗೋಟು	30400-30800
ರಾಶಿ	47499-47889
ಹೊನ್ನಾವರ	
ಹಳೆಚಾಲಿ	36000-38000
ಕುಮಟ	
ಚಿಪ್ಪು	25509-33809
ಕೋಕ	19509-33099
ಹಳೆಚಾಲಿ	35699-38399
ಹೊಸಚಾಲಿ	32299-34099
ಪುತ್ತೂರು	
ಕೋಕ	11000-25000
ಹೊಸತು	27000-36500
ಸಾಗರ	
ಬಿಳಿಗೋಟು	22289-33299
ಚಾಲಿ	36666-36666
ಕೋಕ	19899-34699
ಕೆಂಪುಗೋಟು	20169-35799
ರಾಶಿ	48119-48119
ಸಿಪ್ಪೆಗೋಟು	20466-20466
ಶಿವಮೊಗ್ಗ	
ಬೆಟ್ಟೆ	26069-53801
ಗೊರಬಲು	15129-39659
ಹೊಸತು	42001-48399
ರಾಶಿ	42001-48399
ಸರಕು	45507-80840
ಸಿದ್ದಾಪುರ	
ಬಿಳಿಗೋಟು	30399-31619
ಚಾಲಿ	35599-38219
ಕೋಕ	30019-31419
ಕೆಂಪುಗೋಟು	31699-31699
ರಾಶಿ	44099-47629
ತಟ್ಟಿಬೆಟ್ಟೆ	38699-46119
ಶಿರಸಿ	
ಬೆಟ್ಟೆ	38069-44799
ಬಿಳಿಗೋಟು	27099-35658
ಚಾಲಿ	36599-38878
ಕೆಂಪುಗೋಟು	32699-34599
ಯಲ್ಲಾಪುರ	
ಅಪಿ	56479-57600
ಬಿಳಿಗೋಟು	24812-34350
ಚಾಲಿ	35891-38644
ಕೋಕ	17099-32519
ಕೆಂಪುಗೋಟು	20169-33699
ರಾಶಿ	44100-53595
ತಟ್ಟಿಬೆಟ್ಟೆ	37969-43800

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	14000	-	194.35
ಎಸಿ	-	7500	-	
ಆರ್‌ಪಿ	-	10900	-	ಲಂಡನ್
ಆರ್‌ಸಿ	-	7000	-	2837 ಡಾಲರ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266, 8050198999

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036125229

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು,ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ.ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- . ESI, PF ಸೌಲಭ್ಯವಿರುತ್ತದೆ. ಬೆಂಗಳೂರು- 56. ಸಂಪರ್ಕಿಸಿ: 7899235388, 9148525233

ವೈವಾಹಿಕ

Grooms Wanted

Christian

PARENTS OF 29 yrs god fearing, post grad, working for Mnc, bangalore based, looking for suitable groom, email- annemelda22@gmail.com

ಪ್ರವಾಸ

Travel

ವಿಮಾನ/ A/C ಬಸ್ಸಿನಲ್ಲಿ 27.01.2024 ರಿಂದ 6/13 ದಿನಗಳು ಪುರಿ,ಕಲ್ಕತ್ತಾ,ಸಿಕ್ಕಿಂ ಡಾರ್ಜಲಿಂಗ್ ಅಸ್ಸಾಂ ಮೇಘಾಲಯ ಸಿಲಿಗುರಿ ಇತ್ಯಾದಿ. 05.02.2024 ರಿಂದ 8 ದಿನಗಳು ಕಾಶಿ,ಗಯಾ ಪ್ರಯಾಗ್‌ರಾಜ್ ನೈಮಿಶಾರಣ್ಯ,ಅಯೋಧ್ಯ ಇತ್ಯಾದಿ. 05.02.2024 ರಿಂದ 11 ದಿನಗಳು ಉಜ್ಜಯಿನಿ ಸೋಮನಾಥ್ ದ್ವಾರಕ ನಿಷ್ಕಳಂಕ ಮಹಾದೇವ ಸರ್ದಾರ್ ವಲ್ಲಭಾಯ್ ಪಟೇಲರ ಪ್ರತಿಮೆ ಇತ್ಯಾದಿ. ಸಂಪರ್ಕಿಸಿ: ಅನಿತಾ ಟ್ರಾವಲ್ಸ್ ಶೇಷಾದ್ರಿಪುರ ಬೆಂಗಳೂರು20. 9448602641 7760884305

27.01.2024 12.03.2024 12.04.2024 17.05.2024 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 06.02.2024 05.03.2024 ದುಬೈ,ಅಬುದಾಬಿ 5 ದಿನಗಳು. 15.03.2024 15.04.2024 21.05.2024 ನೇಪಾಳ 9 ದಿನಗಳು. 06.03.2024 12.04.2024 05.05.2024 ಭೂತಾನ್ 8 ದಿನಗಳು . 05.02.2024 25.03.2024 02.04.2024 ಶ್ರೀಲಂಕಾ 6 ದಿನಗಳು. 02.03.2024 03.04.2024 02.06.2024 ಅಸ್ಸಾಂ,ಮೇಘಾಲಯ 9 ದಿನಗಳು. 17.01.2024 27.02.2024 09.03.2024 ಗುಜರಾತ್ 8 ದಿನಗಳು. 10.02.2024 15.03.2024 ರಾಜಸ್ಥಾನ್ 10 ದಿನಗಳು. 15.03.2024 29.03.2024 16.04.2024 ಕಾಶಿ,ಗಯಾ,ಅಯೋಧ್ಯಾ 7 ದಿನಗಳು. 12.04.2024 06.05.2024 05.06.2024 ಕಾಶ್ಮೀರ್ 6 ದಿನಗಳು. 05.04.2024 25.04.2024 21.05.2024 ಶಿಮ್ಲಾ,ಕುಲುಮನಾಲಿ 8 ದಿನಗಳು. 15.02.2024 26.03.2024 ಉಜ್ಜಯಿನಿ,ಓಂಕಾರೇಶ್ವರ 10 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು.03 9448402248 7022547922

15/02/2024ರಿಂದ ಮಧುರೈ, ರಾಮೇಶ್ವರ,ನವಗ್ರಹ ಹಾಗೂ ವಾಸವಿಪೆನ್ನಗೊಂಡ, ಪಂಚರಾಮ ಕ್ಷೇತ್ರ. 14/03/2024ರಿಂದ 16ದಿನಗಳ ಮುಕ್ತಿನಾಥ್, ಪೋಕ್ರಾ,ಕಾಶಿ,ಅಯೋಧ್ಯ, ಚಾರುಧಾಮ್,ವೈಷ್ಣೋದೇವಿ, ಕಾಶ್ಮಿರ ಯಾತ್ರೆಗಳಿಗೆ ವಿಚಾರಿಸಿ: ವಿಷ್ಣನ್ ಟ್ರಾವೆಲ್ ಲೈನ್ಸ್, ಮಿನರ್ವ ಸರ್ಕಲ್. ಬೆಂಗಳೂರು-04. 8105657052/ 9480182865.

ಭಾರತಪರಂಪರ ದರ್ಶನ 5.1.2024, 6ದಿನಗಳ ಅಹೋಬಿಲಮ್ ಶ್ರೀಶೈಲಂ,ಜ್ಯೋತಿರ್ಲಿಂಗ. 16.1.2024, 11ದಿನಗಳ ಗುಜರಾತ್, ಮಧ್ಯಪ್ರದೇಶ 4,ಜ್ಯೋತಿರ್ಲಿಂಗ. 23.2.2024 ಅಯೋಧ್ಯ,ಕಾಶಿ 7ದಿನಗಳು. 9448792891.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ದೇಶ ಕಾಯುವ ಜತೆಯಲ್ಲೇ ಜನರ ಮನ ಗೆಲ್ಲುವುದು ಮುಖ್ಯ: ರಕ್ಷಣಾ ಸಚಿವರ ಕಿವಿಮಾತು

ಲೋಪ ಆಗದಂತೆ ಎಚ್ಚರವಹಿಸಿ: ರಾಜನಾಥ್

ಪ್ರಜಾವಾಣಿ ವಾರ್ತೆ/ ಪಿಟಿಐ

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ರಜೌರಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ನಾಗರಿಕನನ್ನು ಬುಧವಾರ ಭೇಟಿಯಾಗಿ ಸಾಂತ್ವನ ಹೇಳಿದರು –ಪಿಟಿಐ ಚಿತ್ರ

ಶ್ರೀನಗರ/ ಜಮ್ಮು: ದೇಶವನ್ನು ಶತ್ರುಗಳಿಂದ ರಕ್ಷಿಸುವ ಕಾರ್ಯಾಚರಣೆಯ ವೇಳೆ ಜನರ ಭಾವನೆಗಳಿಗೆ ನೋವು ಉಂಟಾಗುವಂತಹ 'ತಪ್ಪು' ಆಗದಂತೆ ಎಚ್ಚರವಹಿಸಿ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಬುಧವಾರ ಭದ್ರತಾ ಪಡೆಗಳಿಗೆ ಕಿವಿಮಾತು ಹೇಳಿದರು.

ಪೂಂಛ್ ಜಿಲ್ಲೆಯಲ್ಲಿ ಭದ್ರತಾ ಪಡೆಯ ವಾಹನಗಳ ಮೇಲೆ ಉಗ್ರರ ದಾಳಿಯ ಬಳಿಕ ಸೇನೆಯು ವಶಕ್ಕೆ ಪಡೆದಿದ್ದ ಮೂವರು ನಾಗರಿಕರು ನಿಗೂಢವಾಗಿ ಮೃತಪಟ್ಟಿದ್ದರು. ಭದ್ರತಾ ವ್ಯವಸ್ಥೆಯ ಪರಿಶೀಲನೆಗೆ ಬುಧವಾರ ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿದ ಅವರು ನಾಗರಿಕರ ಸಾವಿನ ಕುರಿತಂತೆ ಈ ಮಾತುಗಳನ್ನಾಡಿದರು.

'ನೀವು ಈ ದೇಶದ ಕಾವಲುಗಾರರು. ಆದರೆ ದೇಶದ ಭದ್ರತೆಯನ್ನು ಖಾತರಿಪಡಿಸುವ ಜತೆಯಲ್ಲೇ, ಜನರ ಹೃದಯವನ್ನು ಗೆಲ್ಲುವ ಜವಾಬ್ದಾರಿಯೂ ನಿಮ್ಮ ಮೇಲಿದೆ. ದೇಶವಾಸಿಗಳ ಭಾವನೆಗಳಿಗೆ ನೋವು ಉಂಟಾಗುವ ತಪ್ಪು ಮಾಡಬೇಡಿ' ಎಂದರು.

ಭದ್ರತಾ ಪಡೆಗಳು ಜನರೊಂದಿಗೆ ಉತ್ತಮ ಬಾಂಧವ್ಯ ಹೊಂದಿರಬೇಕು ಎಂದ ಅವರು, 'ನಾವು ಯುದ್ಧ ಜಯಿಸಬೇಕು, ಭಯೋತ್ಪಾದಕರನ್ನು ಹತ್ತಿಕ್ಕಬೇಕು ನಿಜ. ಆದರೆ, ಜನರ ಮನ ಗೆಲ್ಲುವುದು ನಿಮ್ಮ ಮೇಲಿರುವ ಬಲುದೊಡ್ಡ ಜವಾಬ್ದಾರಿ' ಎಂದು ಸಲಹೆ ನೀಡಿದರು.

> **ಸೈನಿಕರ ತ್ಯಾಗ ಅಪ್ರತಿಮವಾಗಿದ್ದು, ಅದಕ್ಕೆ ಬೆಲೆಕಟ್ಟಲು ಸಾಧ್ಯವಿಲ್ಲ. ಕಾಶ್ಮೀರದಲ್ಲಿ ಗಸ್ತು, ಭದ್ರತೆಯನ್ನು ಹೆಚ್ಚಿಸಲು ಸರ್ಕಾರ ಎಲ್ಲ ಕ್ರಮಕೈಗೊಳ್ಳಲಿದೆ**
> **ರಾಜನಾಥ್ ಸಿಂಗ್,** ರಕ್ಷಣಾ ಸಚಿವ

ಸೇನೆಯ ಮೇಲೆ ನಂಬಿಕೆಯಿದೆ: ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆ ಹತ್ತಿಕ್ಕುವಲ್ಲಿ ಭದ್ರತಾ ಪಡೆಗಳು ಯಶಸ್ವಿಯಾಗಲಿದ್ದು, ಸೇನೆಯ ಸಾಮರ್ಥ್ಯದ ಮೇಲೆ ಸಂಪೂರ್ಣ ನಂಬಿಕೆಯಿದೆ ಎಂದು ಅವರು ಪ್ರತಿಪಾದಿಸಿದರು.

'ನಿಮ್ಮ ಧೈರ್ಯ ಮತ್ತು ದೃಢತೆಯ ಮೇಲೆ ನನಗೆ ವಿಶ್ವಾಸವಿದೆ. ಜಮ್ಮು ಮತ್ತು ಕಾಶ್ಮೀರದ ನೆಲದಿಂದ ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡಬೇಕೆಂಬ ಬದ್ಧತೆಯೊಂದಿಗೆ ನೀವು ಮುಂದುವರಿಯಬೇಕು. ಈ ಹೋರಾಟದಲ್ಲಿ ಗೆಲುವು ಸಾಧಿಸುವ ಸಂಪೂರ್ಣ ನಂಬಿಕೆಯಿದೆ' ಎಂದು ಜಮ್ಮುವಿನ ರಜೌರಿ ಜಿಲ್ಲೆಯಲ್ಲಿ ಭದ್ರತಾ ಪಡೆಗಳನ್ನು ಉದ್ದೇಶಿಸಿ ಅವರು ಹೇಳಿದರು.

ಪೂಂಛ್ ಜಿಲ್ಲೆಯಲ್ಲಿ ಡಿ.21 ರಂದು ಭದ್ರತಾ ಪಡೆಯ ವಾಹನಗಳ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ ನಾಲ್ವರು ಯೋಧರು ಹುತಾತ್ಮರಾಗಿದ್ದರು.

ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಮತ್ತು ಇತರ ಹಿರಿಯ ಅಧಿಕಾರಿಗಳ ಜತೆಗೂಡಿ ಅವರು ಗಡಿಭಾಗದಲ್ಲಿ ಪರಿಸ್ಥಿತಿಯ ಅವಲೋಕನ ನಡೆಸಿದರು.

ನಿಲ್ಲದ ಶೋಧ ಕಾರ್ಯ: ಸಾಂಬಾ ಮತ್ತು ಪೂಂಛ್ ಜಿಲ್ಲೆಗಳಲ್ಲಿ ಪಾಕಿಸ್ತಾನ ಗಡಿಗೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆ ಮುಂದುವರಿಸಿವೆ.

ಇಲ್ಲಿ ಪಹರೆ ಮತ್ತು ಶೋಧ ಕಾರ್ಯಾಚರಣೆ ಈಗ ಏಳನೇ ದಿನಕ್ಕೆ ಕಾಲಿಟ್ಟಿದೆ.

ಪೂಂಛ್‌ನ ಕಿರ್ನಿ ವಲಯದ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಬಳಿ ಶಂಕಾಸ್ಪದ ಓಡಾಟ ವರದಿಯಾದ ಕಾರಣ ಭದ್ರತಾ ಪಡೆಗಳು ಹೊಸದಾಗಿ ಕಾರ್ಯಾಚರಣೆ ಆರಂಭಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕುಟುಂಬ ಸದಸ್ಯರ ಭೇಟಿ, ನ್ಯಾಯದ ಭರವಸೆ

ಡಿಸೆಂಬರ್ 22ರಂದು ಪೂಂಛ್‌ನಲ್ಲಿ ನಿಗೂಢವಾಗಿ ಸಾವನ್ನಪ್ಪಿದ ಮೂವರು ನಾಗರಿಕರ ಕುಟುಂಬ ಸದಸ್ಯರನ್ನು ರಾಜನಾಥ್ ಸಿಂಗ್ ಅವರು ಬುಧವಾರ ಭೇಟಿಯಾಗಿ, ನ್ಯಾಯದ ಭರವಸೆ ನೀಡಿದರು.

ವಿಚಾರಣೆಗೆಂದು ಸೇನಾ ಸಿಬ್ಬಂದಿ ಕರೆದೊಯ್ದಿದ್ದ ಸಫೀರ್ ಹುಸೇನ್, ಮೊಹಮ್ಮದ್ ಶೌಕತ್ ಮತ್ತು ಶಬೀರ್ ಅಹ್ಮದ್ ಅವರು ಮೃತಪಟ್ಟಿದ್ದರು. 'ಕಸ್ಟಡಿ ಮರಣ' ಆರೋಪ ಕೇಳಿಬಂದಿತ್ತಲ್ಲದೆ, ಕಾಶ್ಮೀರ ಕಣಿವೆಯಲ್ಲಿ ಜನರ ಆಕ್ರೋಶ ಹೆಚ್ಚಿತ್ತು. ರಜೌರಿಯ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಇತರ ನಾಲ್ವರು ನಾಗರಿಕರನ್ನೂ ಅವರು ಭೇಟಿಯಾದರು.

ಸತ್ತಿರುವ ಮೂವರು ನಾಗರಿಕರ ಕುಟುಂಬ ವರ್ಗಕ್ಕೆ ತಲಾ ₹30 ಲಕ್ಷ ಪರಿಹಾರ, ಸರ್ಕಾರಿ ಉದ್ಯೋಗ ಹಾಗೂ ಮನೆ ನಿರ್ಮಿಸಲು ನಿವೇಶನ ನೀಡುವುದಾಗಿ ಜಿಲ್ಲಾಡಳಿತ ಈಗಾಗಲೇ ಭರವಸೆ ನೀಡಿದೆ.

ಯಾವುದೇ ನಿರೀಕ್ಷೆ ಇಲ್ಲ: ಫಾರೂಕ್ ಅಬ್ದುಲ್ಲಾ

ಶ್ರೀನಗರ: ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಜಮ್ಮು ಮತ್ತು ಕಾಶ್ಮೀರ ಭೇಟಿಯಲ್ಲಿ ತಮಗೆ ಯಾವುದೇ ನಿರೀಕ್ಷೆಗಳಿಲ್ಲ ಎಂದು ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಅವರು ಹೇಳಿದ್ದಾರೆ.

'ಈ ಭೇಟಿಯಿಂದ ನನಗೆ ಯಾವುದೇ ನಿರೀಕ್ಷೆಯಿಲ್ಲ. ಅವರು ಸತ್ತವರನ್ನು ಮರಳಿ ತರುವರೇ? ಆ ಶಕ್ತಿ ಅವರಿಗಿದೆಯೇ? ಆದರೆ ಅಂತಹ ಅನ್ಯಾಯ ಮರುಕಳಿಸದ ಹಾಗೆ ನೋಡಿಕೊಳ್ಳಲಷ್ಟೇ ಅವರಿಗೆ ಸಾಧ್ಯ' ಎಂದು ಹೇಳಿದ್ದಾರೆ.

ಪ್ರಸಾರ ಭಾರತಿ– ರೇಡಿಯೊ ಮಲೇಷ್ಯಾ ಒಪ್ಪಂದ

ನವದೆಹಲಿ (ಪಿಟಿಐ): ರೇಡಿಯೊ ಮತ್ತು ಟೆಲಿವಿಷನ್ ಪ್ರಸಾರ ಕ್ಷೇತ್ರದಲ್ಲಿನ ಸಹಕಾರವನ್ನು ಇನ್ನಷ್ಟು ವೃದ್ಧಿಸುವ ನಿಟ್ಟಿನಲ್ಲಿ 'ಪ್ರಸಾರ ಭಾರತಿ'ಯು ಮಲೇಷ್ಯಾದ ಸರ್ಕಾರಿ ಸ್ವಾಮ್ಯದ 'ರೇಡಿಯೊ ಟೆಲಿವಿಷನ್ ಮಲೇಷ್ಯಾ' ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಬುಧವಾರ ನಡೆದ ಸಂಪುಟ ಸಭೆಯಲ್ಲಿ ಈ ಬಗ್ಗೆ ಮಾಹಿತಿ ನೀಡಲಾಯಿತು.

ಪ್ರಸಾರ, ಸುದ್ದಿಗಳು ಹಾಗೂ ಧ್ವನಿ ಮತ್ತು ದೃಶ್ಯ ಕಾರ್ಯಕ್ರಮಗಳ ವಿನಿಮಯ ಮತ್ತು ಈ ಕ್ಷೇತ್ರದಲ್ಲಿನ ಸಹಕಾರವನ್ನು ಬಲಪಡಿಸುವ ನಿಟ್ಟಿನಲ್ಲಿ ನವೆಂಬರ್ 7 ರಂದು ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

'ಪ್ರಸಾರ ಭಾರತಿಯು ರಾಷ್ಟ್ರ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ದೇಶ ಹಾಗೂ ವಿದೇಶಗಳಲ್ಲಿ ಎಲ್ಲರಿಗೂ ಅರ್ಥಪೂರ್ಣ, ನಿಖರ ಮಾಹಿತಿ ಒದಗಿಸುವುದರತ್ತ ಗಮನ ಹರಿಸಿದೆ' ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಪ್ರಸಾರ ಭಾರತಿಯು ಒಟ್ಟು 46 ರಾಷ್ಟ್ರಗಳ ಜತೆ ಇಂತಹ ಒಪ್ಪಂದ ಮಾಡಿಕೊಂಡಿದೆ.

ಸಂಪುಟ ಸಭೆಯ ವಿವರ

- ನ್ಯೂಜಿಲೆಂಡ್‌ನ ಆಕ್ಲೆಂಡ್‌ನಲ್ಲಿ ಭಾರತವು ಶೀಘ್ರವೇ ಕಾನ್ಸುಲೇಟ್ ಜನರಲ್ ಕಚೇರಿ ಆರಂಭಿಸಲು ಒಪ್ಪಿಗೆ ನೀಡಲಾಗಿದೆ. ಈ ಕಚೇರಿಯು ವರ್ಷದೊಳಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಲಿದೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ.
- ಇಟಲಿಯೊಂದಿಗೆ ವಲಸೆ ಪ್ರಕ್ರಿಯೆ ಒಪ್ಪಂದಕ್ಕೆ ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್ ಮತ್ತು ಇಟಲಿಯ ವಿದೇಶಾಂಗ ವ್ಯವಹಾರಗಳ ಸಚಿವ ಆಂಟನಿಯೊ ತಜಾನಿ ಅವರು ನವೆಂಬರ್‌ನಲ್ಲಿ ಸಹಿ ಮಾಡಿದ್ದು ಇದಕ್ಕೆ ಕೂಡ ಒಪ್ಪಿಗೆ ನೀಡಲಾಯಿತು. ಭಾರತದ ವಿದ್ಯಾರ್ಥಿಗಳು ಇಟಲಿಯಲ್ಲಿ ವಿದ್ಯಾಭ್ಯಾಸ ಮುಗಿದ ಬಳಿಕ ಒಂದು ವರ್ಷದವರೆಗೆ ನೆಲೆಸಿ ವೃತ್ತಿಪರ ಅನುಭವವನ್ನು ಪಡೆಯಲು ಈ ಒಪ್ಪಂದ ಅನುವು ಮಾಡಿಕೊಡುತ್ತದೆ.
- ಬಿಹಾರದಲ್ಲಿ ಗಂಗಾ ನದಿ ಮೇಲೆ ಷಟ್ಪಥದ ಸೇತುವೆ ನಿರ್ಮಿಸಲು ಕೂಡ ಒಪ್ಪಿಗೆ ದೊರಕಿದೆ. ಈ ಸೇತುವೆಯ ಉದ್ದ 4.56 ಕಿ.ಮೀ. ಇದು ದೀಘಾ ಮತ್ತು ಸೋನ್‌ಪುರಕ್ಕೆ ಸಂಪರ್ಕ ಕಲ್ಪಿಸುತ್ತದೆ.

ಅಮೋನಿಯಾ ಅನಿಲ ಸೋರಿಕೆ: ಹಲವರು ಅಸ್ವಸ್ಥ

ಚೆನ್ನೈ (ಪಿಟಿಐ): ಉತ್ತರ ಚೆನ್ನೈನ ರಸಗೊಬ್ಬರ ತಯಾರಿಕಾ ಘಟಕದಿಂದ ಸಮುದ್ರಕ್ಕೆ ಹಾದುಹೋಗಿರುವ ಪೈಪ್‌ಲೈನ್‌ನಲ್ಲಿ ಅಮೋನಿಯಾ ಅನಿಲ ಸೋರಿಕೆಯಾಗಿ ಸ್ಥಳೀಯ ನಿವಾಸಿಗಳು ಅಸ್ವಸ್ಥರಾಗಿದ್ದು, 60 ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಂಗಳವಾರ ರಾತ್ರಿ 11.45ಕ್ಕೆ ಅನಿಲ ಸೋರಿಕೆಯಾಗಿದೆ. ಅತಿಯಾದ ದುರ್ಗಂಧದಿಂದ ಜನರು ಸಂಕಷ್ಟಕ್ಕೆ ಒಳಗಾದರು. ಕೆಲವರಲ್ಲಿ ಉಸಿರಾಟದ ತೊಂದರೆ, ಮೂರ್ಛೆ, ವಾಕರಿಕೆ, ಗಂಟಲು ಮತ್ತು ಎದೆಯಲ್ಲಿ ಉರಿ ಕಾಣಿಸಿಕೊಂಡಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಮನೆಯೊಳಗೆ ಮಲಗಿದ್ದ ಜನ ಆತಂಕಗೊಂಡು ರಸ್ತೆಗೆ ಓಡಿ ಬಂದಿದ್ದಾರೆ. ಮಕ್ಕಳು ಸೇರಿದಂತೆ ಅಸ್ವಸ್ಥರಾಗಿದ್ದವರನ್ನು ಕೂಡಲೇ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದಿದ್ದಾರೆ.

ಉತ್ತರ ಚೆನ್ನೈನ ಚಿನ್ನ ಕುಪ್ಪಂ, ಪೆರಿಯ ಕುಪ್ಪಂ, ನೇತಾಜಿ ನಗರ, ಬರ್ಮಾ ನಗರದ ನಿವಾಸಿಗಳು ಅನಿಲ ಸೋರಿಕೆಯಿಂದ ತೊಂದರೆ ಅನುಭವಿಸಿದ್ದಾರೆ. ಈ ಪ್ರದೇಶಗಳಲ್ಲಿ ಹೆಚ್ಚಾಗಿ ಮೀನುಗಾರರು ವಾಸಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ. ಸಮುದ್ರದ ದಡದ ಸಮೀಪ ಪೈಪ್‌ಲೈನ್‌ನಿಂದ ಅನಿಲ ಸೋರಿಕೆಯಾಗಿದ್ದು, ಸದ್ದು ಕೇಳಿರುವುದಾಗಿ ಸ್ಥಳೀಯರು ತಿಳಿಸಿದ್ದಾರೆ.

ತನಿಖೆ ಚುರುಕು: ದೆಹಲಿಯಲ್ಲಿ ಕಟ್ಟೆಚ್ಚರ

ಇಸ್ರೇಲ್ ರಾಯಭಾರ ಕಚೇರಿ ಸಮೀಪ ಸ್ಫೋಟ ಪ್ರಕರಣ

ನವದೆಹಲಿ (ಪಿಟಿಐ): ಇಸ್ರೇಲ್ ರಾಯಭಾರ ಕಚೇರಿ ಸಮೀಪ ನಡೆದ ಬಾಂಬ್ ಸ್ಫೋಟ ಪ್ರಕರಣದ ತನಿಖೆಯನ್ನು ದೆಹಲಿ ಪೊಲೀಸರು ಚುರುಕುಗೊಳಿಸಿದ್ದಾರೆ. ಸ್ಫೋಟ ಸಂಭವಿಸಿದ ಸಂದರ್ಭದಲ್ಲಿ ಇಬ್ಬರು ಯುವಕರು ಆ ರಸ್ತೆಯಲ್ಲಿ ನಡೆದು ಹೋಗಿರುವುದು ಸಿ.ಸಿ. ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಘಟನಾ ಸ್ಥಳಕ್ಕೆ ಬುಧವಾರ ವಿಧಿ ವಿಜ್ಞಾನ ತಜ್ಞರೊಂದಿಗೆ ಬಂದ ರಾಷ್ಟ್ರೀಯ ಭದ್ರತಾ ಪಡೆಯು, ಸ್ಫೋಟಕ್ಕೆ ಬಳಸಿರಬಹುದು ಎಂದು ಶಂಕಿಸಲಾದ ಮಾದರಿಗಳನ್ನು ಸಂಗ್ರಹಿಸಿದರು. ಎನ್‌ಎಸ್‌ಜಿಯ ಶ್ವಾನದಳ, ದೆಹಲಿ ಪೊಲೀಸರ ವಿಶೇಷ ಘಟಕ ಮತ್ತು ಸ್ಥಳೀಯ ಪೊಲೀಸರು ಸ್ಥಳ ಪರಿಶೀಲನೆ ನಡೆಸಿದರು. ಭದ್ರತೆಗಾಗಿ ಅರೆಸೇನಾ ಪಡೆಯನ್ನು ನಿಯೋಜಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಬ್ದುಲ್ ಕಲಾಂ ರಸ್ತೆ ಮತ್ತು ಪೃಥ್ವಿರಾಜ್ ರಸ್ತೆಯಲ್ಲಿನ ಸಿ.ಸಿ.ಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಭದ್ರತಾ ಏಜೆನ್ಸಿಗಳು ವಶಕ್ಕೆ ಪಡೆದು, ಪರಿಶೀಲನೆ ನಡೆಸಿದ್ದು, ಸ್ಫೋಟ ಸಂಭವಿಸುವ ಸ್ವಲ್ಪ ಮುನ್ನ ಇಬ್ಬರು ಯುವಕರು ಆ ರಸ್ತೆಯಲ್ಲಿ ನಡೆದುಕೊಂಡು ಹೋಗಿರುವುದು ಸಿಸಿಟಿವಿಯಲ್ಲಿ ಸೆರೆಯಾಗಿದೆ. ಆದರೆ, ಅವರು ಶಂಕಿತರೇ ಎಂಬುದನ್ನು ಇನ್ನಷ್ಟೇ ಪತ್ತೆ ಹಚ್ಚಬೇಕಿದೆ.

ಸ್ಫೋಟದ ತೀವ್ರತೆಯನ್ನು ಪತ್ತೆ ಹಚ್ಚಲು ತಜ್ಞರು ಅಯಸ್ಕಾಂತದ ಸಾಧನಗಳನ್ನು ಬಳಸಿದರು. ಆದರೆ, ಸ್ಫೋಟಕ್ಕೆ ಬಳಸಿರಬಹುದಾದ ಯಾವುದೇ ಅಂಶಗಳು ಘಟನಾ ಸ್ಥಳದಲ್ಲಿ ಪತ್ತೆಯಾಗಿಲ್ಲ. ಹೀಗಾಗಿ ಇದು ರಾಸಾಯನಿಕ ಸ್ಫೋಟ ಎಂಬುದನ್ನು ಅಲ್ಲಗಳೆಯಲಾಗದು ಎಂದು ಭದ್ರತಾ ಅಧಿಕಾರಿಗಳು ತಿಳಿಸಿದ್ದಾರೆ.

ದೆಹಲಿಯಲ್ಲಿರುವ ಇಸ್ರೇಲ್ ರಾಯಭಾರ ಕಚೇರಿ, ಯಹೂದಿಗಳು ವಾಸವಿರುವ ಸ್ಥಳಗಳಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ. ಅಲ್ಲದೆ, ರಾಷ್ಟ್ರ ರಾಜಧಾನಿಯಲ್ಲಿ ಕಟ್ಟೆಚ್ಚರ ವಹಿಸುವಂತೆ ಸ್ಥಳೀಯ ಪೊಲೀಸರಿಗೆ ಸೂಚಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿರುವ ಇಸ್ರೇಲ್ ರಾಯಭಾರ ಕಚೇರಿ ಸಮೀಪವೇ ಮಂಗಳವಾರ ಸಂಜೆ ಸ್ಫೋಟ ಸಂಭವಿಸಿತ್ತು. ಈ ಘಟನೆಯಲ್ಲಿ ಯಾವುದೇ ಹಾನಿ ಅಥವಾ ಯಾರಿಗೂ ಗಾಯಗಳಾಗಿರಲಿಲ್ಲ.

'ಜನಸಂದಣಿಯ ಸ್ಥಳಕ್ಕೆ ಹೋಗಬೇಡಿ'

ಜೆರುಸಲೇಂ (ಪಿಟಿಐ): 'ದೆಹಲಿಯಲ್ಲಿರುವ ಇಸ್ರೇಲ್ ರಾಯಭಾರ ಕಚೇರಿ ಬಳಿ ಮಂಗಳವಾರ ಸಂಜೆ ನಡೆದ ಸ್ಫೋಟವು ಭಯೋತ್ಪಾದಕರ ದಾಳಿ ಇರಬಹುದು' ಎಂದು ಶಂಕಿಸಿರುವ ಇಸ್ರೇಲ್‌ನ ರಾಷ್ಟ್ರೀಯ ಭದ್ರತಾ ಮಂಡಳಿಯು (ಎನ್‌ಎಸ್‌ಸಿ), 'ಭಾರತದಲ್ಲಿರುವ ತನ್ನ ಪ್ರಜೆಗಳಿಗೆ ಹೆಚ್ಚು ಜನಸಂದಣಿ ಇರುವ ಪ್ರದೇಶಗಳಿಗೆ ತೆರಳದಂತೆ' ಸಲಹೆ ನೀಡಿದೆ.

ಈ ಕುರಿತು ಪ್ರತಿಕ್ರಿಯಿಸಿದ ಇಸ್ರೇಲ್ ರಾಯಭಾರ ಕಚೇರಿ ವಕ್ತಾರ ಗುಯ್ ನಿರ್, ಈ ಪ್ರಕರಣ ಕುರಿತು ದೆಹಲಿ ಪೊಲೀಸರು ಮತ್ತು ಭದ್ರತಾ ತಂಡ ತನಿಖೆ ಕೈಗೊಂಡಿದೆ. ಮುಂಜಾಗ್ರತೆ ದೃಷ್ಟಿಯಿಂದ ಭಾರತದಲ್ಲಿರುವ ಇಸ್ರೇಲ್ ಪ್ರಜೆಗಳು ಹೆಚ್ಚು ಜನಸಂದಣಿ ಇರುವ ಮಾಲ್‌ಗಳು ಮತ್ತು ಮಾರುಕಟ್ಟೆ ಇರುವ ಸ್ಥಳಗಳು ಹಾಗೂ ವಿದೇಶಿ ಪ್ರಜೆಗಳು ಹೆಚ್ಚಿರುವ ಸ್ಥಳಗಳಿಗೆ ತೆರಳದಂತೆ ಸೂಚಿಸಲಾಗಿದೆ' ಎಂದು ತಿಳಿಸಿದ್ದಾರೆ.

ಅಲ್ಲದೆ, ಭಾರತದಲ್ಲಿರುವವರು ತಾವು ಇಸ್ರೇಲ್‌ಗೆ ಸೇರಿದವರು ಎಂಬಂತೆ ಗುರುತಿಸಿಕೊಳ್ಳುವ ಯಾವುದೇ ಚಿಹ್ನೆಗಳನ್ನು ಬಹಿರಂಗಪಡಿಸಬಾರದು. ಭದ್ರತೆ ಇಲ್ಲದ ಬೃಹತ್ ಕಾರ್ಯಕ್ರಮಗಳಿಂದ ದೂರವಿರಬೇಕು ಎಂಬುದು ಸೇರಿದಂತೆ ಹಲವು ಸಲಹೆಗಳನ್ನು ನೀಡಲಾಗಿದೆ.

'ಇಂಡಿಯಾ' ಮೈತ್ರಿಕೂಟವೇ ಜನರ ಆಯ್ಕೆ: ಶರದ್ ಪವಾರ್ ವಿಶ್ವಾಸ

'ಪ್ರಧಾನಿ ಅಭ್ಯರ್ಥಿ ಬಿಂಬಿಸುವ ಅಗತ್ಯವಿಲ್ಲ'

ಶರದ್ ಪವಾರ್

ಅಮರಾವತಿ, ಮಹಾರಾಷ್ಟ್ರ (ಪಿಟಿಐ): '1977ರ ಲೋಕಸಭೆ ಚುನಾವಣೆ ವೇಳೆ ವಿರೋಧ ಪಕ್ಷಗಳು ಮೊರಾರ್ಜಿ ದೇಸಾಯಿ ಅವರನ್ನು ಪ್ರಧಾನಿ ಅಭ್ಯರ್ಥಿಯಾಗಿ ಬಿಂಬಿಸಿರಲಿಲ್ಲ' ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಹೇಳುವ ಮೂಲಕ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಧಾನಿ ಅಭ್ಯರ್ಥಿಯಾಗಿ ಬಿಂಬಿಸುವುದಕ್ಕೆ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿ ವಿಚಾರದಲ್ಲಿ ಇನ್ನೂ ಅನಿಶ್ಚಿತತೆ ಮನೆಮಾಡಿರುವ ಮಧ್ಯೆಯೇ ಅವರು ಹೀಗೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈಚೆಗೆ ನಡೆದ ಲೋಕಸಭೆ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಕಳಪೆ ಫಲಿತಾಂಶದ ಹೊರತಾಗಿಯೂ, 2024ರ ಲೋಕಸಭೆ ಚುನಾವಣೆಯಲ್ಲಿ 'ಇಂಡಿಯಾ' ಮೈತ್ರಿಕೂಟವನ್ನು ಜನರು ಬಿಜೆಪಿಗೆ ಪರ್ಯಾಯವಾಗಿ ಆಯ್ಕೆ ಮಾಡಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಇಂಡಿಯಾ' ಮೈತ್ರಿಕೂಟದ ಪಕ್ಷಗಳ ನಡುವೆ ಸ್ಥಾನ ಹಂಚಿಕೆ ಕುರಿತು ಇನ್ನೂ ಚರ್ಚೆ ನಡೆದಿಲ್ಲ. ಆದರೆ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಮಾತುಕತೆ ಆರಂಭವಾಗಿದೆ ಎಂದು ಪವಾರ್ ಅವರು ಹೇಳಿದರು

ಶರ್ಮಿಳಾ ಸೇರಿಸಿಕೊಳ್ಳಲು ಕಾಂಗ್ರೆಸ್ ಒಲವು

ನವದೆಹಲಿ (ಪಿಟಿಐ): ಲೋಕಸಭೆಯ ಮುಂಬರುವ ಚುನಾವಣೆಗೆ ಭಾರಿ ಸಿದ್ಧತೆಯಲ್ಲಿ ತೊಡಗಿರುವ ಕಾಂಗ್ರೆಸ್, ಆಂಧ್ರಪ್ರದೇಶ ಮಾಜಿ ಮುಖ್ಯಮಂತ್ರಿ ವೈ.ಎಸ್.ರಾಜಶೇಖರ ರೆಡ್ಡಿ ಅವರ ಪುತ್ರಿ ವೈ.ಎಸ್.ಶರ್ಮಿಳಾ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಬಗ್ಗೆ ಚಿಂತನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಚುನಾವಣೆಗೆ ಕಾರ್ಯತಂತ್ರ ರೂಪಿಸುವ ಸಲುವಾಗಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ನಾಯಕರಾದ ರಾಹುಲ್ ಗಾಂಧಿ ಮತ್ತಿತರರು ಬುಧವಾರ ಆಂಧ್ರ ಪ್ರದೇಶ ಮತ್ತು ಹಿಮಾಚಲ ಪ್ರದೇಶ ಘಟಕದ ಮುಖಂಡರೊಂದಿಗೆ ಪ್ರತ್ಯೇಕವಾಗಿ ಸಭೆ ನಡೆಸಿ, ಚರ್ಚಿಸಿದರು.

ಈ ಸಂದರ್ಭದಲ್ಲಿ, ಶರ್ಮಿಳಾ ಅವರ ಸೇರ್ಪಡೆಯು ಪಕ್ಷದ ಪುನಶ್ಚೇತನಕ್ಕೆ ನೆರವಾಗಲಿದೆ ಎಂದು ಆಂಧ್ರಪ್ರದೇಶದ ನಾಯಕರು ಹೈಕಮಾಂಡ್‌ಗೆ ತಿಳಿಸಿದರು. ಸಭೆಯಲ್ಲಿ ಭಾಗಿಯಾಗಿದ್ದ ಶೇ 90ರಷ್ಟು ನಾಯಕರು ಶರ್ಮಿಳಾ ಸೇರ್ಪಡೆ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

ತೆಲಂಗಾಣದಲ್ಲಿ ತಮ್ಮದೇ ಪ್ರತ್ಯೇಕ ಪಕ್ಷ ಸ್ಥಾಪಿಸಿರುವ ಶರ್ಮಿಳಾ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದರು.

ಕಾಂಗ್ರೆಸ್ ರ‍್ಯಾಲಿ ಇಂದು

ನಾಗ್ಪುರ: ಮುಂಬರುವ ಲೋಕಸಭಾ ಚುನಾವಣೆಯ ಪ್ರಚಾರಕ್ಕೆ ಕಾಂಗ್ರೆಸ್ ಪಕ್ಷದ 139ನೇ ಸಂಸ್ಥಾಪನಾ ದಿನದಂದೇ ಅಧಿಕೃತವಾಗಿ ಚಾಲನೆ ನೀಡಲು ಪಕ್ಷವು ಸಜ್ಜಾಗಿದ್ದು, ಮಹಾರಾಷ್ಟ್ರದ ನಾಗ್ಪುರದಲ್ಲಿ ಗುರುವಾರ 'ಹೈನ್ ತಯ್ಯಾರ್ ಹಮ್' (ನಾವು ಸಿದ್ಧ) ಬೃಹತ್ ರ‍್ಯಾಲಿ ಆಯೋಜಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾರಾಷ್ಟ್ರ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ, 'ದೇಶದ ಜನರ ಪಾಲಿಗೆ ಇದೊಂದು ಐತಿಹಾಸಿಕ ಗಳಿಗೆಯಾಗಲಿದೆ' ಎಂದು ಹೇಳಿದರು.

ಕಾಂಗ್ರೆಸ್ ಹೈಕಮಾಂಡ್ ಜೊತೆ ಮಾತುಕತೆ ನಡೆಸಲು ಶರ್ಮಿಳಾ ಅವರು ಗುರುವಾರ ನವದೆಹಲಿಗೆ ತೆರಳಲಿದ್ದಾರೆ.

ಸರಣಿ ಸಭೆ: ವಿರೋಧ ಪಕ್ಷಗಳ ಮೈತ್ರಿಕೂಟವಾದ 'ಇಂಡಿಯಾ' ಸೀಟು ಹಂಚಿಕೆ ಕುರಿತ ಮಾತುಕತೆಗೆ ಒತ್ತಾಯಿಸುತ್ತಿರುವ ನಡುವೆಯೇ, ವಿವಿಧ ರಾಜ್ಯಗಳ ನಾಯಕರೊಂದಿಗೆ ಕಾಂಗ್ರೆಸ್ ಹೈಕಮಾಂಡ್ ಸರಣಿ ಸಭೆಗಳನ್ನು ನಡೆಸುತ್ತಿದೆ.

ಸಿಎಎ ಅನುಷ್ಠಾನ ತಡೆಯಲು ಸಾಧ್ಯವಿಲ್ಲ: ಅಮಿತ್ ಶಾ

ಕೋಲ್ಕತ್ತ (ಪಿಟಿಐ): ಪೌರತ್ವ (ತಿದ್ದುಪಡಿ) ಕಾಯ್ದೆಯ (ಸಿಎಎ) ಅನುಷ್ಠಾನವನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಅದು ಈ ನೆಲದ ಕಾನೂನು. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಈ ವಿಷಯದಲ್ಲಿ ಜನರನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಹಜ್ರಾ ವಜಾ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ಅವರು, ಪಶ್ಚಿಮ ಬಂಗಾಳದ ಬಿಜೆಪಿ ನಾಯಕ ಅನುಪಮ್ ಹಜ್ರಾ ಅವರನ್ನು ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಸ್ಥಾನದಿಂದ ಮಂಗಳವಾರ ವಜಾಗೊಳಿಸಿದ್ದಾರೆ. ಹಜ್ರಾ ಅವರು ಕೆಲ ಸಮಯದಿಂದ ಪಕ್ಷದ ವರ್ಚಸ್ಸಿಗೆ ಧಕ್ಕೆ ತರುತ್ತಿರುವ ಕಾರಣ ವಜಾಗೊಳಿಸಲಾಗಿದೆ ಎನ್ನಲಾಗಿದೆ.

ಮುಸ್ಲಿಂ ಲೀಗ್ ಜಮ್ಮು–ಕಾಶ್ಮೀರ ಸಂಘಟನೆ ನಿಷೇಧ

ನವದೆಹಲಿ (ಪಿಟಿಐ): ದೇಶ ವಿರೋಧಿ ಮತ್ತು ಪ್ರತ್ಯೇಕತಾವಾದ ಚಟುವಟಿಕೆಗಳಲ್ಲಿ ತೊಡಗಿರುವ ಹಾಗೂ ಭಯೋತ್ಪಾದನೆಗೆ ಬೆಂಬಲ ನೀಡುತ್ತಿರುವ ಮುಸ್ಲಿಂ ಲೀಗ್ ಜಮ್ಮು–ಕಾಶ್ಮೀರ (ಮಸರತ್ ಆಲಂ ಬಣ) ಸಂಘಟನೆ ಮೇಲೆ ಕೇಂದ್ರ ಸರ್ಕಾರ ಬುಧವಾರ ನಿಷೇಧ ಹೇರಿದೆ.

ಸಂಘಟನೆಯನ್ನು ನಿಷೇಧಿಸುವ ನಿರ್ಧಾರ ಪ್ರಕಟಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, 'ರಾಷ್ಟ್ರದ ಏಕತೆ, ಸಾರ್ವಭೌಮತೆ ಮತ್ತು ಸಮಗ್ರತೆಗೆ ವಿರುದ್ಧವಾಗಿ ಕೆಲಸ ಮಾಡುವವರ ಮೇಲೆ ಕಠಿಣ ಕ್ರಮ ಜರುಗಿಸುವ ಸ್ಪಷ್ಟ ಸಂದೇಶವನ್ನು ನರೇಂದ್ರ ಮೋದಿ ಸರ್ಕಾರ ನೀಡುತ್ತದೆ' ಎಂದು ಹೇಳಿದರು.

'ಎಂಎಲ್‌ಜೆಕೆ–ಎಂಎ ಸಂಘಟನೆಯನ್ನು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯ (ಯುಎಪಿಎ) ಅಡಿಯಲ್ಲಿ ನಿಷೇಧಿಸಲಾಗಿದೆ. ಈ ಸಂಘಟನೆಯ ಸದಸ್ಯರು ಜಮ್ಮು ಮತ್ತು ಕಾಶ್ಮೀರದಲ್ಲಿ ಇಸ್ಲಾಮಿಕ್ ಕಾನೂನು ಜಾರಿಗೊಳಿಸಲು ಜನರನ್ನು ಪ್ರಚೋದಿಸುತ್ತಿದ್ದಾರೆ' ಎಂದು ಗೃಹ ಸಚಿವರು ಸಾಮಾಜಿಕ ಜಾಲತಾಣ 'ಎಕ್ಸ್‌'ನಲ್ಲಿ ಪೋಸ್ಟ್ ಮಾಡಿದ್ದರೆ.

ಎಂಎಲ್‌ಜೆಕೆ–ಎಂಎ ಸಂಘಟನೆಯ ನೇತೃತ್ವವನ್ನು ಆಲ್ ಇಂಡಿಯಾ ಹುರಿಯತ್ ಕಾನ್ಫರೆನ್ಸ್ ಸಂಘಟನೆಯ ಹಂಗಾಮಿ ಮುಖ್ಯಸ್ಥ ಮಸರತ್ ಆಲಂ ವಹಿಸಿಕೊಂಡಿದ್ದಾರೆ.

ನಿಷೇಧಕ್ಕೆ ಕಾರಣಗಳು

- ಪಾಕಿಸ್ತಾನ ಪರ ಪ್ರಚಾರದಲ್ಲಿ ಭಾಗಿ
- ಪಾಕಿಸ್ತಾನ ಹಾಗೂ ಪಾಕ್ ಬೆಂಬಲಿತ ಸಂಘಟನೆಗಳಿಂದ ಹಣ ಪಡೆದ ಆರೋಪ
- ಸಂಘಟನೆಯ ಸದಸ್ಯರು ಸಂವಿಧಾನಕ್ಕೆ ಅಗೌರವ ತೋರಿ ಪ್ರತ್ಯೇಕತಾವಾದ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು
- ಸಂಘಟನೆ ಮುಖ್ಯಸ್ಥ ಮಸರತ್ ಆಲಂ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವುದು

ಜ. 14ರಿಂದ 'ಭಾರತ್ ನ್ಯಾಯ ಯಾತ್ರೆ'

ಒಂದನೇ ಪುಟದಿಂದ...

ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಉಳಿವು, ಬೆಲೆ ಏರಿಕೆ ಮತ್ತು ನಿರುದ್ಯೋಗದಂತಹ ವಿಷಯಗಳಲ್ಲದೆ 'ನ್ಯಾಯಕ್ಕಾಗಿ ಯಾತ್ರೆ' ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ನ್ಯಾಯವನ್ನು ಖಾತರಿಪಡಿಸುವ ಉದ್ದೇಶವನ್ನೂ ಹೊಂದಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಪರ್ಕ) ಜೈರಾಮ್ ರಮೇಶ್ ವಿವರಿಸಿದರು.

'ಭಾರತ್ ಜೋಡೊ ಯಾತ್ರೆ' ವೇಳೆ ಆರ್ಥಿಕ ಅಸಮಾನತೆ, ಧ್ರುವೀಕರಣ ಮತ್ತು ಸರ್ವಾಧಿಕಾರದ ವಿಷಯಗಳನ್ನು ರಾಹುಲ್ ಪ್ರಸ್ತಾಪಿಸಿದ್ದರು ಎಂದರು.

'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಸೀಟು ಹಂಚಿಕೆ ಕುರಿತು ಮಾತುಕತೆ ಆರಂಭಿಸಿರುವ ಸಂದರ್ಭದಲ್ಲೇ ಈ ಯಾತ್ರೆ ನಡೆಯುತ್ತಿದೆ.

ಮಣಿಪುರ ಹಿಂಸಾಚಾರದ ಬಗ್ಗೆ ಪ್ರಧಾನಿಯವರು ಸುಮಾರು ಏಳು ತಿಂಗಳು ಮೌನವಾಗಿದ್ದರು. ರಾಜ್ಯವನ್ನು ಬಿಜೆಪಿ ಹಾಳುಗೆಡುವಿರುವುದರ ಬಗ್ಗೆ ಪಕ್ಷದ ಆತಂಕ ಮತ್ತು ಕಳಕಳಿಯನ್ನು ಯಾತ್ರೆ ಬಿಂಬಿಸುತ್ತದೆ. ಮಣಿಪುರವನ್ನು ಪುನರ್‌ನಿರ್ಮಿಸುವ ಪ್ರಕ್ರಿಯೆಗೆ ಯಾತ್ರೆ ಚಾಲನೆ ನೀಡುತ್ತದೆ ಎಂದು ಜೈರಾಮ್ ರಮೇಶ್ ಅವರು ಹೇಳಿದರು.

'ಭಾರತ್ ಜೋಡೊ ಯಾತ್ರೆ'ಯ ಮಾದರಿಯಲ್ಲೇ ಎರಡನೇ ಯಾತ್ರೆಯನ್ನು ರಾಹುಲ್ ಅವರು ಕೈಗೊಳ್ಳಬೇಕು ಎಂದು ಈಚೆಗೆ ನಡೆದ ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯಲ್ಲಿ ಒತ್ತಾಯ ಕೇಳಿಬಂದಿತ್ತು.

ಪಕ್ಷದ ಚುನಾವಣಾ ಸಿದ್ಧತೆಗೆ ಯಾತ್ರೆಯು ಯಾವುದೇ ವ್ಯತಿರಿಕ್ತ ಪರಿಣಾಮ ಬೀರುವುದಿಲ್ಲ. ಕಾಂಗ್ರೆಸ್‌ನ ಚುನಾವಣಾ ಸಿದ್ಧತೆ ಬಗ್ಗೆ ಚಿಂತೆ ಅಗತ್ಯವಿಲ್ಲ ಎಂದು ವೇಣುಗೋಪಾಲ್ ಅವರು ಹೇಳಿದರು.

ನಗರದ ದೇವಸ್ಥಾನಗಳಲ್ಲಿ ಸೀತಾರಾಮ ಭಜನೆ ಮಾರ್ದನಿ

ರಾಮಮಯವಾದ ಅಯೋಧ್ಯೆ

ಪ್ರಜಾವಾಣಿ ವಾರ್ತೆ/ಪಿಟಿಐ

ಅಯೋಧ್ಯೆಯ ಬೀದಿ ಬೀದಿಗಳ ಅಂಗಡಿಗಳ ರೋಲಿಂಗ್ ಶೆಟರ್‌ಗಳ ಮೇಲೆ ಬಿಡಿಸಲಾಗಿರುವ ಚಿತ್ರಗಳು –ಪಿಟಿಐ ಚಿತ್ರ

ಅಯೋಧ್ಯೆ: 'ಒಂದು ದಿನ ಬೆಳಿಗ್ಗೆ ಬಂದು ನನ್ನ ಕ್ಲಿನಿಕ್‌ನ ಬಾಗಿಲು ತೆರೆಯುವುದಕ್ಕೆ ಮುಂದಡಿ ಇಡುತ್ತಿದ್ದಂತೆಯೇ ನನಗೆ ಆಶ್ಚರ್ಯ ಕಾದಿತ್ತು. ನನ್ನ ಅಂಗಡಿಯ ರೋಲಿಂಗ್ ಶೆಟರ್‌ನಲ್ಲಿ ಹನುಮದೇವನ ಚಿತ್ರ ಬಿಡಿಸಲಾಗಿತ್ತು'. ಹೀಗೆನ್ನುತ್ತಾ ತಮ್ಮ ಹಣೆಯ ಮೇಲಿದ್ದ 'ಜೈ ಶ್ರೀರಾಮ್' ಎನ್ನುವ ಗಂಧದ ಮುದ್ರೆಯನ್ನು ತೋರಿಸಿದರು ಡಾ. ಸುನೀಲ್ ಕುಮಾರ್ ತೋಮರ್.

ರಾಮಮಂದಿರದ ಉದ್ಘಾಟನೆ ದಿನ ಸಮೀಪಿಸುತ್ತಿದ್ದಂತೆ ಇಡೀ ಅಯೋಧ್ಯೆಯು ರಾಮಮಯವಾಗಿದೆ. ಇದಕ್ಕಾಗಿ ಅಯೋಧ್ಯೆ ಅಭಿವೃದ್ಧಿ ಪ್ರಾಧಿಕಾರ, ಲೋಕೋಪಯೋಗಿ ಇಲಾಖೆ ಶ್ರಮಿಸುತ್ತಿವೆ. ದೇವಸ್ಥಾನಕ್ಕೇ ಸೇರುವ ಕೆಲವು ಮಾರ್ಗಗಳ ಹೆಸರನ್ನು ರಾಮಪಥ, ಭಕ್ತಿಪಥ, ಧರ್ಮಪಥ ಹಾಗೂ ಶ್ರೀರಾಮಜನ್ಮಭೂಮಿ ಪಥ ಎಂದು ಬದಲಿಸಲಾಗಿದೆ.

ಇಲ್ಲಿನ ಬೀದಿ ಬೀದಿಗಳಲ್ಲಿ ಇರುವ ಪ್ರತೀ ಅಂಗಡಿಗಳ ಶೆಟರ್‌ಗಳ ಮೇಲೆ 'ಜೈ ಶ್ರೀರಾಮ' ಎಂಬ ಬರವಣಿಗೆಯೊಂದಿಗೆ ರಾಮಮಂದಿರದ ಚಿತ್ರ, ಸ್ವಸ್ತಿಕ್ ಚಿಹ್ನೆ, ಶಂಖ, ಗಧೆ, ಹಾರಾಡುತ್ತಿರುವ ಕೇಸರಿ ಧ್ವಜದ ಚಿತ್ರ, ಹಾಗೂ ತಿಲಕದ ಚಿತ್ರಗಳನ್ನು ಬಿಡಿಸಲಾಗುತ್ತಿದೆ. ಪ್ರತಿ ಅಂಗಡಿಗಳ ಹೆಸರಿನ ಬೋರ್ಡ್‌ಗಳು ಒಂದೇ ವಿನ್ಯಾಸದಲ್ಲಿ ಇರುವಂತೆ ನೋಡಿಕೊಳ್ಳಲಾಗಿದ್ದು, ಇದರಲ್ಲಿ ಅಂಗಡಿಯ ಹೆಸರಿನೊಂದಿಗೆ ಅಯೋಧ್ಯೆ ಅಭಿವೃದ್ಧಿ ಪ್ರಾಧಿಕಾರದ ಲೋಗೊ ಇರುವಂತೆಯೂ ಮಾಡಲಾಗಿದೆ.

ಮುಖ್ಯಾಂಶಗಳು

- ಕಾರ್ಯಕ್ರಮಕ್ಕೆ ಹೋಗಲ್ಲ ಎಂದ ಮಮತಾ ಬ್ಯಾನರ್ಜಿ
- ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್‌ಗೆ ಆಹ್ವಾನ ಇಲ್ಲ
- ಅಯೋಧ್ಯೆ ರೈಲು ನಿಲ್ದಾಣವನ್ನು ಅಯೋಧ್ಯೆ ಧಾಮ್ ಎಂದು ಮರುನಾಮಕರಣ

> **ರಾಮದೇವರ ಮಂದಿರದ ಕಾಮಗಾರಿಯ ಭಾಗವಾಗಿರುವುದು ನಮಗೆ ಹೆಮ್ಮೆ. ಭಾರಿ ಗಾತ್ರದ ವಸ್ತುಗಳನ್ನು ಎತ್ತಿ ದಣಿದರೆ, ನಾವೆಲ್ಲರೂ 'ಜೈ ಶ್ರೀರಾಮ್' 'ಜೈ ಹನುಮಾನ್' ಎಂದು ಜಪಿಸುತ್ತೇವೆ**
> **ಸೋನು ಶರ್ಮಾ,** ಕಾರ್ಮಿಕ

ಮುಸ್ಲಿಂ ದರ್ಜಿ ಸಿದ್ಧಪಡಿಸಿದ ಹನುಮಧ್ವಜ

ಮಂದಿರದಿಂದ 100 ಅಡಿ ಎತ್ತರದ ಕಂಬದ ಮೇಲೆ ಹಾರಿಸುವ ಹನುಮದೇವರ ಧ್ವಜವನ್ನು ಸಿದ್ಧಪಡಿಸಿದ್ದು 55 ವರ್ಷದ ಗುಲಾಮ್ ಜಿಲಾನಿ ಎಂಬ ಮುಸ್ಲಿಂ ದರ್ಜಿ. 'ನಾನು ಸಿದ್ಧಪಡಿಸಿದ ಧ್ವಜವು, 100 ಕೋಟಿ ಜನರ ಕನಸಾಗಿರುವ ರಾಮಮಂದಿರದಲ್ಲಿ ಹಾರಾಡಲಿದೆ ಎನ್ನುವುದೇ ನನಗೆ ಹೆಮ್ಮೆ. ಅವಕಾಶ ಸಿಕ್ಕರೆ ಖಂಡಿತ ಅಯೋಧ್ಯೆಗೆ ಹೋಗಿ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತೇನೆ' ಎಂದರು ಜಿಲಾನಿ. 'ಧ್ವಜವು 40 ಅಡಿ ಅಗಲ ಇರಲಿದೆ. ಧ್ವಜದ ಒಂದು ಬದಿಯಲ್ಲಿ ಹನುಮದೇವರ ಚಿತ್ರ ಇರಲಿದೆ. ರಾಮ ಹಾಗೂ ಲಕ್ಷ್ಮಣನನ್ನು ತನ್ನ ಬಾಹುಗಳಲ್ಲಿ ಹೊತ್ತ ಹನುಮನ ಚಿತ್ರವು ಇನ್ನೊಂದು ಬದಿಯಲ್ಲಿ ಇರಲಿದೆ' ಎಂದು ವೀರ ವಸ್ತ್ರಾಲಯ ಮಳಿಗೆಯ ದೇವೇಂದ್ರ ಜೈನ್ ಮಾಹಿತಿ ನೀಡಿದರು. ಜಿಲಾನಿ ಅವರು ಇದೇ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

'ಫಲಕ: ಕನ್ನಡದಲ್ಲಿ ಯಾಕಿಲ್ಲ?'

'ಭಕ್ತರಿಗಾಗಿ ಸೂಚನಾ ಫಲಕಗಳನ್ನು ಅಳವಡಿಸಲಾಗುವುದು. ದೇಶದ ಬೇರೆ ಬೇರೆ ಭಾಷೆಗಳಲ್ಲಿ ಫಲಕಗಳು ಇರಲಿವೆ. ದಕ್ಷಿಣ ಭಾಗದಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರಲಿದ್ದಾರೆ. ಆದ್ದರಿಂದ, ಆ ಭಾಗದಲ್ಲಿ ಹೆಚ್ಚಿನ ಜನರು ಮಾತನಾಡುವ ತೆಲುಗು ಹಾಗೂ ತಮಿಳು ಭಾಷೆಗಳಲ್ಲೂ ಫಲಕಗಳು ಇರಲಿವೆ' ಎಂದು ಎಡಿಜಿಪಿ ಪೀಯೂಷ್ ಮೋರ್ಡಿಯಾ ಅವರು ತಿಳಿಸಿದ್ದಾರೆ. ಕನ್ನಡದಲ್ಲಿ ಫಲಕ ಇಲ್ಲದಕ್ಕೆ ಕರ್ನಾಟಕದ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಡಿ.22ರಂದು ಈ ಬಗ್ಗೆ ಉದ್ಯಮಿ ಮೋಹನ್‌ದಾಸ್ ಪೈ ಅವರು ತಮ್ಮ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿದ್ದರು. 'ಫಲಕಗಳು ಕನ್ನಡ ಹಾಗೂ ಮಲೆಯಾಳದಲ್ಲಿಯೂ ಇರಬೇಕು' ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ್, ಪ್ರಧಾನಿ ಮೋದಿ, ಸಂಸದೀಯ ವ್ಯವಹಾರ ಗಳ ಸಚಿವ ಪ್ರಲ್ಹಾದ್ ಜೋಷಿ, ಸಂಸದರಾದ ತೇಜಸ್ವಿ ಸೂರ್ಯ ಹಾಗೂ ಪಿ.ಸಿ. ಮೋಹನ್ ಅವರನ್ನು ಟ್ಯಾಗ್ ಮಾಡಿ ಟ್ವೀಟ್ ಮಾಡಿದ್ದರು.

ದಕ್ಷಿಣ ಆಫ್ರಿಕಾ ತಂಡಕ್ಕೆ ಮೊದಲ ಇನಿಂಗ್ಸ್ ಮುನ್ನಡೆ ● ಬೂಮ್ರಾ, ಸಿರಾಜ್‌ಗೆ ತಲಾ 2 ವಿಕೆಟ್

ರಾಹುಲ್ ಶತಕ: ಎಲ್ಗರ್ ತಿರುಗೇಟು

ಡೀನ್ ಎಲ್ಗರ್

ರನ್	140*
ಎಸೆತ	211
ಬೌಂಡರಿ	23
ಸಿಕ್ಸರ್	0
ಸ್ಟ್ರೈಕ್‌ರೇಟ್	66.35

ಡೀನ್ ಎಲ್ಗರ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಸೆಂಚುರಿಯನ್ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ಮತ್ತು ತಮ್ಮ ವೃತ್ತಿಜೀವನದ ಕೊನೆಯ ಟೆಸ್ಟ್ ಸರಣಿ ಆಡುತ್ತಿರುವ ದಕ್ಷಿಣ ಆಫ್ರಿಕಾದ ಡೀನ್ ಎಲ್ಗರ್ ಅವರ ಶತಕಗಳ ಭರಾಟೆಗೆ ಸೂಪರ್ ಸ್ಪೋರ್ಟ್ಸ್ ಪಾರ್ಕ್ ವೇದಿಕೆಯಾಯಿತು.

ಇಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದ ಎರಡನೇ ದಿನವಾದ ಬುಧವಾರ ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ ರಾಹುಲ್ (101; 137ಎ, 4X14, 6X4)ಶತಕದ ನೆರವಿನಿಂದ 245 ರನ್ ಗಳಿಸಿತು. ಅದಕ್ಕುತ್ತರವಾಗಿ ಆತಿಥೇಯ ದಕ್ಷಿಣ ಆಫ್ರಿಕಾ ತಂಡವು ದಿನದಾಟದ ಕೊನೆಗೆ 66 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 256 ರನ್ ಗಳಿಸಿತು. ಮಂದಬೆಳಕಿನ ಕಾರಣ ದಿನದಾಟ ಮೊಟಕುಗೊಂಡಾಗ ತಂಡವು 11 ರನ್‌ಗಳ ಮುನ್ನಡೆ ಗಳಿಸಿತ್ತು.

ಶತಕ ಬಾರಿಸಿರುವ ಡೀನ್ ಎಲ್ಗರ್ (ಔಟಾಗದೆ 140; 211ಎ) ಮತ್ತು ಮಾರ್ಕೊ ಯಾನ್ಸೆನ್ (ಬ್ಯಾಟಿಂಗ್ 3) ಕ್ರೀಸ್‌ನಲ್ಲಿದ್ದಾರೆ.

ರಾಹುಲ್ ಶತಕ ಸೊಬಗು: ಪಂದ್ಯದ ಮೊದಲ ದಿನದಾಟದಲ್ಲಿ ಭಾರತ ತಂಡವು 8 ವಿಕೆಟ್‌ಗಳಿಗೆ 208 ರನ್ ಗಳಿಸಿತ್ತು. ಅಗ್ರಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದ್ದ ಸಂದರ್ಭದಲ್ಲಿ ರಾಹುಲ್ ಏಕಾಂಗಿ ಹೋರಾಟ ಮಾಡಿ ತಂಡವು ಅಲ್ಪಮೊತ್ತಕ್ಕೆ ಕುಸಿಯದಂತೆ ನೋಡಿಕೊಂಡಿದ್ದರು. ಆರನೇ ಕ್ರಮಾಂಕದಲ್ಲಿ ಬಂದಿದ್ದ ಅವರು 70 ರನ್ ಗಳಿಸಿ ಕ್ರೀಸ್‌ನಲ್ಲಿದ್ದರು. ಎರಡನೇ ದಿನ ಬೆಳಿಗ್ಗೆ ತುಸು ವೇಗವಾಗಿ ರನ್ ಗಳಿಸಿದರು. ಅವರು ಮೊಹಮ್ಮದ್ ಸಿರಾಜ್ (5; 22ಎ) ಅವರೊಂದಿಗೆ ಒಂಬತ್ತನೇ ವಿಕೆಟ್ ಪಾಲುದಾರಿಕೆಯಲ್ಲಿ 30 ರನ್ ಸೇರಿಸಿದರು.

ಪದಾರ್ಪಣೆ ಪಂದ್ಯವಾಡುತ್ತಿರುವ ಕನ್ನಡಿಗ ಪ್ರಸಿದ್ಧ ಕೃಷ್ಣ ರನ್ ಖಾತೆ ತೆರೆಯಲಿಲ್ಲ. ಆದರೆ ಎಂಟು ಎಸೆತ ಎದುರಿಸಿ ರಾಹುಲ್‌ಗೆ ಉತ್ತಮ ಜೊತೆ ನೀಡಿದರು. ರಾಹುಲ್ 133 ಎಸೆತಗಳಲ್ಲಿ ಶತಕದ ಗಡಿ ದಾಟಿದರು. ಸೆಂಚುರಿಯನ್‌ನಲ್ಲಿ ಅವರು ಎರಡನೇ ಬಾರಿ ನೂರರ ಗಡಿ ದಾಟಿ ದಾಖಲೆ ಬರೆದರು. ಒಟ್ಟಾರೆ ಟೆಸ್ಟ್ ಕ್ರಿಕೆಟ್‌ನಲ್ಲಿ ಇದು ಅವರಿಗೆ ಎಂಟನೇ ಶತಕವಾಗಿದೆ. ಬ್ಯಾಟರ್‌ಸ್ನೇಹಿ ಅಲ್ಲದ ಪಿಚ್‌ನಲ್ಲಿ ಅವರು ಈ ಸಾಧನೆ ಮಾಡಿದರು.

ಎಲ್ಗರ್ ಅಬ್ಬರ: ತಮ್ಮ ವೃತ್ತಿಜೀವನದ 85ನೇ ಟೆಸ್ಟ್ ಪಂದ್ಯ ಆಡುತ್ತಿರುವ ಎಡಗೈ ಬ್ಯಾಟರ್ ಡೀನ್ ಎಲ್ಗರ್ 14ನೇ ಶತಕ ದಾಖಲಿಸಿದರು.

ಪದಾರ್ಪಣೆ ಪಂದ್ಯ ಆಡುತ್ತಿರುವ ಡೇವಿಡ್ ಬೆಡಿಂಗ್‌ಹ್ಯಾಮ್ (56; 87ಎ) ಅವರೊಂದಿಗೆ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 131 ರನ್ ಸೇರಿಸಿ ತಂಡವು ಮುನ್ನಡೆ ಸಾಧಿಸಲು ಕಾರಣರಾದರು.

ಬೆಡಿಂಗ್‌ಹ್ಯಾಮ್ ವಿಕೆಟ್ ಗಳಿಸಿದ ಮೊಹಮ್ಮದ್ ಸಿರಾಜ್ ಜೊತೆಯಾಟವನ್ನು ಮುರಿದರು. ಮೊಹಮ್ಮದ್ ಶಮಿ ಅನುಪಸ್ಥಿತಿಯಲ್ಲಿ ಶಾರ್ದೂಲ್ ಠಾಕೂರ್ (12 ಓವರ್‌ಗಳಲ್ಲಿ 57 ರನ್) ಅಷ್ಟೇನೂ ಪರಿಣಾಮಕಾರಿಯಾಗಲಿಲ್ಲ. ಅನುಭವಿ ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ತಲಾ ಎರಡು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: **ಭಾರತ:** 67.4 ಓವರ್‌ಗಳಲ್ಲಿ 245 (ಕೆ.ಎಲ್. ರಾಹುಲ್ 101, ಮೊಹಮ್ಮದ್ ಸಿರಾಜ್ 5, ಕಗಿಸೊ ರಬಾಡ 59ಕ್ಕೆ5, ನಾಂದ್ರೆ ಬರ್ಗರ್ 50ಕ್ಕೆ3) **ದಕ್ಷಿಣ ಆಫ್ರಿಕಾ:** 66 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 256 (ಡೀನ್ ಎಲ್ಗರ್ ಬ್ಯಾಟಿಂಗ್ 140, ಟೋನಿ ಡಿ ಝೋರ್ಜಿ 28, ಡೇವಿಡ್ ಬೆಡಿಂಗಾಮ್ 56, ಜಸ್‌ಪ್ರೀತ್ ಬೂಮ್ರಾ 48ಕ್ಕೆ2, ಮೊಹಮ್ಮದ್ ಸಿರಾಜ್ 63ಕ್ಕೆ2, ಪ್ರಸಿದ್ಧ ಕೃಷ್ಣ 61ಕ್ಕೆ1)

ಶತಕ ಗಳಿಸಿದ ಸಂಭ್ರಮದಲ್ಲಿ ಭಾರತದ ಕೆ.ಎಲ್. ರಾಹುಲ್ –ಎಎಫ್‌ಪಿ ಚಿತ್ರ

ಕೆ.ಎಲ್. ರಾಹುಲ್

ರನ್	101
ಎಸೆತ	137
ಬೌಂಡರಿ	14
ಸಿಕ್ಸರ್	4
ಸ್ಟ್ರೈಕ್‌ರೇಟ್	73.72

ವಿಕೆಟ್ ಖಾತೆ ತೆರೆದ ಪ್ರಸಿದ್ಧ ಕೃಷ್ಣ

ಚೊಚ್ಚಲ ಟೆಸ್ಟ್ ಪಂದ್ಯ ಆಡುತ್ತಿರುವ ಪ್ರಸಿದ್ಧ ಕೃಷ್ಣ ತಮ್ಮ ವಿಕೆಟ್ ಖಾತೆ ತೆರೆದರು.

ಕರ್ನಾಟಕದ ವೇಗಿ ಪ್ರಸಿದ್ಧ ಇನಿಂಗ್ಸ್‌ನ 62ನೇ ಓವರ್‌ನಲ್ಲಿ ಕೈಲ್ ವೆರಿಯನ್ (4 ರನ್) ವಿಕೆಟ್ ಗಳಿಸಿದರು.

ಪ್ರಸಿದ್ಧ ಎಸೆತವನ್ನು ಆಡುವ ಯತ್ನದಲ್ಲಿ ಕೈಲ್ ಅವರು, ವಿಕೆಟ್‌ಕೀಪರ್ ಕೆ.ಎಲ್. ರಾಹುಲ್‌ಗೆ ಕ್ಯಾಚಿತ್ತರು.

ನಾಲ್ಕನೇ ಬೌಲರ್ ಆಗಿ ಪ್ರಸಿದ್ಧ (15-1-61-1) ಕಣಕ್ಕಿಳಿದರು.

ಗೌತಮ್‌ಗೆ ಸ್ಥಾನವಿಲ್ಲ: ನಿಶ್ಚಲ್ ಮರುಪ್ರವೇಶ

ಕರ್ನಾಟಕ ರಣಜಿ ತಂಡಕ್ಕೆ ಮಯಂಕ್ ಅಗರವಾಲ್ ಸಾರಥ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ರಣಜಿ ಟ್ರೋಫಿ ಕ್ರಿಕೆಟ್ ಋತುವಿನಲ್ಲಿ ಕಣಕ್ಕಿಳಿಯಲಿರುವ ಕರ್ನಾಟಕ ತಂಡದ ಸ್ಪಿನ್ ವಿಭಾಗದಲ್ಲಿ ಹೊಸ ಮುಖಗಳಿಗೆ ಅವಕಾಶ ಲಭಿಸಿದೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಆಯ್ಕೆ ಸಮಿತಿಯು ಬುಧವಾರ ಪ್ರಕಟಿಸಿರುವ ತಂಡದಲ್ಲಿ ಅನುಭವಿ ಆಫ್‌ಸ್ಪಿನ್ನರ್ ಕೃಷ್ಣಪ್ಪ ಗೌತಮ್ ಅವರನ್ನು ಕೈಬಿಡಲಾಗಿದೆ. ಮಯಂಕ್ ಅಗರವಾಲ್ ನಾಯಕತ್ವ ಮುಂದುವರಿದಿದೆ. ಯುವ ಆಟಗಾರ ನಿಕಿನ್ ಜೋಸ್ ಅವರು ಉಪನಾಯಕರಾಗಿದ್ದಾರೆ.

ಲೆಗ್‌ಸ್ಪಿನ್ನರ್ ಶ್ರೇಯಸ್ ಗೋಪಾಲ್ ಅವರು ಈ ಋತುವಿನಿಂದ ಕೇರಳಕ್ಕೆ ವಲಸೆ ಹೋಗಿದ್ದಾರೆ. ಇದೀಗ ಗೌತಮ್ ಅವರು ಸ್ಥಾನ ಕಳೆದುಕೊಂಡಿದ್ದಾರೆ. ಇದರಿಂದಾಗಿ ಎಡಗೈ ಸ್ಪಿನ್ನರ್ ಶುಭಾಂಗ್ ಹೆಗಡೆ, ಆಫ್‌ಸ್ಪಿನ್ನರ್ ಕೆ. ಶಶಿಕುಮಾರ್ ಮತ್ತು ಎಡಗೈ ಸ್ಪಿನ್ನರ್ ಎ.ಸಿ. ರೋಹಿತ್ ಕುಮಾರ್ ಸ್ಥಾನ ಪಡೆದುಕೊಂಡಿದ್ದಾರೆ.

ಗೌತಮ್ 59 ಪ್ರಥಮ ದರ್ಜೆ ಪಂದ್ಯಗಳಲ್ಲಿ 224 ವಿಕೆಟ್ ಗಳಿಸಿದ್ದಾರೆ. ಅದರಲ್ಲಿ 14 ಐದು ವಿಕೆಟ್ ಗೊಂಚಲು ಗಳಿವೆ. ಎರಡು ಬಾರಿ ಹತ್ತು ವಿಕೆಟ್ (ಎರಡೂ ಇನಿಂಗ್ಸ್ ಸೇರಿ) ಗಳಿಸಿದ್ದಾರೆ.

ಕೆ. ಗೌತಮ್, ಮಯಂಕ್ ಅಗರವಾಲ್

35 ವರ್ಷದ ಗೌತಮ್ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಆಡಿದ್ದರು. ಇದೀಗ ಅವರಿಗೆ ಕೆಂಪು ಚೆಂಡಿನ ಕ್ರಿಕೆಟ್ ಮಾದರಿಯ ತಂಡದ ಬಾಗಿಲು ಮುಚ್ಚಿದಂತಾಗಿದೆ.

‘ಭಜ್ಜಿ (ಗೌತಮ್) ಅವರು ಕರ್ನಾಟಕ ಕ್ರಿಕೆಟ್‌ಗೆ ನೀಡಿರುವ ಅಮೋಘ ಸೇವೆಗೆ ಧನ್ಯವಾದಗಳು. ಆದರೆ ಯಾರೂ ಅನಿವಾರ್ಯವಲ್ಲ. ತಂಡದಲ್ಲಿ ಉತ್ತಮ ಬದಲಾವಣೆಯ ಪರ್ವವನ್ನು ನಿರಂತರವಾಗಿಡುವುದು ನಮ್ಮ ಉದ್ದೇಶ ’ ಎಂದು ಆಯ್ಕೆ ಸಮಿತಿ ಮುಖ್ಯಸ್ಥ ಜೆ. ಅಭಿರಾಮ್ ತಿಳಿಸಿದ್ದಾರೆ.

ನಾಯಕ ಮಯಂಕ್ ಬಿಟ್ಟರೆ ತಂಡದಲ್ಲಿ ಈಗ ಆರ್. ಸಮರ್ಥ್ ಮತ್ತು ಮನೀಷ್ ಪಾಂಡೆ ಅವರಿಬ್ಬರೇ ಹೆಚ್ಚು ಅನುಭವಿ ಆಟಗಾರರಾಗಿದ್ದಾರೆ.

ರಣಜಿ ಟೂರ್ನಿಯು ಜನವರಿ 5ರಿಂದ ಆರಂಭವಾಗಲಿದೆ.

ಕರ್ನಾಟಕ ತಂಡ: ಮಯಂಕ್ ಅಗರವಾಲ್ (ನಾಯಕ), ಆರ್. ಸಮರ್ಥ್, ದೇವದತ್ತ ಪಡಿಕ್ಕಲ್, ನಿಕಿನ್ ಜೋಸ್ ಎಸ್.ಜೆ (ಉಪನಾಯಕ), ಮನೀಷ್ ಪಾಂಡೆ, ಶುಭಾಂಗ್ ಹೆಗಡೆ, ಶರತ್ ಶ್ರೀನಿವಾಸ್ (ವಿಕೆಟ್‌ಕೀಪರ್), ವೈಶಾಖ ವಿಜಯಕುಮಾರ್, ವಿ. ಕೌಶಿಕ್, ವಿದ್ವತ್ ಕಾವೇರಪ್ಪ, ಕೆ. ಶಶಿಕುಮಾರ್, ಸುಜಯ್ ಸತೇರಿ (ವಿಕೆಟ್‌ಕೀಪರ್), ಡಿ. ನಿಶ್ಚಲ್, ಎಂ. ವೆಂಕಟೇಶ್, ಕಿಶನ್ ಎಸ್ ಬೆದರೆ, ಎ.ಸಿ. ರೋಹಿತ್ ಕುಮಾರ್.

ಕೋಚ್: ಪಿ.ವಿ. ಶಶಿಕಾಂತ್, ಬೌಲಿಂಗ್ ಕೋಚ್: ಮನ್ಸೂರ್ ಅಲಿ ಖಾನ್, ಫೀಲ್ಡಿಂಗ್ ಕೋಚ್: ಶಬರೀಶ್ ಪಿ ಮೋಹನ್, ಮ್ಯಾನೇಜರ್: ಆರ್. ರಮೇಶ್ ರಾವ್, ಫಿಸಿಯೊ: ಎ. ಜಾಬಪ್ರಭು, ಸ್ಟ್ರೆಂಥ್–ಕಂಡಿಷನಿಂಗ್ ಕೋಚ್: ಎ. ಕಿರಣ್. ಮಸಾಜ್ ಪರಿಣತ: ಸಿ.ಎಂ. ಸೋಮಸುಂದರ್, ವಿಡಿಯೊ ಅನಾಲಿಸ್ಟ್: ಗಿರಿಧರ್.

ಸಂಕ್ಷಿಪ್ತ ಸುದ್ದಿ

ಮಹಿಳಾ ಕ್ರಿಕೆಟ್: ಭಾರತ–ಆಸ್ಟ್ರೇಲಿಯಾ ಸೆಣಸು ಇಂದು

ಮುಂಬೈ (ಪಿಟಿಐ): ಬೆನ್ನುಬೆನ್ನಿಗೆ ಎರಡು ಟೆಸ್ಟ್ ಪಂದ್ಯಗಳನ್ನು ಗೆದ್ದ ಹುರುಪಿನಲ್ಲಿರುವ ಭಾರತ ಮಹಿಳಾ ತಂಡ, ಆಸ್ಟ್ರೇಲಿಯಾ ವಿರುದ್ಧ ಮೂರು ಪಂದ್ಯಗಳ ಏಕದಿನ ಸರಣಿಯ ಮೊದಲನೇ ಪಂದ್ಯವನ್ನು ಗುರುವಾರ ಇಲ್ಲಿ ಆಡಲಿದೆ.

ಸೀಮಿತ ಓವರುಗಳ ಮಾದರಿಯಲ್ಲಿ ಆಸ್ಟ್ರೇಲಿಯ ತಂಡದ ಎದುರಿನ ಕಳಪೆ ಸಾಧನೆಯನ್ನು ಸುಧಾರಿಸುವ ಗುರಿಯನ್ನು ಹೊಂದಿದೆ. ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಟೆಸ್ಟ್‌ನಲ್ಲಿ ಇಂಗ್ಲೆಂಡ್ ತಂಡವನ್ನು ದಾಖಲೆಯ 347 ರನ್‌ಗಳಿಂದ ಸದೆಬಡಿದ ಭಾರತ, ಕಳೆದ ವಾರ ಆಸ್ಟ್ರೇಲಿಯಾ ವಿರುದ್ಧವೂ ಎಂಟು ವಿಕೆಟ್‌ಗಳ ಭಾರಿ ಜಯ ಸಾಧಿಸಿತ್ತು. ಏಕದಿನ ಪಂದ್ಯಗಳೂ ಇದೇ ಮೈದಾನದಲ್ಲಿ ನಡೆಯಲಿವೆ.

ಪಂದ್ಯ ಆರಂಭ: ಮಧ್ಯಾಹ್ನ 1.30

ರಾಜ್ಯ ತಂಡಕ್ಕೆ ವೇದಾ ನಾಯಕಿ

ಬೆಂಗಳೂರು: ಅನುಭವಿ ವೇದಾ ಕೃಷ್ಣಮೂರ್ತಿ ಜ. 4ರಿಂದ 16ರವರೆಗೆ ನಡೆಯುವ ಬಿಸಿಸಿಐ ಮಹಿಳೆಯರ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ. ಟೂರ್ನಿಗೆ 15 ಆಟಗಾರ್ತಿಯರ ತಂಡವನ್ನು ರಾಜ್ಯ ಕ್ರಿಕೆಟ್ ಸಂಸ್ಥೆ ಬುಧವಾರ ಪ್ರಕಟಿಸಿದೆ.

ತಂಡ ಹೀಗಿದೆ: ವೇದಾ ಕೃಷ್ಣಮೂರ್ತಿ (ನಾಯಕಿ), ದಿವ್ಯಾ ಜ್ಞಾನಾನಂದ, ಸಿ. ಪ್ರತ್ಯೂಷಾ, ವೃಂದಾ ದಿನೇಶ್, ಸಹನಾ ಎಸ್. ಪವಾರ್, ವಿ. ಚಂದು, ನಿಕಿ ಪ್ರಸಾದ್, ಪುಷ್ಪಾ ಕಿರೇಸೂರು, ಶಿಶಿರಾ ಎ. ಗೌಡ, ಜಿ.ಆರ್. ಪ್ರೇರಣಾ, ಸಂಜನಾ ಎಚ್. ಬಟ್ನಿ (ವಿಕೆಟ್ ಕೀಪರ್), ರೋಶಿನಿ ಕಿರಣ್, ರಾಮೇಶ್ವರಿ ಗಾಯಕವಾಡ, ಪಿ. ರೋಹಿತಾ ಚೌಧರಿ, ಮಿಥಿಲಾ ವಿನೋದ್.

ಹಸನ್ ಆಟಕ್ಕೆ ಮಣಿದ ಕಿವೀಸ್

ನೇಪಿಯರ್ (ಎಎಫ್‌ಪಿ): ಮೆಹದಿ ಹಸನ್ ಆಲ್‌ರೌಂಡ್ ಆಟದ ಬಲದಿಂದ ಬಾಂಗ್ಲಾದೇಶ ತಂಡವು ಬುಧವಾರ ಇಲ್ಲಿ ನಡೆದ ಮೊದಲ ಟಿ20 ಪಂದ್ಯದಲ್ಲಿ ಆತಿಥೇಯ ನ್ಯೂಜಿಲೆಂಡ್ ಎದುರು ಜಯಿಸಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿತು.

ಮೆಕ್‌ಲಾರೆನ್ ಪಾರ್ಕ್‌ನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಬಾಂಗ್ಲಾದೇಶ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೆಹದಿ ಹಸನ್ (14ಕ್ಕೆ2) ಮತ್ತು ಶೊರಿಫುಲ್ ಇಸ್ಲಾಂ (26ಕ್ಕೆ3) ಅವರ ಉತ್ತಮ ಬೌಲಿಂಗ್ ಮುಂದೆ ಕಿವೀಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 134 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಗುರಿ ಬೆನ್ನಟ್ಟಿದ ಬಾಂಗ್ಲಾದೇಶ ತಂಡವು 18.4 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 137 ರನ್ ಗಳಿಸಿ ಜಯಿಸಿತು.

2ನೇ ಟೆಸ್ಟ್: ಆಸ್ಟ್ರೇಲಿಯಾ ಮೇಲುಗೈ

ಮೆಲ್ಬರ್ನ್ (ಎಎಫ್‌ಪಿ): ವೇಗದ ಬೌಲರ್ ಪ್ಯಾಟ್ ಕಮಿನ್ಸ್ (37ಕ್ಕೆ3) ಮತ್ತು ಆಫ್ ಸ್ಪಿನ್ನರ್ ನಥಾನ್ ಲಯನ್ (48ಕ್ಕೆ2) ಅವರು 2ನೇ ಟೆಸ್ಟ್‌ನ 2ನೇ ದಿನವಾದ ಬುಧವಾರ ಆಸ್ಟ್ರೇಲಿಯಾಕ್ಕೆ ಮೇಲುಗೈ ದೊರಕಿಸಿಕೊಟ್ಟರು. ಆತಿಥೇಯ ತಂಡ 318 ರನ್‌ಗಳಿಗೆ ಉತ್ತರವಾಗಿ ದಿನದಾಟ ಮುಗಿದಾಗ ಪಾಕಿಸ್ತಾನ 6 ವಿಕೆಟ್‌ಗೆ 194 ರನ್ ಗಳಿಸಿ ಸಂಕಷ್ಟದಲ್ಲಿದೆ.

ಪ್ರವಾಸಿ ತಂಡ, ಆಸ್ಟ್ರೇಲಿಯಾದ ಮೊತ್ತಕ್ಕಿಂತ ಇನ್ನೂ 124 ರನ್‌ಗಳಿಂದ ಹಿಂದೆಯಿದೆ. ನಾಯಕ ಕಮಿನ್ಸ್ ಪಾಕಿಸ್ತಾನದ ಪ್ರಮುಖ ಆಟಗಾರರಾದ ಅಬ್ದುಲ್ಲಾ ಶಫೀಕ್ (62), ಬಾಬರ್ ಆಜಂ (1) ಮತ್ತು ಅಘಾ ಸಲ್ಮಾನ್ (5) ಅವರ ವಿಕೆಟ್‌ಗಳನ್ನು ಪಡೆದರು. ಲಯನ್ ಎರಡು ವಿಕೆಟ್ ಪಡೆದರು.

ಕುಸ್ತಿ ಫೆಡರೇಷನ್: ಅಡ್‌ಹಾಕ್ ಸಮಿತಿ ನೇಮಕ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ ಆಡಳಿತವನ್ನು ನೋಡಿಕೊಳ್ಳಲು ಮೂವರು ಸದಸ್ಯರ ಅಡ್‌ಹಾಕ್ ಸಮಿತಿಯನ್ನು ಭಾರತ ಒಲಿಂಪಿಕ್ ಸಂಸ್ಥೆ ನೇಮಕ ಮಾಡಿದೆ.

ಭಾರತ ವುಷು ಸಂಸ್ಥೆ ಅಧ್ಯಕ್ಷ ಭೂಪಿಂದರ್ ಸಿಂಗ್ ಬಜ್ವಾ ಈ ಸಮಿತಿಯ ಮುಖ್ಯಸ್ಥರಾಗಿದ್ದಾರೆ. ಒಲಿಂಪಿಯನ್ ಹಾಕಿ ಆಟಗಾರ ಎಂ.ಎಂ. ಸೋಮಯ್ಯ ಮತ್ತು ಅಂತರರಾಷ್ಟ್ರೀಯ ಮಾಜಿ ಬ್ಯಾಡ್ಮಿಂಟನ್ ಪಟು ಮಂಜುಷಾ ಕನ್ವರ್ ಸಮಿತಿಯಲ್ಲಿದ್ದಾರೆ ಎಂದು ಬುಧವಾರ ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಪ್ರಕಟಿಸಿದೆ.

ಹೋದ ವಾರ ಕುಸ್ತಿ ಫೆಡರೇಷನ್‌ಗೆ (ಡಬ್ಲ್ಯುಎಫ್‌ಐ) ನಡೆದಿದ್ದ ಚುನಾವಣೆಯಲ್ಲಿ ಸಂಜಯ್ ಕುಮಾರ್ ಸಿಂಗ್ ಅವರು ಅಧ್ಯಕ್ಷರಾಗಿ ಚುನಾಯಿತರಾಗಿದ್ದರು. ಅವರು ಅಧಿಕಾರಕ್ಕೆ ಬಂದ ಒಂದೇ ದಿನದಲ್ಲಿ ರಾಷ್ಟ್ರೀಯ ಜೂನಿಯರ್ ಕುಸ್ತಿ ಚಾಂಪಿಯನ್‌ಷಿಪ್ ದಿನಾಂಕ ತರಾತುರಿಯಲ್ಲಿ ಘೋಷಿಸಿದ್ದರು.

ಈ ಕ್ರಮವು ಕಾನೂನುಬಾಹಿರ ಎಂದು ಹೇಳಿದ್ದ ಕ್ರೀಡಾ ಸಚಿವಾಲಯ, ಸಮಿತಿಯನ್ನು ಅಮಾನತು ಮಾಡಿತ್ತು. ಅದರಿಂದಾಗಿ ಡಬ್ಲ್ಯುಎಫ್‌ಐ ಆಡಳಿತ ನಿರ್ವಹಿಸಲು ಅಡ್‌ಹಾಕ್ (ಹಂಗಾಮಿ) ಸಮಿತಿಯನ್ನು ನೇಮಕ ಮಾಡಿದೆ.

‘ಇದು ಒಲಿಂಪಿಕ್ ವರ್ಷ. ಆದ್ದರಿಂದ ಪೂರ್ವಸಿದ್ಧತೆಗಳು ಭರದಿಂದ ನಡೆಯಬೇಕು. ಸೀನಿಯರ್ ಮತ್ತು ಜೂನಿಯರ್ ಚಾಂಪಿಯನ್‌ಷಿಪ್‌ಗಳನ್ನು ಆಯೋಜಿಸುತ್ತೇವೆ. ರಾಷ್ಟ್ರೀಯ ಶಿಬಿರಗಳನ್ನು ನಡೆಸಲು ಹಾಗೂ ನಮ್ಮ ತಂಡವು ಹೆಚ್ಚು ಪದಕಗಳನ್ನು ಜಯಿಸುವಂತೆ ಸಿದ್ಧಗೊಳಿಸಲು ಸಮಿತಿಯು ನಿಗಾವಹಿಸಲಿದೆ’ ಎಂದು ಭೂಪಿಂದರ್ ಬಜ್ವಾ ತಿಳಿಸಿದ್ದಾರೆ.

‘ಕುಸ್ತಿ ನಮ್ಮ ದೇಶದಲ್ಲಿ ಅತ್ಯಂತ ಜನಪ್ರಿಯ ಕ್ರೀಡೆಯಾಗಿದೆ. ಒಲಿಂಪಿಕ್ ಕೂಟದಲ್ಲಿ ದೇಶಕ್ಕೆ ಹೆಚ್ಚು ಪದಕಗಳನ್ನು ತಂದುಕೊಟ್ಟ ಕ್ರೀಡೆಯೂ ಹೌದು. ಉಜ್ವಲ ಭವಿಷ್ಯವೂ ಇದೆ. ಅದನ್ನು ಕೈತಪ್ಪದಂತೆ ನೋಡಿಕೊಳ್ಳುವುದು ನಮ್ಮ ಉದ್ದೇಶ‘ ಎಂದೂ ಹೇಳಿದ್ದಾರೆ.

ಚುನಾವಣೆಗೂ ಮುನ್ನ ಇದ್ದ ಅಡ್‌ಹಾಕ್ ಸಮಿತಿಗೂ ಬಜ್ವಾ ಮುಖ್ಯಸ್ಥರಾಗಿದ್ದರು. ಹೋದ ಏಪ್ರಿಲ್‌ನಲ್ಲಿ ಆ ಸಮಿತಿಯು ನೇಮಕವಾಗಿತ್ತು.

ಡಿಸೆಂಬರ್ 21ರಂದು ನಡೆದ ಚುನಾವಣೆಯಲ್ಲಿ ಗೆದ್ದ ಸಂಜಯ್ ಅವರು, ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆನ್ನಲಾದ ಆರೋಪಿ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ಆಪ್ತರಾಗಿದ್ದರು. ಆದ್ದರಿಂದ ಖ್ಯಾತನಾಮ ಕುಸ್ತಿಪಟುಗಳಿಂದ ವ್ಯಾಪಕ ವಿರೋಧ ವ್ಯಕ್ತವಾಗಿತ್ತು.

ಒಲಿಂಪಿಕ್ ಪದಕವಿಜೇತ ಕುಸ್ತಿಪಟು ಸಾಕ್ಷಿ ಮಲಿಕ್ ಪ್ರತಿಭಟನಾರ್ಥವಾಗಿ ನಿವೃತ್ತಿ ಘೋಷಿಸಿದ್ದರು. ಬಜರಂಗ್ ಪೂನಿಯಾ ಅವರು ತಮ್ಮ ಪದ್ಮಶ್ರೀ ಪ್ರಶಸ್ತಿಯನ್ನು ಹಿಂದಿರುಗಿಸಿ, ಕರ್ತವ್ಯಪಥದ ಪಾದಚಾರಿ ಮಾರ್ಗದ ಮೇಲೆ ಇಟ್ಟು ಬಂದಿದ್ದರು. ವಿನೇಶಾ ಫೋಗಾಟ್ ಅವರೂ ಅರ್ಜುನ ಮತ್ತು ಖೇಲ್‌ರತ್ನ ಪ್ರಶಸ್ತಿಗಳನ್ನು ಹಿಂದಿರುಗಿಸಿದ್ದರು.



ಹರಿಯಾಣದ ಜಾಜರ್‌ನಲ್ಲಿ ಬುಧವಾರ ಒಲಿಂಪಿಯನ್ ಕುಸ್ತಿಪಟು ಬಜರಂಗ್ ಪೂನಿಯಾ ಅವರೊಂದಿಗೆ ಕಾಂಗ್ರೆಸ್ ಧುರೀಣ ರಾಹುಲ್ ಗಾಂಧಿ ಅವರು ಕುಸ್ತಿ ತಾಲೀಮಿನಲ್ಲಿ ಭಾಗವಹಿಸಿದರು –ಪಿಟಿಐ ಚಿತ್ರ

ರಾಹುಲ್ ಗಾಂಧಿ, ಬಜರಂಗ್ ಭೇಟಿ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ ಪದಕವಿಜೇತ ಕುಸ್ತಿಪಟು ಬಜರಂಗ್ ಪೂನಿಯಾ ಅವರನ್ನು ಕಾಂಗ್ರೆಸ್ ಧುರೀಣ ರಾಹುಲ್ ಗಾಂಧಿ ಅವರು ಬುಧವಾರ ಭೇಟಿಯಾದರು.

ಹರಿಯಾಣದಲ್ಲಿರುವ ಬಜರಂಗ್ ಅವರನ್ನು ಭೇಟಿಯಾದ ರಾಹುಲ್ ಕೆಲಹೊತ್ತು ಮಾತುಕತೆ ನಡೆಸಿದರು.

‘ಅವರು (ರಾಹುಲ್) ನಮ್ಮ ದಿನ ನಿತ್ಯದ ಅಭ್ಯಾಸ ನೋಡಲು ಬಂದಿ ದ್ದರು. ನಮ್ಮೊಂದಿಗೆ ಕುಸ್ತಿ, ವ್ಯಾಯಾಮಗಳನ್ನೂ ಮಾಡಿದರು. ಒಬ್ಬ ಕುಸ್ತಿಪಟುವಿನ ದೈನಂದಿನ ಜೀವನದ ಬಗ್ಗೆ ತಿಳಿದುಕೊಳ್ಳಲು ಬಂದಿದ್ದರು’ ಎಂದು ಬಜರಂಗ್ ಸುದ್ದಿಗಾರರಿಗೆ ತಿಳಿಸಿದರು.

ಈ ಭೇಟಿಯ ನಂತರ ‘ಎಕ್ಸ್’ನಲ್ಲಿ ಸಂದೇಶ ಹಾಕಿರುವ ರಾಹುಲ್ ಗಾಂಧಿ, ‘ವರ್ಷಗಟ್ಟಲೇ ಅಪಾರ ಪರಿಶ್ರಮ, ಸಹನೆ ಮತ್ತು ಶಿಸ್ತಿನಿಂದ ಬೆವರು, ರಕ್ತ ಹರಿಸಿ ಆಕೆ ಅಥವಾ ಅವನು ತಮ್ಮ ದೇಶಕ್ಕಾಗಿ ಪದಕ ಗೆದ್ದು ತರುತ್ತಾರೆ. ನನ್ನದೊಂದೇ ಪ್ರಶ್ನೆ ಇದೆ. ಈ ಕ್ರೀಡಾಪಟುಗಳು ದೇಶದ ಪುತ್ರಿಯರು. ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಲು ಅಖಾಡಾ ಬಿಡಬೇಕಿದೆ. ನ್ಯಾಯಕ್ಕಾಗಿ ರಸ್ತೆಗಿಳಿದು ಹೋರಾಡುತ್ತಿದ್ದಾರೆ, ಬೇರೆಯವರು ತಮ್ಮ ಮಕ್ಕಳನ್ನು ಈ ದಾರಿಗೆ ಕಳಿಸಲು ಇಷ್ಟಪಡುವರೇ? ‘ಇವರೆಲ್ಲಾ ಮುಗ್ಧ, ನೇರ ಮತ್ತು ಸರಳ ರೈತಾಪಿ ಕುಟುಂಬದವರು. ಅವರು ಸಂಪೂರ್ಣ ಗೌರವದೊಂದಿಗೆ ತ್ರಿವರ್ಣ ಧ್ವಜದ ಸೇವೆ ಮಾಡಲು ಬಿಡೋಣ. ಭಾರತವನ್ನು ಹೆಮ್ಮೆಪಡುವಂತೆ ಮಾಡಲು ಅವರಿಗೆ ಅವಕಾಶ ಕೊಡೋಣ’ ಎಂದಿದ್ದಾರೆ.

‘ಟೈ’ ಪಂದ್ಯದಲ್ಲಿ ಜೈಪುರ್, ಡೆಲ್ಲಿ

ಚೆನ್ನೈ: ಜೈಪುರ ಪಿಂಕ್ ಪ್ಯಾಂಥರ್ಸ್ ಮತ್ತು ಡೆಲ್ಲಿ ದಬಾಂಗ್ ತಂಡಗಳ ನಡುವೆ ಬುಧವಾರ ಇಲ್ಲಿ ನಡೆದ ಪ್ರೊ ಕಬಡ್ಡಿ ಲೀಗ್ ಪಂದ್ಯ 32-32ರಲ್ಲಿ ರೋಚಕವಾಗಿ ‘ಟೈ’ ಆಯಿತು. ಜೈಪುರ ತಂಡ 28 ಪಾಯಿಂಟ್‌ಗಳೊಡನೆ ಎರಡನೇ ಸ್ಥಾನಕ್ಕೇರಿತು.

ಇನ್ನೊಂದು ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ 33-30 ಪಾಯಿಂಟ್‌ಗಳಿಂದ ತಮಿಳ್ ತಲೈವಾಸ್ ತಂಡವನ್ನು ಮಣಿಸಿತು.

ಮೊದಲ ದಿನ ಮೂರು ದಾಖಲೆ ● ಮಿಂಚಿದ ರಾಜ್ಯದ ಈಜುಪಟುಗಳು

ಹಿತೈಷಿ, ಚರಿತಾ, ಅನಿಶ್ ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಹಿತೈಷಿ ವಿ., ಚರಿತಾ ಫಣೀಂದ್ರನಾಥ್ ಮತ್ತು ಅನಿಶ್ ಅನಿರುದ್ಧ ಕೋರೆ ಅವರು ಬುಧವಾರ ಬಸವನಗುಡಿ ಈಜುಕೊಳದಲ್ಲಿ ಆರಂಭವಾದ 34ನೇ ದಕ್ಷಿಣ ವಲಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಕೂಟ ದಾಖಲೆಗಳನ್ನು ಸ್ಥಾಪಿಸಿದರು.

ಬಾಲಕಿಯರ ಒಂದನೇ ಗುಂಪಿನಲ್ಲಿ ಹಿತೈಷಿ 200 ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯನ್ನು 2ನಿ.52.69 ಸೆ.ಗಳಲ್ಲಿ ಮುಗಿಸಿ, ತೇಜಸ್ವಿನಿ (ಕರ್ನಾಟಕ) ಹೆಸರಿನಲ್ಲಿದ್ದ 2ನಿ.55.19 ಸೆ.ಗಳ ದಾಖಲೆ ಮುಳುಗಿಸಿದರು. ಎರಡನೇ ಗುಂಪಿನ 50 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಚರಿತಾ 28.48 ಸೆ.ಗಳಲ್ಲಿ ಅಂತರ ಕ್ರಮಿಸಿ ನೀನಾ ವೆಂಕಟೇಶ್ (ಕರ್ನಾಟಕ) 2020ರಲ್ಲಿ ಸ್ಥಾಪಿಸಿದ್ದ 28.71 ಸೆ.ಗಳ ದಾಖಲೆ ಮುರಿದರು.

ಬಾಲಕರ ಎರಡನೇ ಗುಂಪಿನಲ್ಲಿ ಅನಿಶ್ ಅನಿರುದ್ಧ ಕೋರೆ 100 ಮೀ. ಬಟರ್‌ಫ್ಲೈ ಸ್ಪರ್ಧೆಯನ್ನು 1ನಿ.00.95 ಸೆ.ಗಳಲ್ಲಿ ಪೂರೈಸಿ 12 ವರ್ಷಗಳ ಹಿಂದೆ ಪ್ರಸಿದ್ಧ ಕೃಷ್ಣ (ಕರ್ನಾಟಕ) ಹೆಸರಿನಲ್ಲಿದ್ದ ಹಳೆಯ ದಾಖಲೆ (1ನಿ.01.30ಸೆ.) ಮುರಿದರು.

ಫಲಿತಾಂಶಗಳು: (ಗೆದ್ದ ಕರ್ನಾಟಕ ಸ್ಪರ್ಧಿಗಳು): ಬಾಲಕರು (ಒಂದನೇ ಗುಂಪು): 50 ಮೀ. ಫ್ರೀಸ್ಟೈಲ್: ಚಿಂತನ್ ಎಸ್. ಶೆಟ್ಟಿ -1, ಅಲೈಸ್ಟರ್ ಸ್ಯಾಮುಯೆಲ್ ರೇಗೊ-2, ಕಾಲ: 24.54 ಸೆ.; 1,500 ಮೀ. ಫ್ರೀಸ್ಟೈಲ್: ಯಜತ್ ಅಯ್ಯಪ್ಪ ಕೆ.ಪಿ.-1, ರೇಣುಕಾಚಾರ್ಯ ಹೊದಮನಿ (ಕರ್ನಾಟಕ)-2, ಕಾಲ: 17ನಿ.19.24ಸೆ.; 100 ಮೀ. ಬ್ಯಾಕ್‌ಸ್ಟ್ರೋಕ್: ಕುಶಲ್ ಕೆ -1, ಸೂರ್ಯ ಜೆ.ಟಿ. -2; ಕಾಲ: 1ನಿ.02.23 ಸೆ.; 200 ಮೀ. ಬ್ರೆಸ್ಟ್‌ಸ್ಟ್ರೋಕ್: ಸೂರ್ಯ ಜೋಯಪ್ಪ ಒ.ಆರ್. -1, ಶ್ರೇಯಸ್ ಮಂಜುನಾಥ್ -2, ಕಾಲ: 2ನಿ.36.51ಸೆ.; 100 ಮೀ. ಬಟರ್‌ಫ್ಲೈ: ಚಿಂತನ್ ಎಸ್. ಶೆಟ್ಟಿ -1, ಸ್ವರೂಪ್ ಧನುಚೆ -2, ಕಾಲ: 58.44 ಸೆ.; 200 ಮೀ. ಮೆಡ್ಲೆ: ಸೂರ್ಯ ಜೋಯಪ್ಪ -1, ಸಾಹಿಲ್ ದಲಾಲ್ -2, ಕಾಲ: 2ನಿ.20.11ಸೆ; 4x100 ಮೀ. ಮೆಡ್ಲೆ: ಕರ್ನಾಟಕ (ಕುಶಲ್, ಶ್ರೇಯಸ್, ಚಿಂತನ್, ಅಲೈಸ್ಟರ್)-1, ಕಾಲ: 4ನಿ.13.90 ಸೆ.; 4x200 ಮೀ. ಫ್ರೀಸ್ಟೈಲ್ ರಿಲೇ: ಕರ್ನಾಟಕ (ಧೋನೀಶ್, ಚಿಂತನ್ ಶೆಟ್ಟಿ, ರೇಣುಕಾಚಾರ್ಯ, ಅಲೈಸ್ಟರ್ ಸ್ಯಾಮುಯೆಲ್ ರೇಗೊ)-1, ಕಾಲ: 8ನಿ.26.29ಸೆ.;

ಎರಡನೇ ಗುಂಪು: 50 ಮೀ. ಫ್ರೀಸ್ಟೈಲ್: ಸಾತ್ವಿಕ್ ನಾಯಕ್ ಸುಜೀರ್-1, ನಿಶಾಂತ್ ಜೆ. -3, ಕಾಲ: 26.71 ಸೆ.; 1,500 ಮೀ. ಫ್ರೀಸ್ಟೈಲ್: ಎಸ್.ಶರಣ್ -1, ಧ್ರುಪದ್ ರಾಮಕೃಷ್ಣ -2, ಕಾಲ:17.39.42 ಸೆ.; 100 ಮೀ. ಬ್ಯಾಕ್‌ಸ್ಟ್ರೋಕ್: ಸಮರ್ಥ ಗೌಡ ಬಿ.ಎಸ್. -1, ಅಭಿಮನ್ಯು ನಂಬಿಯಾರ್ -2, ಕಾಲ: 1ನಿ.05.01 ಸೆ.; 200 ಮೀ. ಬ್ರೆಸ್ಟ್‌ಸ್ಟ್ರೋಕ್: ಡೇನಿಯಲ್ ಪೌಲ್ ಜೆ. -1, ಯಶ್ ಎಚ್.ಪಾಲ್ -2 (ಕಾಲ: 2ನಿ.36.50ಸೆ.); 100 ಮೀ. ಬಟರ್‌ಫ್ಲೈ: ಅನಿಶ್ ಅನಿರುದ್ಧ ಕೋರೆ -1, ದಕ್ಷ್ ಮಟ್ಟಾ -2, ಕಾಲ: 1ನಿ.00.95ಸೆ. ಕೂಟ ದಾಖಲೆ, ಹಳೆಯದು: ಪ್ರಸಿದ್ಧಕೃಷ್ಣ ಪಿ.ಎ., 1ನಿ.01.30ಸೆ.; 200 ಮೀ. ಮೆಡ್ಲೆ: ದಕ್ಷ್ ಮಟ್ಟ-1, ಡೇನಿಯಲ್ ಪೌಲ್ -2, ಕಾಲ: 2ನಿ.23.28ಸೆ.; 4x100 ಮೀ. ಮೆಡ್ಲೆ ರಿಲೇ: ಕರ್ನಾಟಕ (ಅಭಿಮನ್ಯು, ದಕ್ಷ್, ಅನಿಶ್, ಸಾತ್ವಿಕ್)-1, ಕಾಲ: 4ನಿ.25.86 ಸೆ.; 4x200 ಮೀ. ಫ್ರೀಸ್ಟೈಲ್ ರಿಲೇ: ಕರ್ನಾಟಕ (ಶರಣ್ ಎಸ್, ರಿಶಿತ್ ಗಗನ್, ಅಭಿಮನ್ಯು, ಸಾತ್ವಿಕ್ ನಾಯಕ್)-1, ಕಾಲ: 8ನಿ.44.41ಸೆ.;

ಬಾಲಕಿಯರು: ಗುಂಪು 1: 50 ಮೀ. ಫ್ರೀಸ್ಟೈಲ್: ಇಂಚರಾ ಫಣೀಂದ್ರನಾಥ್-1, ಸಾಕ್ಷಿ ಎಸ್.ದ್ಯಾಮಣ್ಣವರ -2, ಕಾಲ: 28.95ಸೆ.; 400 ಮೀ. ಫ್ರೀಸ್ಟೈಲ್: ಬಿ.ಎಸ್. ಜನ್ಯಾ-1, ಇ.ಎಸ್.ಸಮನ್ವಿ-2, ಕಾಲ: 4ನಿ.52.83 ಸೆ.; 100 ಮೀ. ಬ್ಯಾಕ್‌ಸ್ಟ್ರೋಕ್: ಸಿದ್ಧಿ ಜಿ.ಶಾ -1, ನೈಶಾ ಶೆಟ್ಟಿ-2 (ಕಾಲ:1ನಿ.10.22ಸೆ.); 200 ಮೀ. ಬ್ರೆಸ್ಟ್‌ಸ್ಟ್ರೋಕ್: ಹಿತೈಷಿ -1, ಸಮನ್ವಿ ಇ.ಎಸ್. -3, ಕಾಲ: 2ನಿ.52.69 ಸೆ., ನೂತನ ದಾಖಲೆ, ಹಳೆಯದು: ತೇಜಸ್ವಿನಿ, 2ನಿ.55.19ಸೆ.; 100 ಮೀ. ಬಟರ್‌ಫ್ಲೈ: ನೈಶಾ ಶೆಟ್ಟಿ -1, ಜನ್ಯಾ ಬಿ.ಎಸ್. -2, ಕಾಲ: 1ನಿ.06.70ಸೆ; 200 ಮೀ. ಮೆಡ್ಲೆ: ನೈಶಾ ಶೆಟ್ಟಿ-1, ಹಿತೈಷಿ ವಿ. -2, ಕಾಲ: 2ನಿ.34.85 ಸೆ.; 4x100 ಮೀ. ಮೆಡ್ಲೆ ರಿಲೇ: ಕರ್ನಾಟಕ (ಸಿದ್ಧಿ, ಸಮನ್ವಿ, ನೈಶಾ, ಜೆ.ಪೂಜಾ)-1, ಕಾಲ:4ನಿ.51.22 ಸೆ.; 4x200 ಮೀ. ಫ್ರೀಸ್ಟೈಲ್ ರಿಲೇ: ಕರ್ನಾಟಕ (ಜೆ.ಪೂಜಾ, ಜನ್ಯಾ, ರಿಶಿಕಾ, ಸಮನ್ವಿ)-1, ಕಾಲ: 9ನಿ.30.27ಸೆ.;

ಎರಡನೇ ಗುಂಪು: 50 ಮೀ. ಫ್ರೀಸ್ಟೈಲ್: ಚರಿತಾ ಫಣೀಂದ್ರನಾಥ್ -1, ತಿಸ್ಯಾ ಸೋನಾರ್ -2, ಕಾಲ: 28.48ಸೆ., ಕೂಟ ದಾಖಲೆ, ಹಳೆಯದು:28.71ಸೆ.; 400 ಮೀ. ಫ್ರೀಸ್ಟೈಲ್: ಧನ್ಯಾ ನಟರಾಜ ನಾಯಕ್-2 (ಕಾಲ: 5ನಿ.07.56ಸೆ.), ಹಿತಶ್ರೀ ಎನ್. -2; 100 ಮೀ. ಬ್ಯಾಕ್‌ಸ್ಟ್ರೋಕ್: ಎಂ.ಎನ್.ತಾನ್ಯಾ -1 (ಕಾಲ: 1ನಿ.10.46ಸೆ.); 200 ಮೀ. ಬ್ರೆಸ್ಟ್‌ಸ್ಟ್ರೋಕ್: ಗಗನಾ ಸಿ.ಎಂ. -2, ಹಿಯಾ ಮನ್‌ಚಂದಾ -3, ಕಾಲ: 3ನಿ.00.31ಸೆ.; ಅಂಜಲಿ ಹೊಸಕೆರೆ -1, ತನಿಶಾ ವಿನಯ್ -2, ಕಾಲ: 1ನಿ:08.85 ಸೆ; 4x100 ಮೀ. ಮೆಡ್ಲೆ ರಿಲೇ: ಕರ್ನಾಟಕ (ತಾನ್ಯಾ, ತಿಸ್ಯಾ, ಅಂಜುಲಿ, ಚರಿತಾ)-1, ಕಾಲ: 4ನಿ.47.20 ಸೆ.; 200 ಮೀ. ಮೆಡ್ಲೆ: ತಿಸ್ಯಾ ಸೋನಾರ್ -1, ತ್ರಿಶಾ ಸಿಂಧು ಎಸ್.-2, ಕಾಲ: 2ನಿ.40.44ಸೆ.; 4x200 ಮೀ. ಫ್ರೀಸ್ಟೈಲ್ ರಿಲೇ: ಕರ್ನಾಟಕ (ಶಮನಿ ಗೌಡ, ಹಿಯಾ, ಸ್ಪರ್ಶಾ, ತ್ರಿಶಾ ಸಿಂಧು ಎಸ್)-1, ಕಾಲ: 9ನಿ.45.97 ಸೆ.;

ಮಹಿಳೆಯರ 200 ಮೀ ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ಕೂಟ ದಾಖಲೆ ನಿರ್ಮಿಸಿದ ಕರ್ನಾಟಕದ ಹಿತೈಷಿ ವಿ. –ಪ್ರಜಾವಾಣಿ ಚಿತ್ರ/ ಎಸ್.ಕೆ. ದಿನೇಶ್